(SRI B. D. JATTI)

by the Legislators as the stand which it is not possible for me to change. There the matter stands. That is the position.

Sri G. SIVAPPA (Chitradurga).—I want one clarification about this.

Mr. SPEAKER.—That is not permissable under the rules.

Sri M. C. NARASIMHAN.—Sir, I and Sri Venkatai Gowda had given notice under rule 63 calling attention to a matter of urgent public importance.

Mr. SPEAKER.—That is receiving my attention.

BUDGET ESTIMATES FOR 1960-61.—GENERAL DISCUSSION.

(Debate continued)

†ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).—ಅಧ್ಯಕ್ಷರೇ, 1960-61 ನೆಯ ಸಾಲಿನ ಆಯವ್ಯಯ ಅಂದಾಜನ್ನು ಹಣಕಾಸಿನ ಸಚಿವರು ಈ ಸಭೆಯ ಮುಂದೆ ತಂದ ಸಂದರ್ಭದಲ್ಲಿ ಅವರು ಮಾತನಾಡುತ್ತಾ "ನಾನು ಈಗ ಮಂಡಿಸಿರತಕ್ಕ ಈ ಆಯವ್ಯಯದ ಅಂದಾಜು ಪಟ್ಟಿ ಐದನೆಯದು" ಎಂದು ಹೇಳಿ ಪ್ರಸ್ತಾಪ ಮಾಡಿದ್ದಾರೆ. ಹಾಗೆ ಕಳೆದ ಐದು ಆಯವ್ಯಯದ ಅಂದಾಜುಗಳನ್ನು ಅವರು ಮಂಡಿಸಿದಂತಹ ಕಾಲದಲ್ಲಿ ಈ ಮಾನ್ಯಸಭೆ ಸರ್ಕಾರದ ಆಡಳಿತದಲ್ಲಿ ಏನೇನು ಲೋಪದೋಷಗಳಿವೆ, ಹಾಗೂ ಸರ್ಕಾರದವರು ವೆಚ್ಚಮಾಡತಕ್ಕ ಹಣಕಾಸು ಸಾಮಾನ್ಯ ಜನರ ಬಾಗಿಲಿಗೆ ಹೋಗಿ ಸೇರುತ್ತಾ ಇಲ್ಲ, ಕೇವಲ ಇಷ್ಟೊಂದು ದೊಡ್ಡ ದೊಡ್ಡ ಯೋಜನೆಗಳಾದರೂ ಕೂಡ ಆ ಯೋಜನೆಯ ಪ್ರತಿಫಲ ಸಾಮಾನ್ಯ ಜನಗಳಿಗೆ ದೊರೆಯುತ್ತಿಲ್ಲವೆಂದು ಹೇಳಿ ಕಳೆದ ಐದು ವರ್ಷಗಳಿಂದ ಅರ್ಥಸಚಿವರಾಗಿರತಕ್ಕ ಶ್ರೀಮಾನ್ ಮರಿಯಪ್ಪನವರ ಮುಂದೆ ಕೊಟ್ಟ ರಚನಾತ್ಮಕವಾದ ಸಲಹೆಗಳನ್ನು ಮಾನ್ಯ ಸಚಿವರು ಗಮನದಲ್ಲಿಟ್ಟುಕೊಂಡು, ಯಾವ ಯಾವ ರೀತಿಯಲ್ಲಿ ಹಿಂದಿನ ಆಯವ್ಯಯಗಳಲ್ಲಿ ಲೋಪದೋಷಗಳಿವೆ ಎಂಬುದಾಗಿ ಹೇಳಿತ್ತೋ ಅವನ್ನೆಲ್ಲಾ ಸರಿಪಡಿಸುವುದರಲ್ಲಿ ಮತ್ತು ಅಂತಹ ಲೋಪದೋಷಗಳನ್ನೆಲ್ಲಾ ತಿದ್ದುವುದರಲ್ಲಿ ಉದ್ಯುಕ್ತರಾಗಿದ್ದಿದ್ದರೆ, ಈ ವರ್ಷದ ಆಯವ್ಯಯದ ಮೇಲೆ ಈ ಸಭೆಯಲ್ಲಿ ಇಷ್ಟೊಂದು ಟೀಕೆ ಟಿಪ್ಪಣಿಗಳು ಬರುತ್ತಿರಲಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಹಾಗೂ ಈ ಸಭೆಯ ಮಾನ್ಯ ಸದಸ್ಯರಾದ ಶ್ರೀಮಾನ್ ಆರ್ಮುಗಂ ಅವರು ಇದು ಒಂದು ಪಕ್ಷದ ಟೀಕೆಯಲ್ಲ; ಈ ಸಭೆಯ ಎಲ್ಲಾ ಪಕ್ಷದ ಮಾನ್ಯ ಸದಸ್ಯರೂ ಕೂಡ ಈ ಆಡಳಿತ ವಿಷಯದಲ್ಲಿ ಟೀಕೆ ಮಾಡಿದ್ದಾರೆಂದು ಹೇಳಿದರು. ಅಂದ ಮೇಲೆ ಎಲ್ಲರೂ ಸಾಮಾನ್ಯವಾಗಿ ಈಗಿನ ಸರ್ಕಾರದ ಆಡಳಿತದ ಮೇಲೆ ಟೀಕೆ ಮಾಡಿದ್ದಾರೆ, ಆರೋಪಣೆ ಮಾಡಿದ್ದಾರೆಂದು ಹೇಳಬಹುದು. ಅದೂ ಅಲ್ಲದೆ ಈ ಸಭೆಯ ಮಹಿಳಾ ಸದಸ್ಯರಲ್ಲಿ ಒಬ್ಬರಾದ ಶ್ರೀಮತಿ ರತ್ನಮ್ಮ ಮಾಧವರಾವ್ ಅವರೂ ಸಹ ತಮ್ಮ ಭಾಷಣದಲ್ಲಿ ಈ ಆಡಳಿತದಲ್ಲಿ ಲೋಪ ಇದೆ. ಮಾನ್ಯ ಅರ್ಥ ಸಚಿವರು ರಾಜೀನಾಮೆ ಕೊಡಬೇಕು ಎಂಬುದಾಗಿ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ನಾನು ಸಂಸ್ಕೃತಿಗೆ ತಕ್ಕಮಟ್ಟಿಗೆ ಹೊಂದಿಕೊಂಡಿರುವವನು. ಯಾರೇ ಆಗಲೀ ಇಂತಹ ವಿಷಯಗಳನ್ನು ಪ್ರಸ್ತಾಪ ಮಾಡುವಾಗ ಅದಕ್ಕೆ ತಕ್ಕ ಗೌರವ ಕೊಡಬೇಕು. ಅದರಲ್ಲೂ ನಾನು ಮುತ್ತೈದೆ ಮಾತಿಗೆ ಬೆಲೆ ಕೊಡುವವನು.

ಒಬ್ಬ ಸದಸ್ಯರು.—ಸುಮಂಗಲಿಯರಿಗೆ ಮಂಗಳವಾಗಲಿ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಹಿಂದೆ ಯಾವುದೋ ಸಂದರ್ಭದಲ್ಲಿ ರಾಜ್ಯದ ಮೇಲೆ ದಾಂಧಲೆ, ಅನಾಹುತವಾದಾಗ, ರಾಜರ ಪತ್ನಿ ನನಗೇನೋ ಬಲಗಣ್ಣು ಅದುರುತ್ತಿದೆ, ಏನೋ ಅಮಂಗಲಸೂಚನೆ ಕಾಣುತ್ತಿದೆ. ಯುದ್ಧಕ್ಕೆ ಹೋಗಬೇಡಿ, ಇಲ್ಲದಿದ್ದರೆ ನಾನು ಸಹ ತಮ್ಮ ಹಿಂದೆಯೇ ಬರುತ್ತೇನೆ ಎಂದು ಹೇಳಿರುವ ಅನೇಕ ಚಿತ್ರಗಳನ್ನು ನೋಡಿದ್ದೇನೆ. ಆದ್ದರಿಂದ ಈಗಲೂ ಕೂಡ ಮುತ್ತೈದೆ ಮಾತಿಗೆ ಬೆಲೆ ಕೊಡಬೇಕು. ಈ ಸಭೆಯ ಹೆಣ್ಣುಮಗು ಈ ಆಡಳಿತದಲ್ಲಿ ಲೋಪವಿದೆ, ಅರ್ಥಸಚಿವರ ರಾಜೀನಾಮೆ ಕೊಡಬೇಕು ಎಂದು ಹೇಳಿದರೆ ಅದಕ್ಕೆ ಬೆಲೆ ಕೊಡುವುದು ಮುಖ್ಯ ಕರ್ತವ್ಯವೆಂಬುದನ್ನು ತಿಳಿದುಕೊಂಡು ಹೇಳುತ್ತಿದ್ದೇನೆ. ಈ ಮಾನ್ಯ ಸಭೆಯ ಸದಸ್ಯರಾದ ಶ್ರೀಮಾನ್ ಮುಕ್ಕಣ್ಣಪ್ಪನವರು ಈ ದೇಶವನ್ನು ಎರಡು ಭಾಗವಾಗಿ ಮಾಡಬೇಕೆಂದು ಹೇಳಿದರು. ಶ್ರೀಮತಿ ರತ್ನಮ್ಮ ಮಾಧವರಾವ್ ಅವರು ಮಾತನಾಡಿದ್ದನ್ನೂ, ಶ್ರೀ ಮುಕ್ಕಣ್ಣಪ್ಪನವರು ಮಾತನಾಡಿದುದನ್ನೂ ನಾನು ಹೋಲಿಸಿ ನೋಡಿದರೆ, ತಪ್ಪು ಮಾಡಿದ ಮಂತ್ರಿಗಳದೇ ಬೇರೆ ರಾಜ್ಯವಾಗಬೇಕೋ ಅಥವಾ ಈಗ ಹೊಸದಾಗಿ ಸೇರಿರತಕ್ಕ ರಾಜ್ಯಗಳದೇ ಬೇರೆ ರಾಜ್ಯವಾಗಬೇಕೋ, ಅಥವಾ ಹಳೆಯ ಮೈಸೂರಿನದೇ ಬೇರೆ ರಾಜ್ಯವಾಗಬೇಕೋ ಎಂಬುದು ನನಗೆ ಸಂಪೂರ್ಣವಾಗಿ ಅರಿವಾಗಲಿಲ್ಲ. ಈಗಿನ ಆಡಳಿತಕ್ರಮವನ್ನು ನೋಡಿದರೆ ಒಂದುವೇಳೆ ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದ ಹಾಗೆ ಹೊರಗಡೆಯಿಂದ ಬಂದಿರತಕ್ಕವರು ದೇಶದ ಆಡಳಿತವನ್ನು ಪೂರ್ತಿಯಾಗಿ ತಮ್ಮ ಕೈಯಲ್ಲಿಟ್ಟುಕೊಂಡು ನಡೆಸುತ್ತಿದ್ದಾರೆಂದು ನಾನು ಭಾವಿಸಿದ್ದೇನೆ. ಒಂದು ವಿಷಯವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬೇಕೆಂದಿದ್ದೇನೆ. ಈಗಿನ ಆಡಳಿತ ಪಕ್ಷ ಮೊದಲಿನಿಂದ ಪ್ರಜಾಪ್ರಭುತ್ವ ತತ್ವದ ಮೇಲೆ ಮಹಾತ್ಮ ಗಾಂಧೀಜಿಯವರ ಆಶೀರ್ವಾದದಿಂದ ರಚಿತವಾಗಿರತಕ್ಕ ಸರ್ಕಾರ. ಹಾಗೂ ಆಡಳಿತಪಕ್ಷ ಚುನಾವಣೆಯ ಕಾಲದಲ್ಲಿ ಈ ಕೋಮುವಾರು ಭಾವನೆಯಿಂದ ದೂರವಾಗಬೇಕು, ಜಾತ್ಯತೀತ ರಾಷ್ಟ್ರವಾಗಬೇಕು ಎನ್ನುವ ತತ್ವವನ್ನು ಎಲ್ಲಾ ಗೋಡೆಗಳ ಮೇಲೂ ಅಂಟಿಸಿಕೊಂಡು ಬಂದಿದ್ದಾರೆ. ಅಂತಹ ಒಂದು ಧ್ಯೇಯದಿಂದ ಆರಿಸಿ ಬಂದವರು ಒಂದೇ ಮನಸ್ಸಿನಿಂದ ಪಕ್ಷಪಾತವಿಲ್ಲದೆ ರಾಜ್ಯಾಡಳಿತವನ್ನು ನಡೆಸುತ್ತಿಲ್ಲವೆಂದು ಹೇಳಿದರೆ ಅದೇನೂ ತಪ್ಪಾಗುವುದಿಲ್ಲ. ಹಾಗೂ ಈ ಸಂದರ್ಭದಲ್ಲಿ ಒಂದು ಸಣ್ಣ ಕಥೆ ಜ್ಞಾಪಕಕ್ಕೆ ಬರುತ್ತದೆ. ಯಾರೋ ಒಬ್ಬ ಗುರುಗಳು ಬಹಳ ದಿವಸಗಳಾದ ಮೇಲೆ ಶಿಷ್ಯನ ಮನೆಗೆ ಹೋದರು. ಗುರುಗಳು ಬಹಳ ದಿವಸಗಳನಂತರ ನನ್ನ ಮನೆಗೆ ಬಂದರಲ್ಲಾ ಎಂದು ಶಿಷ್ಯ ಗುರುವಿನ

ಮೇಲಿನ ಪ್ರೇಮದಿಂದ ತನ್ನ ಹತ್ತಿರವಿದ್ದಂತಹ ಕಂಬಳಿ, ದುಪ್ಪಟಿಯನ್ನು ಕೊಟ್ಟ. ಅದನ್ನು ತೆಗೆದುಕೊಂಡು ಗುರುಗಳು ಅತ್ತಿತ್ತ ನೋಡಿ ಹಾಸಿಕೊಳ್ಳುವುದಕ್ಕೆ ಕಂಬಳಿಯಾಯಿತು ; ಹೊದ್ದಿಕೊಳ್ಳುವುದಕ್ಕೆ ದುಪಟಿಯಾಯಿತು ಎಂದು ಹೇಳಿದರು. ಅದನ್ನು ಕೇಳಿ ಶಿಷ್ಯನಿಗೆ ಸ್ವಲ್ಪ ಅನುಮಾನವಾಯಿತು. ಹೀಗೆಯೇ ಒಂದು ದಿವಸ ಗುರುಗಳು ಕುದುರೆ ಸವಾರಿಗೆ ಹೋದಾಗ ಶಿಷ್ಯನೂ ಸಹ ಜೊತೆಯಲ್ಲಿ ಹೋದ. ಈ ಚಮತ್ಕಾರವನ್ನು ತಿಳಿದ ಶಿಷ್ಯ ತನಗೂ ಕುದುರೆ ಸವಾರಿಗಾಗಿ ಆ ಕುದುರೆ ಬೇಕೆಂದು ಗುರುಗಳನ್ನು ಕೇಳಿದಾಗ ಗುರುಗಳು ನನ್ನ ಕುದುರೆ ನನಗೇ ಇರಲಿ, ನಿನ್ನ ಕಂಬಳಿ, ದುಪ್ಪಟಿ ನೀನೇ ತೆಗೆದುಕೋ ಎಂದು ಹೇಳಿ ಹೊರಟುಹೋದರು. ಎತ್ತು ಏರಿಗೆ ಎಳೆಯಿತು ಕೋಣ ನೀರಿಗೆ ಎಳೆಯಿತು ಎಂದು ಹೇಳಿದ ಹಾಗೆ ಇದು ಆಯಿತು. ಗುರು-ಶಿಷ್ಯರ ಬಾಂಧವ್ಯ ಒಬ್ಬರಿಗೊಬ್ಬರಿಗೆ ಚೆನ್ನಾಗಿ ಅರಿಯದೇ ಇದ್ದುದೇ ಇದಕ್ಕೆ ಕಾರಣವೆಂದು ಹೇಳಬಹುದು. ಹಾಗೆ ದೇಶದ ಹಣಕಾಸಿನ ಸಚಿವರು ಆ ಕೋಮಿಗೆ ಅನುಕೂಲವಾಗಬೇಕು, ಈ ಕೋಮಿಗೆ ಅನುಕೂಲವಾಗಬೇಕು ಎಂದು ಏನಾದರೂ ಯೋಚನೆಮಾಡಿದ್ದರೆ ಅದು ಶುದ್ಧ ತಪ್ಪು. ಮಂತ್ರಿಮಂಡಲದಲ್ಲಿ ಯಾರೇ ಆಗಲೀ, ಅಥವಾ ನಾವು ಯಾರೇ ಆಗಲೀ ಈ ಜಾತಿಯವರು, ಆ ಜಾತಿಯವರು ಎಂದು ಆ ಜಾತಿಯವರಿಗೆ ಅನುಕೂಲವಾಗಬೇಕು, ಈ ಜಾತಿಯವರಿಗೆ ಅನುಕೂಲವಾಗಬೇಕು ಎಂದು ಏನಾದರೂ ಯೋಚನೆ ಮಾಡಿದರೆ, ಆಗ ನಮ್ಮ ಸಂಸ್ಕೃತಿಯನ್ನೇ ಮರೆತಂತಾಗುತ್ತದೆ. ಇಡಿಯ ದೇಶದಲ್ಲಿ ಎಲ್ಲೇ ಕ್ಷಾಮವಿರಲಿ ಆ ಒಂದು ಕೊರತೆಗೆ ನಾವು ನೆರವಾಗುವುದೇ ನಮ್ಮ ಸಂಸ್ಕೃತಿಯ ತಿರುಳು. ಅಂತಹ ಸಂದರ್ಭದಲ್ಲಿ ಎಷ್ಟೇ ಖರ್ಚಾಗಲಿ, ಏನಾದರೂ ಲೋಪದೋಷಗಳುಂಟಾಗಿದ್ದರೆ ಅಂತಹ ತಪ್ಪುಗಳನ್ನು ತಿದ್ದಿಕೊಂಡು ನಮ್ಮ ಸಂಸ್ಕೃತಿಗೆ ಹೊಂದಿಕೊಳ್ಳಬೇಕೆಂದು ನಾನು ಹೇಳಿದರೆ ಸಾಕು ಎಂದು ನನಗನ್ನಿಸುತ್ತದೆ. ಹಾಗೆಯೇ ಇನ್ನೊಂದು ಪ್ರಶ್ನೆ ಬಂತು. ಶ್ರೀಮತಿ ರತ್ನಮ್ಮ ಮಾಧವರಾವ್ ಅವರು ಆಡಳಿತದಲ್ಲಿ ಲೋಪ ಇದೆ, ಅರ್ಥಸಚಿವರು ರಾಜೀನಾಮೆ ಕೊಡಬೇಕು ಎಂದು ಹೇಳಿದ ಹಾಗೆ ಶ್ರೀಮಾನ್ ಮುಕ್ಕಣ್ಣಪ್ಪನವರು ಮಂತ್ರಿಗಳಿಗೆ ಯಾವ ರಾಜ್ಯ ಮಾಡಬೇಕು, ತಪ್ಪು ಮಾಡಿದವರಿಗೇ ಬೇರೆ ರಾಜ್ಯವನ್ನೇ ಮಾಡಿದರೆ ಏನಾದರೂ ಸರಿಹೋಗುತ್ತೋ ಏನೋ ಎಂದು ಹೇಳಿದರು. ಇವರು ಹಳೆಯ ಮೈಸೂರಿನವರು ಆದ್ದರಿಂದ ದೇಶದ ಆಡಳಿತದೃಷ್ಟಿ ಹೇಗಿರಬೇಕು ಎಂಬುದಕ್ಕೆ ಸಲಹೆಗಳನ್ನು ಮೊದಲೇ ಕೊಟ್ಟಿದ್ದರೆ ಚೆನ್ನಾಗಿತ್ತು.

ಇನ್ನೊಂದು ವಿಷಯ. ಹಳೆಯ ಮೈಸೂರಿನ ಮಂತ್ರಿಗಳಾದ ಶ್ರೀಮಾನ್ ಸುಬ್ರಹ್ಮಣ್ಯ ಅವರು ವಯೋವೃದ್ಧರು. ಅವರ ವಿಷಯದಲ್ಲಿ ನಮಗೆ ಪೂಜ್ಯತೆ ಇದೆ. ಆದರೆ ಅವರ ಈಗಿನ ವಯಸ್ಸು ಸ್ವಲ್ಪ ಹಿರಿಯರು ಗಾದೆ ಹೇಳುವ ಹಾಗೆ "ಅರುಳೋ ಮರುಳೋ" ಎಂಬಂತಿದೆ. ಅಂತಹ ವಯಸ್ಸಿನಲ್ಲಿ ದೇವರು ಅವರಿಗೆ ಒಳ್ಳೆಯ ಬುದ್ಧಿಯನ್ನು ಕೊಡಲಿ ಎಂದು ನಾನು ಹಾರೈಸುತ್ತೇನೆ. ಏಕೆಂದರೆ ಅವರು ಮಹಾತ್ಮ ಗಾಂಧಿಜೀಯವರ ಹೆಸರಿನಲ್ಲಿ ಗಾಂಧೀತತ್ವಕ್ಕನುಸಾರವಾಗಿ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿರುವವರಾಗಿದ್ದಾರೆ. ಮಹಾತ್ಮ ಗಾಂಧೀಜಿಯವರು ಯಾವ ರೀತಿ ಮೊದಲಿನಿಂದಲೂ ನಮ್ಮ ದೇಶ ಗ್ರಾಮರಾಜ್ಯವಾಗಬೇಕು, ದೇಶದ ಜನ ತಂತಮ್ಮ ಸ್ಥಳೀಯ ಆಡಳಿತವನ್ನು ಸುಭದ್ರವಾಗಿ ನಡೆಸತಕ್ಕ ವ್ಯವಸ್ಥೆಯನ್ನು ಆಯಾಸ್ಥಳದಲ್ಲಿಯೇ ಮಾಡಿಕೊಳ್ಳಬೇಕೆಂದು ಏನು ಹೇಳುತ್ತಿದ್ದರೋ ಹಾಗೆಯೇ ಅಂತಹ ರಾಜ್ಯವನ್ನು ಕಟ್ಟಬೇಕು, ಗ್ರಾಮಪಂಚಾಯಿತಿಗಳ ಮೂಲಕ ದೇಶದಲ್ಲಿ ಸುಖೀರಾಜ್ಯವನ್ನು ಸ್ಥಾಪಿಸಬೇಕೆಂದು ಇವರೂ ಸಹ ನಿರ್ಧಾರಮಾಡಿ ಒಂದು ತೀರ್ಮಾನವನ್ನು ಈಗಾಗಲೇ ತೆಗೆದುಕೊಂಡಿದ್ದಾರೆ. ಅಂತಹವರಿಗೆ ನನ್ನ ಅಭಿನಂದನೆಯನ್ನರ್ಪಿಸುತ್ತೇನೆ. ಇಂತಹ ಸಂದರ್ಭದಲ್ಲಿ ಆಡಳಿತದಲ್ಲಿರತಕ್ಕ ನ್ಯೂನತೆಗಳನ್ನು ತಮ್ಮ ಮೂಲಕ ಅವರ ಗಮನಕ್ಕೆ ತಂದರೆ ಅದು ರಚನಾತ್ಮಕವಾದ ಸಲಹೆಯೆಂದು ಭಾವಿಸಿ ಅವುಗಳನ್ನು ಸರಿಪಡಿಸುತ್ತಾರೆಂದು ನಾನು ತಿಳಿದಿದ್ದೇನೆ. ಮೊದಲನೆಯದಾಗಿ ಗ್ರಾಮಪಂಚಾಯಿತಿಗಳ ವಿಂಗಡಣೆಯ ಕಾಲದಲ್ಲಿ ಒಂದು ರಾಜ್ಯಪತ್ರ ಹೊರಟಮೇಲೆ, ಆದರಲ್ಲಿ ಏನಾದರೂ ಲೋಪದೋಷಗಳಿದ್ದರೆ ಅಬ್‌ಜಕ್ಷನ್ಸ್ ಈಗಲೇ ಕರೆಯಬೇಕು ಎಂದು ಆಜ್ಞೆ ಮಾಡಿದರು.

ಹಾಗೆ Objectionsಗಳನ್ನು ಕರೆಯಲಾಗಿತ್ತು. ಆ Objectionಗಳಿಗೆ ರಿಪೋರ್ಟ್ ಕಳುಹಿಸತಕ್ಕವರು ಯಾರಾಗಿದ್ದರೆಂದರೆ—ಅವರು ಸರ್ಕಾರದಿಂದ ಸಂಬಳ ಪಡೆಯತಕ್ಕಂಥ ಅಧಿಕಾರಿಗಳಾಗಿದ್ದರು. ಹಾಗೆ Objectionಗಳನ್ನು ಕರೆದ ನಂತರ ಆ ಅಧಿಕಾರಿಗಳು ಅವರು ವಿಂಗಡಿಸಿರತಕ್ಕ ಹಳ್ಳಿಗಳ ಗ್ರೂಪಿನ ಬಗ್ಗೆ ಏನಾದರೂ ತಪ್ಪುಗಳಿವೆಯೋ ಏನೋ ಎಂದು ಹೇಳಿ ಆಯಾಯ ಗ್ರೂಪಿಗೆ ಸಂಬಂಧಪಟ್ಟ ಹಳ್ಳಿ ಜನರನ್ನು ಅವರು ವಿಚಾರಿಸಿದರು. ಹಾಗೆ ಆ ಹಳ್ಳೀ ಜನರ ಅಭಿಪ್ರಾಯಗಳನ್ನು ತಿಳಿದುಕೊಂಡಮೇಲೆ ಆ ಸ್ಥಳೀಯ ಅಧಿಕಾರಿಗಳು ಸರ್ಕಾರಕ್ಕೆ ಒಂದು ಪಟ್ಟಿಯನ್ನು ಕಳುಹಿಸಿದರು. ಆಗ ನಾವು ಆ ಪಟ್ಟಿಯ ಪ್ರಕಾರ ಸರ್ಕಾರವು ತೀರ್ಮಾನ ತೆಗೆದುಕೊಳ್ಳಬಹುದೆಂದು ತಿಳಿದುಕೊಂಡಿದ್ದೆವು. ಆದರೆ ಸರ್ಕಾರದವರು ಅಲ್ಲಿಗೇ ತೃಪ್ತರಾಗಲಿಲ್ಲ. ಆ ಗ್ರೂಪುಗಳ ಬಗ್ಗೆ ಇನ್ನೂ ಏನಾದರೂ ತಪ್ಪು-ನೆಪ್ಪುಗಳಿರಬಹುದು. ಅದಕ್ಕಾಗಿ ಆಯಾ ಗ್ರೂಪು ಗ್ರಾಮಗಳ ಮುಖಂಡರನ್ನೂ ಮತ್ತು ಆ ಪ್ರದೇಶಕ್ಕೆ ಸಂಬಂಧಪಟ್ಟ ಶಾಸನ ಸಭಾ ಸದಸ್ಯರುಗಳನ್ನೂ ಕೇಳಿದ ನಂತರ ಆಖೈರು ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಸರ್ಕಾರದವರು ಹೇಳಿದರು. ಒಂದಾವರ್ತಿ ಇದಕ್ಕೆ ಸಂಬಂಧಪಟ್ಟ ಸಚಿವರು ಮಂಡ್ಯಕ್ಕೆ ದಯಮಾಡಿಸಿದ್ದ ಕಾಲದಲ್ಲಿ ನಾನೂ ಮತ್ತು ಇತರ ಕೆಲವು ಮುಖಂಡರೂ ಮಂತ್ರಿಗಳನ್ನು ಒಂದು ಕಛೇರಿಯಲ್ಲಿ ಹೋಗಿ ನೋಡಿ ಈ ವಿಚಾರದಲ್ಲಿ ಅವರಿಗೆ ಪ್ರಾರ್ಥನೆ ಮಾಡಿಕೊಂಡೆವು. ಆಗ ನಾವು ಮಂತ್ರಿಗಳಿಗೆ ಇಂಥ ಸಣ್ಣ-ಪುಟ್ಟ ಗ್ರಾಮಗಳ ಚುನಾವಣೆಯಲ್ಲಿ ದೊಡ್ಡ ರಾಜಕೀಯದ ವ್ಯಕ್ತಿಗಳು ಪ್ರವೇಶಮಾಡದೆ ಇರುವುದು ಒಳ್ಳೆಯದೆಂದು ಅರಿಕೆಮಾಡಿಕೊಂಡೆವು. ನಾವು ಹಾಗೆ ಹೇಳಿದ್ದಕ್ಕೆ ಕಾರಣವಾದರೂ ಇಷ್ಟೆ. ಈಗಾಗಲೇ ನಮ್ಮ ಸಾಮಾನ್ಯ ಜನರ ನೈತಿಕ ಮಟ್ಟ ಅಭಾವಕ್ಕೊಳಗಾಗಿದೆ. ಇದರಿಂದ ಈಗಾಗಲೆ ಗೊಂದಲವೆದ್ದಿದೆ. ಹಾಗಿರುವಾಗ ಈ ವಿಚಾರಗಳಲ್ಲಿ ದೊಡ್ಡ ರಾಜಕೀಯದ ವ್ಯಕ್ತಿಗಳು ಸೇರಿಕೊಂಡರೆ ಆಗ ಈ ಗೊಂದಲವಿನ್ನೂ ಹೆಚ್ಚಾಗುತ್ತದೆ. ಅದರಿಂದ ನಮ್ಮ ರಾಜಕೀಯ ರಂಗದಲ್ಲಿ ಯಾವ ಉತ್ತಮ ಮಾರ್ಪಾಟೂ ಆಗದು. ಆದ ಕಾರಣ ತಾವು ಈಗ ಸರ್ಕಾರಕ್ಕೆ ಬಂದಿರತಕ್ಕ ಪಟ್ಟಿಯ ಪ್ರಕಾರ ತಾವು ಒಪ್ಪಿಕೊಂಡು ಅದೇ ಆಖೈರೆಂದು ತೀರ್ಮಾನ ಮಾಡಬಹುದೆಂದು ನಮ್ಮ ಅಭಿಪ್ರಾಯಗಳನ್ನು ನಾವು ಕೊಟ್ಟೆವು. ಅಷ್ಟೇ ಅಲ್ಲದೆ ಈಗ ಅಧಿಕಾರಿಗಳು ಕಳುಹಿಸಿರತಕ್ಕ ಪಟ್ಟಿಯಲ್ಲಿ

(ಶ್ರೀ ಜಿ. ಎಸ್. ಬೊಮ್ಮೇಗೌಡ)

ಹಾಗೊಂದು ವೇಳೆ ಏನಾದರೂ ಒಂದೆರಡು ಲೋಪದೋಷಗಳಿದ್ದರೆ ಮುಂದೆ ಅಂಥಾದ್ದನ್ನೆಲ್ಲ ಸರಿಪಡಿಸತಕ್ಕ ಅಧಿಕಾರ ತಾಲ್ಲೂಕ್ ಬೋರ್ಡುಗಳಿಗಿದೆ. ಆದ್ದರಿಂದ ಅಗತ್ಯ ಕಂಡರೆ ಸೂಕ್ತ ಬದಲಾವಣೆಗಳನ್ನು ಮಾಡಲು ತಾಲ್ಲೂಕು ಬೋರ್ಡುಗಳಿಗೆ ಅಧಿಕಾರವಿದ್ದೇ ಇದೆ ಎಂದು ಅರಿಕೆಮಾಡಿಕೊಂಡೆವು. ಈಗ ಏನು ಆ ಅಧಿಕಾರಿಗಳೊಂದು ಪಟ್ಟಿ ಮಾಡಿ ಕಳುಹಿಸಿದ್ದಾರೋ ಅದಕ್ಕೆ ಆ ಪ್ರದೇಶದ ಶೇಕಡ 80ರಷ್ಟು ಜನರ ಒಪ್ಪಿಗೆಯಿತ್ತು. ಆದಾಗ್ಯೂ ಮಾನ್ಯ ಮಂತ್ರಿಗಳು ಆ ಅಧಿಕಾರಿಗಳ ಪಟ್ಟಿಯನ್ನು ತಯಾರಿಸುವಾಗಲೇ ಅದು ರಾಜಕೀಯದಿಂದ ಕೂಡಿತ್ತೆಂದು ಹೇಳಿದರು. ಹಾಗೆ ಆ ಪಟ್ಟಿ ರಾಜಕೀಯದಿಂದ ಕೂಡಿದ್ದುದೇ ಆಗಿದ್ದರೆ ಸರ್ಕಾರದವರು ತಮ್ಮಿಂದಲೇ ನೇಮಿಸಲ್ಪಟ್ಟು ಈ ಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಕಳುಹಿಸಿರುವಂಥ ಆ ಅಮಲ್ದಾರರೂ, ಅಸಿಸ್ಟೆಂಟ್ ಕಮಿಷನವರೂ ಮತ್ತು ಡೆಪ್ಯುಟಿ ಕಮಿಷನರುಗಳ ಮೇಲೆ ಸರ್ಕಾರದವರೇನು ಶಿಸ್ತಿನ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ! ಆದರೆ ನಾನು ಈ ಹಿಂದೆಯೇ ಹೇಳಿರುವಂತೆ ನನಗೆ ಮಾನ್ಯ ಮಂತ್ರಿಗಳಲ್ಲಿ ಬಹಳ ಪೂಜ್ಯತೆಯಿದೆ. ಈಗ ಬೇಕಾಗಿದ್ದರೂ ಮಂತ್ರಿಗಳು ನನ್ನ ಜೊತೆಯಲ್ಲೇ ಬರಲಿ-ಅಲ್ಲಿಯ ಪರಿಸ್ಥಿತಿಯನ್ನು ತಿಳಿಯಲಿ. ಒಂದು ಸಹಕಾರ ಸಂಘವನ್ನು ನಿರ್ಮಿಸಿಕೊಂಡಿರತಕ್ಕಂಥ ಎರಡು ಹಳ್ಳಿಗಳು ಒಂದಕ್ಕೊಂದು 3 ಫರ್ಲಾಂಗಿನಲ್ಲಿರುತ್ತವೆ. ಇತ್ತೀಚೆಗೆ ಆ ಎರಡು ಗ್ರಾಮಗಳಿಗೂ ಸಂಬಂಧಪಟ್ಟಹಾಗೆ ಒಂದು ಸ್ಕೂಲನ್ನು ಪ್ರಾರಂಭಿಸಲಾಗಿದೆ. ಹೀಗೆ ಈ ಎರಡು ಗ್ರಾಮಗಳೂ ಒಂದಕ್ಕೊಂದು ಮೂರು ಫರ್ಲಾಂಗಿನಲ್ಲಿದ್ದರೆ ಈಗ ಆ ಪೈಕಿ ಒಂದು ಗ್ರಾಮವನ್ನು ಮೂರು ಮೈಲಿಗಳ ದೂರ ತೆಗೆದುಕೊಂಡು ಹೋಗಿ ಮತ್ತೊಂದು ಸರ್ಕಲ್ಲಿಗೆ ಸೇರಿಸಿದ್ದಾರೆ. ಹೀಗೆ ಹತ್ತಿರ ಹತ್ತಿರವಿದ್ದ ಹಳ್ಳಿಗಳನ್ನು ಸುಲಭವಾಗಿ ಒಂದು ಗ್ರೂಪ್‌ಮಾಡಲು ಸಾಧ್ಯವಿದ್ದಾಗ್ಯೂ ಅವುಗಳಲ್ಲಿ ಕೆಲವನ್ನು ನಾಲ್ಕು ಮೈಲಿ ದೂರ ಇರುವ ಗ್ರೂಪಿಗೆ ಸೇರಿಸಲಾಗಿದೆ. ಹಾಗೊಂದು ವೇಳೆ ಮಾನ್ಯ ಮಂತ್ರಿಗಳಿಗೆ ಹೀಗೆ ಮಾಡತಕ್ಕದ್ದು ಸರಿಯಾದ್ದೆಂಬ ಉದ್ದೇಶದಿಂದ ಯಾರಾದರೂ ಹೇಳಿದ್ದರೆ ಅದು ಖಂಡಿತ ಸರಿಯಾದ್ದಲ್ಲವೆಂಬುದನ್ನು ಮಾನ್ಯ ಸಚಿವರು ಈಗಲಾದರೂ ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ. ಇಂಥ ಪ್ರಸಂಗಗಳು ನಡೆದಿರುವುದು ಒಂದಲ್ಲ; ಎರಡಲ್ಲ; ನೂರಾರು ನಡೆದಿವೆ. ಕೆಲಕಡೆವು ಏನು ಒಂದು ಗ್ರೂಪಾಗಿ ಹಳ್ಳಿಗಳನ್ನು ವಿಂಗಡಿಸಲಾಗಿತ್ತೋ ಆ ಗುಂಪಿಗೆ ನಾವು ಸೇರಲು ನಮಗೆ ಇಷ್ಟವಿಲ್ಲ-ಬದಲಾಯಿಸಿಕೊಡಿ ಎಂಬುದಾಗಿ ಆ ಸಂಬಂಧಪಟ್ಟ ಗ್ರಾಮಗಳ ಜನರ್ಯಾರೂ ಸರ್ಕಾರಕ್ಕೆ ಹೇಳಿಕೊಂಡಿಲ್ಲ. ಹಾಗೆ ಸಂಬಂಧಪಟ್ಟ ಜನಗಳಿಂದ ಸರ್ಕಾರಕ್ಕೆ ಯಾವ ಒಂದು ಮನವಿಯು ಬಾರದಿದ್ದಾಗ್ಯೂ ಕೆಲವು ಕಡೆ ಅಂಥ ಹಳ್ಳಿಗಳನ್ನು ಹತ್ತಿರವಿರುವ ಸರ್ಕಲ್ ತಪ್ಪಿಸಿ ಎಂಟು ಮೈಲಿ ದೂರವಿರತಕ್ಕ ಬೇರೆ ಸರ್ಕಲ್ಲಿಗೆ ಸೇರಿಸಿದ್ದಾರೆ. ಆದರೆ ನನಗೆ ಇದರ ಅರ್ಥವೇನೆಂಬುದೇ ಗೊತ್ತಾಗುತ್ತಿಲ್ಲ. ಗ್ರಾಮರಾಜ್ಯ ಸ್ಥಾಪನೆಗೆ ಅನುಕೂಲವಾಗತಕ್ಕ ಗ್ರಾಮ ಪಂಚಾಯಿತಿಗಳನ್ನು ರಚಿಸಬೇಕೆಂದು ಈ ಸಭೆ ಸರ್ಕಾರಕ್ಕೆ ಪ್ರಾರ್ಥಿಸಿಕೊಂಡಿದೆ. ಆ ಕಾರ್ಯ ಸುಗಮವಾಗಿ ನೆರವೇರಬೇಕಾಗಿದ್ದರೆ ನಮ್ಮ ಈ ರಾಜಕೀಯವನ್ನು ಎಷ್ಟು ದೂರವಿಟ್ಟರೆ ಅಷ್ಟು ಒಳ್ಳೆಯದೆಂದು ನಾನು ತಿಳಿಸಲಿಚ್ಛಿಸುತ್ತೇನೆ.

ಇನ್ನು ಎರಡನೆಯದಾಗಿ—ಸ್ವಾಮಿ ಯಾವುದೇ ಒಂದು ದೇಶವಾಗಲಿ ಅದು ಮಾಡತಕ್ಕ ತನ್ನ ಕಾರ್ಯದಲ್ಲಿ ಮೊದಲನೆಯದೆಂದರೆ ಅದು ಆ ದೇಶದ ಜನರ ಆರೋಗ್ಯವನ್ನು ಕಾಪಾಡುವುದೇ ಆಗಿದೆ. ಇದು ಎಲ್ಲ ದೇಶಗಳ ಸರ್ಕಾರದ ಕರ್ತವ್ಯ ಆಗಿದೆ. ಹೀಗಿರುವಾಗ ಮೊನ್ನೆ ತಾನೆ ನಮ್ಮ ಆರೋಗ್ಯ ಖಾತೆಗೆ ಬಂದಿರತಕ್ಕ ಶ್ರೀ ಕೆ. ಕೆ. ಹೆಗ್ಗಡೆಯವರಿಂದ ದೇಶಕ್ಕೆ ಒಂದು ದೊಡ್ಡ ಸಹಾಯವಾಗುತ್ತದೆಂದು ನಾವೆಲ್ಲರೂ ಭಾವಿಸಿಕೊಂಡಿದ್ದೆವು; ಒಂದು ಆಶಾ ಭಾವನೆಯನ್ನಿಟ್ಟುಕೊಂಡಿದ್ದೆವು. ಕಾರಣವೇನೆಂದರೆ ಅವರು ಈ ಬಾಬಿನಲ್ಲಿ ಪದವೀಧರರು. ಆದಕಾರಣ ಈ ಬಾಬಿನಲ್ಲಿ ಏನೋ ಮಹತ್ತರವಾದ ಬದಲಾವಣೆಗಳಾಗಬಹುದು ಅಂತ ಅಂದುಕೊಂಡಿದ್ದೆವು. ಜನರಿಗೆ ವೈದ್ಯ ಸಹಾಯ ಇನ್ನೂ ಹೆಚ್ಚಿನ ರೀತಿಯಲ್ಲಿ ದೊರೆಯಲು ಅವಕಾಶವಾಗಬಹುದೆಂದು ಭಾವಿಸಿದೆವು. ರಾಜ್ಯದಲ್ಲಿರತಕ್ಕ ಪ್ರತಿಯೊಂದು ಆಸ್ಪತ್ರೆಯನ್ನು ಉತ್ತಮಗೊಳಿಸದಿದ್ದಾಗ್ಯೂ ಕಡೆಗೆ ಜಿಲ್ಲಾ ಕಸಬೆಗಳಲ್ಲಿರತಕ್ಕ ಆಸ್ಪತ್ರೆಗಳನ್ನಾದರೂ ಉತ್ತಮಪಡಿಸಬಹುದೆಂದು ನಾವೆಲ್ಲರೂ ಭಾವಿಸಿದ್ದೆವು. ಈ ದಿವಸ ನಾನು ನಿಜವಾಗಿಯೂ ನೊಂದ ಮನಸ್ಸಿನಿಂದ ಹೇಳುವುದಾದರೆ ಅವುಗಳೆಲ್ಲ ಸ್ಮಶಾನದಂತಾಗಿವೆ. ಒಬ್ಬ ಸೌದೆ ಕಡಿಯುತ್ತ ಮನುಷ್ಯನಿಗೆ ಆಕಸ್ಮಿಕವಾಗಿ ಕಾಲಿಗೆ ಕೊಡಲಿತಗುಲಿ ಘಾಯವಾಗಿ ಆಸ್ಪತ್ರೆಗೆ ಹೋಗಿದ್ದರೆ ಮಂಡ್ಯಾದಂಥಾ ಜಿಲ್ಲಾ ಕಸಬೆಯ ಆಸ್ಪತ್ರೆಯಲ್ಲಿ ಘಾಯಕ್ಕೆ ಹಾಕತಕ್ಕ ಬ್ಯಾಂಡೇಜ್ ಬಟ್ಟೆಯಿಲ್ಲ. ಅದನ್ನು ಅಂಗಡಿಗೆ ಹೋಗಿ ತರಬೇಕೆಂದು ಅಲ್ಲಿಯ ಡಾಕ್ಟರು ಹೇಳಿದ ಮೇಲೆ ಇನ್ನು ಆ ಆಸ್ಪತ್ರೆಗಳಲ್ಲಿ ಏನಿದೆಯೋ ಅದನ್ನು ಈ ಸಭೆಯವರೇ ಆಲೋಚಿಸಲಿ. ಇಂಥ ಸರ್ಕಾರಿ ಆಸ್ಪತ್ರೆಗಳಿಂದ ಜನರಿಗೆ—ಬಡವರಿಗೆ ಎಷ್ಟರಮಟ್ಟಿಗೆ ಉಪಕಾರವಾಗುತ್ತಿದೆಯೆಂಬುದನ್ನು ತಾವೆಲ್ಲರೂ ಊಹಿಸಬಹುದು. ಈ ಹಿಂದೆ ಮಂಡ್ಯಾಕ್ಕೆ ಒಂದು ಆಯುಧಗಳನ್ನು ಹದಮಾಡತಕ್ಕ ಸ್ಟೆರಿಲೈಜ್ ಮಿಷನ್ನನ್ನು ಇಲ್ಲಿಗೆ 15 ವರ್ಷಗಳ ಹಿಂದೆ ಸರಬರಾಯಿ ಮಾಡಲಾಗಿತ್ತು. ಈಗ ಅದು ಕೆಟ್ಟು ಹೋಗಿ ಮತ್ತೊಂದನ್ನು ಕಳುಹಿಸಬೇಕೆಂದು ಇಲ್ಲಿಗೆ ಬರೆದರೆ ಇಲ್ಲಿರತಕ್ಕ ಯಾರೋ ಒಬ್ಬ ಬೃಹಸ್ಪತಿ ಆ ಯಂತ್ರವನ್ನು ಮಂಡ್ಯಾಕ್ಕೆ ಕಳುಹಿಸಿ ಎಷ್ಟು ದಿವಸಗಳಾಯಿತು, ಕೆಡಲು ಕಾರಣವೇನು ಎಂಬುದಾಗಿ ಕ್ವೆರಿ ಹಾಕಿ ಕಳುಹಿಸಿದ್ದಾನಂತೆ. ಹೀಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಪತ್ರವ್ಯವಹಾರ ಪ್ರಾರಂಭವಾಗಿ ಎರಡು ಮೂರು ಸಾರ್ತಿ ಹಿಂದಕ್ಕೂ ಮುಂದಕ್ಕೂ ಆ ಪತ್ರ ಓಡಾಡಲು ಪ್ರಾರಂಭವಾಯಿತು. ಈ ಹೊಸ ಯಂತ್ರ ಅಲ್ಲಿಗೆ ಬಾರದೆ ಇದ್ದ ಕಾರಣ ಮಂಡ್ಯದ ರೋಗಿಗಳು ಮೈಸೂರಿಗೆ ಹೋಗಬೇಕಾಯಿತು. ಈ ಆಸ್ಪತ್ರೆಗಳ ಆಡಳಿತ ಎಷ್ಟರಮಟ್ಟಿಗೆ ವ್ಯವಸ್ಥೆಯಿಂದ ನಡೆಯುತ್ತಿದೆ ಎಂಬುದಕ್ಕೆ ಈ ಒಂದು ನಿದರ್ಶನವೇ ಸಾಕು. ಈ ಗೋಳನ್ನು ನೋಡಲಾರದೆ ಆಗ ನಾವೇ ನೂರು ರೂಪಾಯಿಗಳ ಚಂದಾ ಹಣ ಎತ್ತಿ ಆ ಸ್ಟರ್‌ಲೈಜ್ ಯಂತ್ರವನ್ನು ಅಲ್ಲೇ ಸರಿ ಮಾಡಿಸಲಾಯಿತು. ಅಲ್ಲಿಯ ಆಸ್ಪತ್ರೆಯಲ್ಲಿ ಕೇವಲ 60 ಜನ ರೋಗಿಗಳಿಗೆ ಮಾತ್ರ ಅವಕಾಶವಿದೆ. ಆದರೆ ಈ ದಿವಸ ಅಲ್ಲಿ 100-200 ಜನ ರೋಗಿಗಳಿದ್ದಾರೆ. ಅವರಿಗೊಬ್ಬರಿಗೂ ಸರಿಯಾದ ಹಾಸಿಗೆಯಿಲ್ಲ. ಹೊದಿಕೆಗಳಿಲ್ಲ. ಈ ಇಲಾಖೆಯ ಆಡಳಿತ ನಿಗಾ ನೋಡಿಕೊಳ್ಳತಕ್ಕವರು ಯಾರಾದರೂ ಸರಿ ಅವರು ಯಾವ ಒಂದು ಪ್ರೋಗ್ರಾಮನ್ನು ಕೊಡದೆ ಅಲ್ಲಿಗೆ ಹೋಗಿ ಅವರು ತಮ್ಮ ಕಣ್ಣಿನಿಂದ ಅಲ್ಲೇನು ನಡೆಯುತ್ತಿದೆ ಎಂಬುದನ್ನು ನೋಡಿ

ದರೆ ಆಗ ನಾನಿಲ್ಲಿ ಹೇಳುತ್ತಿರುವುದು ಸರಿಯೇ ಅಲ್ಲವೇ ಎನ್ನುವುದು ಗೊತ್ತಾಗುತ್ತದೆ. ಈ ಆಸ್ಪತ್ರೆಯವರು ನಮಗೆ ಹೆಚ್ಚಿನ ಉಪಕಾರವಾಡುವುದೇನೂ ಬೇಡ. ಕಡೆಗೆ ಘಾಯಗೊಂಡು ಬರತಕ್ಕ ಜನರಿಗೆ ಬ್ಯಾಂಡೇಜ್‌ಗೆ ಅವರೇ ದುಡ್ಡು ಕೊಟ್ಟು ತರಬೇಕೆಂದರೆ ಇನ್ನೇನು ಹೇಳುವುದಿದೆ? ಸರ್ಕಾರದವರು ಇದನ್ನೆಲ್ಲ ಕೂಡಲೇ ಸರಿಪಡಿಸಬೇಕು. ಮಂಡ್ಯಾ ಜಿಲ್ಲೆಯಲ್ಲಿ ಕ್ಷಯ ರೋಗದ ಹಾವಳಿ ಜಾಸ್ತಿ ಇದೆ, ಇದಕ್ಕಾಗಿ ಅಲ್ಲಿ ಒಂದು ಕ್ಷಯದಾಸ್ಪತ್ರೆ ತೆರೆಯಬೇಕೆಂದು ಆ ಜಿಲ್ಲೆಯ ಶಾಸನ ಸಭಾ ಸದಸ್ಯರೆಲ್ಲರೂ ಸೇರಿ ಸರ್ಕಾರಕ್ಕೆ ಒಂದು ಮನವಿಯನ್ನು ಕೊಟ್ಟೆವು. ಸರ್ಕಾರದವರೇ ಆ ಮಂಡ್ಯಾ ಜಿಲ್ಲೆಯಲ್ಲಿ ಕ್ಷಯರೋಗದಿಂದ ನರಳತಕ್ಕವರ ಸಂಖ್ಯೆ ಶೇಕಡ 49 ಇದೆ ಎಂದು ಒಂದು ಸಾರಿ ಹೇಳಿದ್ದಾರೆ—ಮತ್ತೊಂದು ಸಾರ್ತಿ ಸೇಕಡ 30 ಇದೆ ಆ ಸಂಖ್ಯೆ ಎಂತ ಹೇಳಿದ್ದಾರೆ. ನಾವು ಹಿಂದೆ ಈ ವಿಚಾರದಲ್ಲಿ ಮನವಿಯನ್ನೊಪ್ಪಿಸಿದಾಗ ಸರ್ಕಾರದವರು ಈ ವಿಚಾರದಲ್ಲಿ ಕೂಡಲೇ ತೀರ್ಮಾನ ಕೈಗೊಳ್ಳುತ್ತೇವೆಂದು ಹೇಳಿದ್ದರು. ಆದರೂ ಅಲ್ಲಿ ಆಸ್ಪತ್ರೆಯನ್ನೂ ಆಗಿಲ್ಲ. ಹೀಗಾಗಿ ಆ ಜಿಲ್ಲೆಯ ಕಾಯಿಲೆ ಜನ ಪ್ರತಿದಿನವೂ ಗಾಡಿಗಳಲ್ಲೂ, ಬಸ್ಸುಗಳಲ್ಲೂ, ರೈಲಿನಲ್ಲೂ ಬೇರೆ ಸ್ಥಳ ಚಿಕಿತ್ಸೆಗೆ ಹೋಗಿ ಅಲ್ಲಿ ಸ್ಥಳ ಸಿಕ್ಕದೆ ದಿನವೂ ಹಿಂದಕ್ಕೆ ವಾಪಸ್ಸು ಬರುತ್ತಿದ್ದಾರೆ. ಈ ನಿದರ್ಶನಗಳನ್ನು ನಾನು ತಮಗೆ ಎಷ್ಟು ಬೇಕಾದರೂ ಕೊಡಬಲ್ಲೆ. ರಾಜ್ಯದ ಯಾವುದಾದರೂ ಕ್ಷಯದಾಸ್ಪತ್ರೆಯಲ್ಲಿ ಮಂಡ್ಯ ಜಿಲ್ಲೆಯ ಕ್ಷಯರೋಗದ ಜನರು ಇಲ್ಲದಿದ್ದರೆ ಅದು ಆ ಆಸ್ಪತ್ರೆಯ ಒಂದು ಪುಣ್ಯವೆಂದೇ ಹೇಳಬೇಕು.

ಇನ್ನು ಮಂಡ್ಯ ಜಿಲ್ಲೆಯಲ್ಲಿ ಕುಷ್ಟರೋಗಿಗಳ ಆಸ್ಪತ್ರೆ ಆಗಬೇಕೆಂದು ಎಲ್ಲ ಶಾಸನ ಸದಸ್ಯರೂ ಸೇರಿ ಮನವಿ ಮಾಡಿಕೊಂಡಿದ್ದೆವು. ಆದರೆ ಇನ್ನೂ ಅದರ ಕಡೆಗೆ ಸರ್ಕಾರದ ಗಮನ ಬಿದ್ದಿಲ್ಲ. ಐದು-ಆರು ವರ್ಷಗಳಾಯಿತು.

1-30 P.M.

ನಮ್ಮ ಶ್ರೀಮಾನ್ ರಾಜಯ್ಯ ಶೆಟ್ಟರು politics, politics ಎಂದು ಹೇಳುತ್ತಲೇ ಇರುತ್ತಾರೆ. ಹಿಂದೆ ಇದ್ದಂಥ ಒಂದು ಸರ್ಕಾರ ಕೇಂದ್ರ ಸರ್ಕಾರದವರು ರಾಜ್ಯಕ್ಕೆ ಕೊಡತಕ್ಕಂಥ ಎರಡು ಪಾಲಿಟೆಕ್ನಿಕ್ಕುಗಳ ಪೈಕಿ ಒಂದನ್ನು ಮಂಡ್ಯಕ್ಕೆ ಕೊಡತಕ್ಕಂಥದ್ದು ಎಂದು ಹೇಳಿ ಇಲ್ಲಿಂದ ಶಿಫಾರಸು ಮಾಡಿದರು. ಈ ಸಂದರ್ಭದಲ್ಲಿ ಈ ಸಭೆಯ ಮುಂದೆ ಒಂದು ಪ್ರಶ್ನೆಯನ್ನು ತಂದಾಗ, ಮಾನ್ಯ ವಿದ್ಯಾ ಸಚಿವರು ಅದಕ್ಕೆ ಉತ್ತರಕೊಡುವಾಗ ಸರ್ಕಾರ ಇಂಥ ಶಿಫಾರಸನ್ನು ಮಾಡಿತ್ತು; ಮಂಡ್ಯದಲ್ಲಿ Polytechnic ತೆರೆಯುವುದಕ್ಕೆ ಒಂದು ತೀರ್ಮಾನವಾಗಿತ್ತು. ಈ ಒಂದು ತೀರ್ಮಾನ ಈ ಬದಲಾವಣೆಯಾಗಿ ಈ ಜಿಲ್ಲೆಯಲ್ಲಿ ಕೊನೆಯ ತಾಲ್ಲೂಕಾದ ಕೃಷ್ಣರಾಜಪೇಟೆಗೆ ಕೊಡಬೇಕೆಂದು ತೀರ್ಮಾನಮಾಡಿದ್ದೇವೆ ಎಂದು ಹೇಳಿದರು. ಈ ಸಂಧರ್ಭ ಗೊತ್ತಾದ ಮೇಲೆ ಈ ಜಿಲ್ಲೆಯ ಕೆಲವು ಶಾಸನ ಸಭಾ ಸದಸ್ಯರೂ, ಇನ್ನಿತರ ವಿದ್ಯಾ ಪ್ರೇಮಿಗಳೂ, ಎಲ್ಲರೂ ಕೂಡ, ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಈ ವಿಷಯ ಪ್ರಸ್ತಾಪ ಮಾಡಿ ವಿಚಾರಮಾಡಬೇಕು ಎಂದು ಕೇಳಿದಾಗ, ಎಜ್ಯುಕೇಶನ್ ಮಿನಿಸ್ಟರನ್ನು ವಿಚಾರಿಸಬೇಕು, ಈ ಪಾಲಿಟೆಕ್ನಿಕ್ ವಿಷಯ ಗೊತ್ತಿಲ್ಲವೆಂದು ಹೇಳಿದರು. ಅಷ್ಟು ಹೊತ್ತಿಗೆ ಈ ವಿಷಯ ಕ್ಯಾಬಿನೆಟ್ ಮುಂದೆ ಬಂದು ಪಾಲಿಟೆಕ್ನಿಕನ್ನು ಕೃಷ್ಣರಾಜಪೇಟೆಗೆ ಕೊಡಬೇಕೆಂದು ತೀರ್ಮಾನವಾಗಿತ್ತು. ತಾವು ಜಿಲ್ಲೆಗೆ ಒಂದು ಪಾಲಿಟೆಕ್ನಿಕ್ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆಂದು ಈ ಸಭೆಯಲ್ಲಿ ಹೇಳಿದ್ದೀರಿ. ಜಿಲ್ಲೆಗೆ ಒಂದು ಪಾಲಿಟೆಕ್ನಿಕ್ ಕೊಡಬೇಕೆಂದಾಗ ಅದು ಎಲ್ಲಿರಬೇಕು, ಯಾವ ಸ್ಥಳ ಬಹಳ ಅನುಕೂಲವೆಂದು ಯೋಚನೆಮಾಡಿ, ಎಲ್ಲಾ ದೃಷ್ಟಿಯಿಂದಲೂ ಕೂಡ ಮಂಡ್ಯವೇ ಮಧ್ಯ ರಾಷ್ಟ್ರವಾದ್ದರಿಂದ ಅಲ್ಲಿರಬೇಕೆಂದು ನಿರ್ಧರಿಸಲಾಗಿತ್ತು; ಆದುದರಿಂದ ತಾವು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿಸಿ, ಯಾವ ಸ್ಥಳದಲ್ಲಿ ಅದಿದ್ದರೆ ಉತ್ತಮವೆಂದು ಆಲೋಚನೆ ಮಾಡಿದರೆ ಬಹಳ ಒಳ್ಳೆಯದು. ಉದ್ದೇಶಪೂರ್ವಕವಾಗಿ ಅವರಿಗೇ ಕೊಡಬೇಕೆಂದು ಕೊಟ್ಟರೆ, ಹುಡುಗರಿಗೆ ಬಹಳ ತೊಂದರೆಯಾಗುತ್ತದೆ; ಆ ಮೇಲೆ ಲಕ್ಷಾಂತರ ರೂಪಾಯಿ ಖರ್ಚುಮಾಡಿ ಕಟ್ಟಿದ ಕಟ್ಟಡಗಳನ್ನು ಬೇರೆ ಕಡೆಗೆ ತಂದು ಇಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದೆವು. ಅವರು ತಮಗೆ ಒಂದೂ ಗೊತ್ತಿಲ್ಲವೆಂದು ಹೇಳಿದರು. ದೇಶದ ನಾಯಕರು ಎಂದೆನಿಸಿಕೊಂಡವರು ತಾವು ಮಾಡಿರುವ ತೀರ್ಮಾನ ಸರಿಯಾಗಿದೆ ಎಂದು ತೋರಿಸಿಕೊಡಬೇಕಾಗಿತ್ತು, ಇಲ್ಲ ನಾವು ಹೇಳುವುದು ಸರಿಯಾಗಿಲ್ಲವೆಂದು ಸಮಜಾಯಿಷಿ ಹೇಳಿ ನಮ್ಮನ್ನು ಒಪ್ಪಿಸಬೇಕಾಗಿತ್ತು. ನಾವು ಹೇಳುವುದು ಸರಿಯಾಗಿಲ್ಲವೆಂದು ಹೇಳುವುದಕ್ಕೆ ಅಶಕ್ತರಾಗಿದ್ದು, ಆ ವಿಷಯ ತಮಗೆ ಗೊತ್ತಿಲ್ಲವೆಂದು ಹೇಳಿದರು. ಇದು ದೇಶದ ಮುಖ್ಯ ಮಂತ್ರಿಯಾದವರಿಗೆ ಸಾಧುವಾದುದೇ ಎಂದು ಅವರೇ ಯೋಚಿಸಬೇಕಾಗಿದೆ.

Sri B. D. JATTI (Chief Minister).—Sir, the position is that the Government agreed to give one Polytechnic to each district. But regarding the selection of the place, it is left to the Minister in charge of Education. Every district is entitled to get a Polytechnic. I said that I did not know anything about the selection of the place and the Minister in charge knows it.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಕೇಂದ್ರದವರು ಎರಡು ಪಾಲಿಟೆಕ್ನಿಕ್‌ನ್ನಗಳನ್ನು ಕೊಡುತ್ತೇವೆಂದಾಗ, ಅವುಗಳ ಪೈಕಿ ಒಂದನ್ನು ಮಂಡ್ಯಕ್ಕೆ ಕೊಡಬೇಕು, ಅದೇ ಉತ್ತಮವಾದ ಸ್ಥಳ ಎಂದು ಹಿಂದಿನ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿತು. ಆ ಶಿಫಾರಸನ್ನು ಒಪ್ಪಿಕೊಂಡು ಒಂದು ತೀರ್ಮಾನಕ್ಕೆ ಬಂದ ಮೇಲೆ, ಅದೇ ವಿಷಯವನ್ನು ಕ್ಯಾಬಿನೆಟ್ ಮುಂದೆ ಇಟ್ಟುಕೊಂಡು, ಕೃಷ್ಣರಾಜ ಪೇಟೆಯಲ್ಲಿ ಪಾಲಿಟೆಕ್ನಿಕನ್ನ ಇಡಬೇಕೆಂದು ಹೇಳಿ ತಾವು ತೀರ್ಮಾನಿಸಿಲ್ಲವೇ? ಹೀಗೆ ಕೃಷ್ಣರಾಜಪೇಟೆಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದರೂ, ನಾವು ನಿಮಗೆ ಅರಿಕೆ ಮಾಡಿಕೊಂಡಂತೆ ನೀವು ನಮಗೆ ಗೊತ್ತಿಲ್ಲವೆಂದು ಹೇಳಲಿಲ್ಲವೇ! ಎಜ್ಯುಕೇಶನ್ ಮಿನಿಸ್ಟರೇ "ಮಂಡ್ಯದಲ್ಲಿ ತೆರೆಯಬೇಕೆಂದು ಶಿಫಾರಸು ಮಾಡಿದ್ದು ನಿಜ. ಎಲ್ಲಿಗೆ ಬೇಕೋ ಅಲ್ಲಿಗೆ ಬದಲಾಯಿಸಿ ಕೊಟ್ಟಿದ್ದೇವೆ" ಎಂದು ಹೇಳಿದರು.

ಮಂಡ್ಯಕ್ಕೆ ಒಂದು ಇಂಜನಿಯರಿಂಗ್ ಕಾಲೇಜ್ ಬೇಕೆಂದು ಮೂರು ಲಕ್ಷ ರೂಪಾಯಿ ವಸೂಲು ಮಾಡಿ ಖಜಾನೆಯಲ್ಲಿ ಜಮಾ ಮಾಡಿ ಕಾಲೇಜಿಗಾಗಿ ಸಂಬಂಧಪಟ್ಟ ಮಾನ್ಯ ಸಚಿವರನ್ನು ಕೇಳಿಕೊಂಡರೆ, ಅವರು ಅಪ್ಪಣೆ ಕೊಡಿಸಿದರು. ಇನ್ನು ಎಲ್ಲಿಗೆ ಕೊಡಬೇಕೆನ್ನುವುದು ತೀರ್ಮಾನವಾಗಿಲ್ಲ; ಬೆಂಗಳೂರಿನಲ್ಲಿ ಯಾರೋ

(ಶ್ರೀ ಜಿ. ಎಸ್. ಬೊಮ್ಮೇಗೌಡ)

ರಾಮಯ್ಯ ಎಂಬುವರಿಗೆ ವಾಗ್ದಾನ ಮಾಡಿದ್ದೇವೆ, ಅವರು ಕೇಳಿದರೆ ಅವರಿಗೆ ಕೊಡಬೇಕು ಎಂದರು. ಇನ್ನೊಂದು ಕಡೆಯೂ ಕೊಡಿ; ಅಲ್ಲಿಗೆ ಇಂಜನಿಯರಿಂಗ್ ಕಾಲೇಜ್ ಕೊಡುವುದಕ್ಕೆ ವಿರೋಧವಾಗಿಲ್ಲ. ಆದರೆ ಇಲ್ಲಿಯೂ ಆಗಬೇಕು; ಮೂರು ಲಕ್ಷ ರೂಪಾಯಿ ಕಲೆಕ್ಟ್ ಮಾಡಿದ್ದೇವೆ, ತಾವು ಭರವಸೆ ಕೊಟ್ಟರೆ, 5-6 ತಿಂಗಳಲ್ಲಿ 10 ಲಕ್ಷ ರೂಪಾಯಿ ಟ್ರೆಜರಿಗೆ ಜಮಾ ಮಾಡುತ್ತೇವೆ, ಇಂಜನಿಯರಿಂಗ್ ಕಾಲೇಜನ್ನು ಮಂಜೂರು ಮಾಡಬೇಕೆಂದು ಪ್ರಾರ್ಥಿಸಿದೆವು. ಆದರೂ ಈವರೆಗೂ ಆ ವಿಷಯದಲ್ಲಿ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡಿಲ್ಲ. ರಚನಾತ್ಮಕ ಕೆಲಸ ಮಾಡುತ್ತೇವೆಂದು ಹೇಳತಕ್ಕಂಥವರು, ಅದನ್ನು ಅನುಷ್ಠಾನಕ್ಕೆ ತರುವಾಗ ಒಂದು ರಾಜಕೀಯ ಗೊಂದಲದಲ್ಲಿ ಸಿಕ್ಕಿ ಹೋದರೆ, ರಚನಾತ್ಮಕ ಕೆಲಸ ಮಾಡತಕ್ಕಂಥವರಿಗೆ ಏನು ಪ್ರೋತ್ಸಾಹ ಕೊಟ್ಟ ಹಾಗಾಗುತ್ತದೆ. ಈಗಲೂ ಮಂಡ್ಯದಲ್ಲಿ ಇಂಜನಿಯರಿಂಗ್ ಕಾಲೇಜನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕಡೆಯದಾಗಿ ಒಂದೇ ಒಂದು ವಿಷಯವನ್ನು ಹೇಳುತ್ತೇನೆ. ಪಂಚವಾರ್ಷಿಕ ಯೋಜನೆಗೆ ಕೊಟ್ಟಿರತಕ್ಕಂಥ ಹಣ ಸಾಕೇ ಎಂದು ಮಾನ್ಯ ಆಲೂರು ಹನುಮಂತಪ್ಪನವರು ಪ್ರಸ್ತಾಪ ಮಾಡಿದರು. ಹಾಗೇನೇ ವ್ಯವಸಾಯ ಖಾತೆಯಲ್ಲಿ ಅನುಭವವಿಲ್ಲದವರಿಗೆ ಈ ಖಾತೆಯನ್ನು ಕೊಟ್ಟಿದ್ದಾರೆಂದು ಹೇಳಿದರು. ಅಂಕಿಅಂಶಗಳನ್ನು ನೋಡುವುದಾದರೆ, ಎಲ್ಲಿ ನೀರಾವರಿ ಪ್ರದೇಶಗಳಿವೆಯೋ, ಅಲ್ಲಿ ಮೂರನೆಯ ಒಂದು ಭಾಗದಷ್ಟು ಚೌಳು ಮತ್ತು ಜೌಗು ಪ್ರದೇಶ ಬರತಕ್ಕಂಥಾದ್ದು ಸ್ವಾಭಾವಿಕ ಹಾಗೆ ಚೌಳು, ಜೌಗು ಇರತಕ್ಕಂಥ ಪ್ರದೇಶದಲ್ಲಿ ಬೆಳೆ ತೆಗೆಯುವುದಕ್ಕಾಗುವುದಿಲ್ಲ. ಡ್ರೇನೇಜ್ ಸೀಪೇಜುಗಳನ್ನು ಮಾಡಿ, ಜೌಗು ಚೌಳು ಬರದಂತೆ ತಪ್ಪಿಸಬೇಕಾದದ್ದು ಸರ್ಕಾರದ ಕರ್ತವ್ಯ ಹೀಗೆ ಮಾಡದೆ ನಾವು ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡಿದರೂ, ನಾವು ಬರತಕ್ಕಂಥ ಉತ್ಪತ್ತಿಯಲ್ಲಿ ಅರ್ಧ ಭಾಗವನ್ನು ಕಳೆಯಬೇಕು. ಹೊರಗಡೆ ದೇಶಗಳಲ್ಲಿ ನೀರಾವರಿ ಕಾಮಗಾರಿಗಳಿರುವ ಕಡೆ ಎಷ್ಟರ ಮಟ್ಟಿಗೆ $\frac{1}{3}$ನೆಯ ಭಾಗದಷ್ಟು ಜಮೀನನ್ನು ಬೀಳು ಬಿಡದೆ ಹೇಗೆ ಫಲವತ್ತಾಗಿ ಮಾಡಿದ್ದಾರೆಂದು ತಿಳಿದುಕೊಂಡು, ಇಲ್ಲಿಯೂ ಕೂಡ ಅನುಕೂಲವಿರತಕ್ಕಂಥ ಪ್ರದೇಶದಲ್ಲಿ ಚೌಳು ಜೌಗು ಬಾರದಂತೆ ಅದಕ್ಕೆ ಒಂದು ಡ್ರೇನೇಜ್ ಮಾಡಬೇಕು. ಈಗಿರುವ ಪರಿಸ್ಥಿತಿಯಲ್ಲಿ ತಾವು ಒದಗಿಸಿರತಕ್ಕಂಥ ಹಣದ ಮೂರರಷ್ಟಾದರೂ ಸಾಕಾಗದು. ರೈತನು ದೇಶದ ಬೆನ್ನು ಮೂಳೆ, ಅವನನ್ನು ಉದ್ಧಾರ ಮಾಡುವುದೇ ನಮ್ಮ ಉದ್ದೇಶ ಎಂದು ಸಾರಿ ಸಾರಿ ಹೇಳತಕ್ಕಂಥವರು, ರೈತನಿಗೆ ಯಾವ ಒಂದು ಅನುಕೂಲವನ್ನು ಕಲ್ಪಿಸದೆ, ಆ ವೃತ್ತಿಯಲ್ಲಿ ತೊಡಗಿದಂಥವನಿಗೆ ಏನು ತೊಂದರೆಗಳಿವೆ, ಅವುಗಳನ್ನು ನಿವಾರಿಸಲು ಏನು ಅನುಕೂಲಗಳನ್ನು ಕಲ್ಪಿಸಿ ಕೊಡಬೇಕೆಂದು ತಿಳಿದುಕೊಂಡು, ಅವುಗಳನ್ನು ಒದಗಿಸದಿದ್ದರೆ, ಪ್ರಚಾರದಿಂದ ಏನು ಉಪಯೋಗ. ಜೌಗು ಹೋಗಲಾಡಿಸಿಕೊಂಡು, ಚೌಳನ್ನು ತೆಗೆದು ವ್ಯವಸಾಯ ಮಾಡಬೇಕಾದರೆ ಹೆಚ್ಚಿನ ಸೌಕರ್ಯಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಮಳವಳ್ಳಿ).—ಅಜ್ಞಾನ, ಬಡತನಗಳಿರುವುದರಿಂದ, ಬೇಕಾದಷ್ಟು ಪ್ರಚಾರಬೇಕು.

ಶ್ರೀ ಜಿ. ಎಸ್ ಬೊಮ್ಮೇಗೌಡ.—ತಮ್ಮ ಪ್ರಚಾರವನ್ನು ಸ್ವಾಗತ ಮಾಡುತ್ತೇನೆ. ಆದರೆ ಪ್ರಚಾರ ಬರಿಯ ಪ್ರಚಾರವಾಗಿ ಉಳಿಯಬಾರದು. ಪ್ರಚಾರದ ಪ್ರತಿಫಲ ರೈತನ ಮನೆ ಬಾಗಿಲಿಗೆ ಹೋಗಬೇಕು. ನೀವು ಪ್ರಚಾರ ಮಾಡಿದ್ದಕ್ಕೆ ನಾನು ಅಸೂಯೇ ಪಡಲಿಲ್ಲ. ಪ್ರಚಾರದ ಉದ್ದೇಶ ಸಾಮಾನ್ಯ ಜನರ ಮನೆ ಬಾಗಿಲಿಗೆ ತಲುಪಬೇಕು.

ಈ ಸಂಧರ್ಭದಲ್ಲಿ ಇಷ್ಟು ಸಲಹೆಗಳನ್ನು ಕೊಟ್ಟು ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ, ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಬಿ. ಇ. ರಾಮಯ್ಯ (ಸಿರಗುಪ್ಪ).--ಅಧ್ಯಕ್ಷರೆ, ಈಗ ನಮ್ಮ ಮುಂದಿರುವ 1960-61ನೆಯ ಸಾಲಿನ ಬಡ್ಜೆಟ್ಟನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ. ಮಾನ್ಯ ಹಣಕಾಸಿನ ಮಂತ್ರಿಗಳು ಹೋದ ವರ್ಷದಂತೆ ಈ ವರ್ಷವೂ ಉಳಿತಾಯದ ಬಡ್ಜೆಟ್ಟನ್ನು ನಮ್ಮ ಮುಂದಿಟ್ಟಿರುವುದಕ್ಕಾಗಿ ಅವರಿಗೆ ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸುತ್ತೇನೆ. ಎಷ್ಟೋ ಜನರು ಸರ್ಕಾರ ಚೆನ್ನಾಗಿ ಕೆಲಸ ಮಾಡುತ್ತಿಲ್ಲವೆಂದು ನಾನಾ ವಿಧವಾಗಿ ಟೀಕೆಗಳನ್ನು ಮಾಡಿದರು. ಆದರೆ ನಾವು ಕೂಲಂಕಷವಾಗಿ ಯೋಚನೆ ಮಾಡಿ ನೋಡಿದರೆ ವಾಸ್ತವ ಸಂಗತಿ ಗೊತ್ತಾಗುತ್ತದೆ. 1-11-1956ರಲ್ಲಿ ನವ ಮೈಸೂರು ರಾಜ್ಯವಾಯಿತು, ಆಗಿನಿಂದ ಎಷ್ಟು ಮಟ್ಟಿಗೆ ಅಭಿವೃದ್ಧಿ ಹೊಂದಿದೆ ಎಂದು ನೋಡಿದರೆ, ನಮ್ಮ ರಾಜ್ಯ ಇತರ ಎಲ್ಲ ರಾಜ್ಯಗಳಿಗಿಂತಲೂ ಪ್ರಗತಿ ಪಥದಲ್ಲಿದೆ ಎಂದರೆ ತಪ್ಪಲ್ಲ. ಅಲ್ಲಲ್ಲಿ ಕೆಲವು ತಪ್ಪುಗಳಿರಬಹುದು. ಈ ಹೊಸ ರಾಜ್ಯದಲ್ಲಿ ನಾವು ಐದು ಬೇರೆ ಬೇರೆ ಪ್ರದೇಶಗಳವರ ಕೂಡಿದ್ದೇವೆ, ಐದು ಬೇರೆ ಬೇರೆ ರೀತಿಯ ಕಾನೂನುಗಳಿದ್ದುವು, ಹೀಗೆಯೇ ಇನ್ನೂ ಅನೇಕ ತೊಡರುಗಳಿವೆ. ಇವನ್ನೆಲ್ಲಾ ಸಮನ್ವಯ ಮಾಡಬೇಕಾದರೆ ಕಷ್ಟವಾಗುತ್ತದೆ. ಇಷ್ಟಾದರೂ ನಾನಾ ಅಭಿವೃದ್ಧಿ ಕಾರ್ಯಗಳು ನಡೆದಿರುವುದನ್ನು ನೋಡಿದರೆ, ನಿಜವಾಗಿಯೂ ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಆಡಳಿತದ ವಿಷಯದಲ್ಲಿ ಎಷ್ಟೋ ವಿಧವಾಗಿ ಹೇಳಿದರು. ಆದರೆ ಪ್ರತಿ ವರ್ಷವೂ ಆಡಳಿತ ಸುಧಾರಿಸುತ್ತಿದೆಯೆಂದರೆ ತಪ್ಪಾಗುವುದಿಲ್ಲ. ರೆವಿನ್ಯೂ ಇಲಾಖೆಯನ್ನು ನೋಡಿದರೆ ಮೊದಲಿಗೂ ಈಗಿಗೂ ಹೋಲಿಸಿದರೆ, ತಡವಾಗುವುದು ಬಹಳ ಕಡಮೆಯಾಗಿದೆ. ಆದುದರಿಂದ ನಾವು ಸುಮ್ಮನೆ ಟೀಕೆ ಮಾಡುವುದರಿಂದ ಯಾವ ವಿಧವಾದ ಕೆಲಸವೂ ಆಗುವುದಿಲ್ಲ. ಏನಾದರೂ ತಪ್ಪಾದರೆ ಅದನ್ನು ಸರ್ಕಾರಕ್ಕೆ ತೋರಿಸಿ ಸರಿ ಮಾಡಿಸುವುದು ಪ್ರತಿಯೊಬ್ಬ ಸದಸ್ಯರ ಕರ್ತವ್ಯ.

ಕೆಲವರು ಡಿವಿಜನಲ್ ಕಮೀಷನರ ಆಫೀಸನ್ನು ತೆಗೆದು ಹಾಕಬೇಕು, ಸಾಕಷ್ಟು ಕೆಲಸವಿಲ್ಲ ಎಂದು ಹೇಳಿದರು. ನಮ್ಮ ರಾಜ್ಯದಲ್ಲಿ ನಾಲ್ಕು ಡಿವಿಜನ್‌ಗಳಿವೆ. ಇವನ್ನು ಈಗಲೇ ತೆಗೆದರೆ ಆಡಳಿತ ದೃಷ್ಟಿಯಿಂದ ಕಷ್ಟವಾಗುತ್ತದೆ. ಹೇಗೆಂದರೆ, ಬೆಂಗಳೂರು, ಬೆಳಗಾಮ್, ಮೈಸೂರು ಮತ್ತು ಗುಲ್ಬರ್ಗ ಈ ನಾಲ್ಕು ಕಡೆ ನಾಲ್ಕು ರೀತಿಯ ನಿಯಮ ನಿಬಂಧನೆಗಳಿವೆ, ಇವಕ್ಕೆ ಹೊಂದಿ ಕೊಂಡು ಹೋಗಬೇಕೆಂದರೆ. ಈ ಎಲ್ಲ ಡಿವಿಜನಲ್ ಕಮಿಷನರುಗಳನ್ನು ತೆಗೆದರೆ ಕಷ್ಟವಾಗುತ್ತದೆ. Uniform laws ಪೂರ್ಣವಾಗಿ ಬರುವವರೆಗಾದರೂ ಡಿವಿಜನಲ್ ಕಮಿಷನರ ಹುದ್ದೆಗಳು ಮುಂದುವರಿಯಬೇಕೆಂದು ಹೇಳುತ್ತೇನೆ.

ಗಡಿಯ ಪ್ರಶ್ನೆ ಹೋದ ಅಧಿವೇಶನದಲ್ಲಿಯೂ ಬಂದಿತ್ತು; ಆಗ ನನ್ನ ಅಭಿಪ್ರಾಯ ಹೇಳಿದ್ದೇನೆ. ಮೈಸೂರು ಆಂಧ್ರದ ಗಡಿ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಆಗ ಮುಖ್ಯ ಮಂತ್ರಿಗಳು ಆದಷ್ಟು ಬೇಗ ಸರಿಪಡಿಸುವುದಾಗಿ ಹೇಳಿದರು, ಆದರೆ ಇದು ವರೆಗೂ ಈ ಬಗ್ಗೆ ಒಂದು 'ಚ'ಕಾರ ಶಬ್ದವನ್ನು ಮಾತನಾಡಿಲ್ಲದಿರುವುದನ್ನು ಕಂಡು ವ್ಯಸನವಾಗುತ್ತದೆ. ಮೈಸೂರಿನ ವಿಷಯವಾಗಿ ಆಂಧ್ರ ರಾಜ್ಯದಲ್ಲಿ ಎಷ್ಟೋ ಗಲಾಟೆ ಮಾಡುತ್ತಾರೆ, ಆದರೆ ಮೈಸೂರು ಸರ್ಕಾರದವರು ಈ ವಿಷಯದಲ್ಲಿ ಸುಮ್ಮನಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಆಂಧ್ರದ ಮುಖ್ಯ ಮಂತ್ರಿಗಳು ಆಂಧ್ರ ವಿಧಾನ ಸಭೆಯಲ್ಲಿ ಹೇಳಿದ ಹಾಗೆ ಮೈಸೂರಿನ ಮುಖ್ಯ ಮಂತ್ರಿಗಳು ನಮ್ಮ ಸಭೆಯಲ್ಲಿ ಯಾವ ಮಾತನ್ನು ಆಡಿಲ್ಲವೆಂದು ಹೇಳಿದರು, ಹೋದ ಅಧಿವೇಶನದಲ್ಲಿ ಮುಖ್ಯ ಮಂತ್ರಿಗಳು ನಾನು ಈ ವಿಷಯವನ್ನು ಆಂಧ್ರದ ಮುಖ್ಯ ಮಂತ್ರಿಗಳೊಡನೆ ಸಮಾಲೋಚನೆ ಮಾಡಿ, ಆಲೂರು, ಮುಂತಾದ ಪ್ರಶ್ನೆಗಳನ್ನು ಬಗೆಹರಿಸುತ್ತೇನೆ' ಎಂದು ಹೇಳಿದರು ಆದರೆ......

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಒಂದು ವಿಚಾರವನ್ನು ಗಮನಿಸಬೇಕು. ಅವರು ಹೇಳಿದ ಕಾಲದಲ್ಲಿ ನಾನೂ ಇಲ್ಲಿನ ಮುಖ್ಯ ಮಂತ್ರಿಯಾಗಿರಲಿಲ್ಲ, ಈಗ ಆಂಧ್ರದಲ್ಲಿ ಮುಖ್ಯ ಮಂತ್ರಿಗಳಾಗಿರುವವರೂ ಅಲ್ಲಿ ಮುಖ್ಯ ಮಂತ್ರಿಗಳಾಗಿರಲಿಲ್ಲ. ಹಿಂದೆ ನಡೆದುದು ನನಗೂ ಗೊತ್ತಿಲ್ಲ, ಅವರಿಗೂ ಗೊತ್ತಿಲ್ಲ.

ಶ್ರೀ ಬಿ. ಇ. ರಾಮಯ್ಯ.—ಮುಖ್ಯ ಮಂತ್ರಿಗಳು ಬೇರೆ ಇರಬಹುದು. ಆದರೆ ಸರ್ಕಾರವಿರುತ್ತದೆ. ಬೇರೆ ಬೇರೆ ಸಚಿವರು ಬರಬಹುದು, ಹೋಗಬಹುದು. ಯಾರಾದರೂ ಸರ್ಕಾರವನ್ನು ನಡೆಸುತ್ತಿರುತ್ತಾರೆ. ಆದವಾನಿ, ಆಲೂರು, ರಾಯದುರ್ಗದ ಜನರು ಕರ್ಣಾಟಕಕ್ಕೆ ಸೇರುತ್ತೇವೆಂದು ಮೂರು ವರ್ಷಗಳಿಂದ ಸತತವಾಗಿ ಕೇಳುತ್ತಿದ್ದಾರೆ.

ಡಾ|| ಆರ್. ನಾಗನಗೌಡ (ಹೊಸಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈಗಲಾದರೂ ಈ ವಿಷಯವನ್ನು ಆಂಧ್ರ ಸರ್ಕಾರದ ಗಮನಕ್ಕೆ ತಂದಿದ್ದಾರೆಯೆ ? ಅವರೊಡನೆ ಈ ಬಗ್ಗೆ ಮಾತನಾಡಿದ್ದಾರೆಂದು ನಾವು ಅಂದುಕೊಳ್ಳಬಹುದೆ ?

ಶ್ರೀ ಬಿ. ಡಿ. ಜತ್ತಿ.—ನನಗಿಂತ ಮೊದಲು ಡಾ|| ನಾಗನಗೌಡರು ಮಂತ್ರಿಮಂಡಲದಲ್ಲಿದ್ದರು. ಏನಾಗಿದೆ ಎಂಬುದು ನನಗೆ ಗೊತ್ತಿಲ್ಲ.

ಶ್ರೀ ಬಿ. ಇ. ರಾಮಯ್ಯ.—ಆಂಧ್ರ ಅಸೆಂಬ್ಲಿಯಲ್ಲಿ ಅಲ್ಲಿನ ಮುಖ್ಯ ಮಂತ್ರಿಗಳು ಹೇಳಿದ ಮೇಲೆ, ಅದರಲ್ಲಿ ಸತ್ಯಾಂಶವಿದೆಯೋ ಇಲ್ಲವೊ ಎಂದು ಕೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯದಲ್ಲಿ ನಿರ್ಲಕ್ಷ್ಯ ಮಾಡದೆ ಗಮನ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಮುಖ್ಯ ಮಂತ್ರಿಗಳು ಅಸೆಂಬ್ಲಿಯಲ್ಲಿ ಹೇಳಬೇಕಾದರೆ ಸರ್ಕಾರದ ಧೋರಣೆಯನ್ನು ಹೇಳಬೇಕು. ನಾವು ಏನು ತಿಳಿದುಕೊಳ್ಳಬೇಕು ? ಈ ಬಗ್ಗೆ ಮುಖ್ಯ ಮಂತ್ರಿಗಳು ಉತ್ತರದಲ್ಲಿ ಹೇಳಬೇಕೆಂದು ಬಿನ್ನೈಸುತ್ತೇನೆ.

ನಮ್ಮ ಕರ್ಣಾಟಕದ ಜನರು ಮೃದು ಸ್ವಭಾವದವರು, ಹೆಚ್ಚು ಗಲಾಟೆ ಮಾಡುವವರಲ್ಲ, ಹೀಗಿರುವಾಗ ಆ ತಾಲ್ಲೂಕುಗಳ ಜನರು ಮೂರು ವರ್ಷದಿಂದಲೂ ನಾವು ಮೈಸೂರಿಗೆ ಸೇರುತ್ತೇವೆಂದು ಹೇಳುತ್ತಿರುವಾಗ ನಾವು ಸುಮ್ಮನಿರಬಾರದು. ರಾಯದುರ್ಗ, ಆಲೂರು, ಆದವಾನಿ, ಮಡಕಶಿರಾ, ಕೇರಳದಲ್ಲಿರುವ ಕಾಸರಗೋಡು ಈ ಪ್ರದೇಶಗಳೆಲ್ಲ ಹೊರಗಿವೆ. ಸಂಬಂಧಪಟ್ಟ ರಾಜ್ಯಗಳೊಡನೆ ಮುಖ್ಯಮಂತ್ರಿಗಳು ವ್ಯವಹಾರ ನಡೆಸಿ, ನಮಗೆ ನ್ಯಾಯವಾಗಿ ಬರಬೇಕಾದ ಪ್ರದೇಶಗಳು ಬರುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪೋಲೀಸ್ ಇಲಾಖೆಯ ಆಡಳಿತದ ವಿಷಯದಲ್ಲಿ ಎಷ್ಟೋ ಮಂದಿ ಟೀಕೆ ಮಾಡಿದರು. ನಿಜವಾಗಿಯೂ ಈ ಇಲಾಖೆಯ ಆಡಳಿತ ಕೀಳುಮಟ್ಟಕ್ಕಿಳಿದಿದೆಯೆಂದು ಅವರಂತೆ ನಾನೂ ಹೇಳಬೇಕಾಗಿದೆ. ದಿನದಿನಕ್ಕೆ ಬೇರೆ ಇಲಾಖೆಗಳು ಸುಧಾರಿಸುತ್ತಿದ್ದರೆ ಪೋಲೀಸ್ ಇಲಾಖೆಯ ಆಡಳಿತ ದಿನದಿನಕ್ಕೆ ಕೀಳುಮಟ್ಟಕ್ಕೆ ಹೋಗುತ್ತಿದೆ ಎಂದರೆ ತಪ್ಪಲ್ಲ. ಇದಕ್ಕೆ ಕಾರಣ ಏನೆಂಬುದು ಗೊತ್ತಿಲ್ಲ. ಪೋಲೀಸ್ ಇಲಾಖೆಯಲ್ಲಿ ಲಂಚಗುಳಿತನ ಹೆಚ್ಚಾಗುತ್ತಿದೆ. ಬಹುಮಟ್ಟಿಗೆ ಇದಕ್ಕೆ ಕಾರಣ ಪಾನನಿರೋಧ. ಈ ಪಾನನಿರೋಧ utter failure ಎಂದರೆ ತಪ್ಪಲ್ಲ. ಇದಕ್ಕೆ ಬೇಕಾದಷ್ಟು ಕಾರಣಗಳಿವೆ. ಇದು ಸರಿಯಾಗಿ ನಡೆಯುತ್ತಿದೆಯೋ ಇಲ್ಲವೊ ಎಂಬುದನ್ನು ನೋಡಿಕೊಳ್ಳಲು ಸಮಿತಿಯನ್ನಾದರೂ ಮಾಡಿದ್ದಾರೆಯೆ ಎಂದರೆ, ಅದೂ ಇಲ್ಲ. ಒಂದು ಸಮಿತಿ ಮಾಡಿದರೂ, ಮೀಟಿಂಗ್ ಮಾಡಿಹೋಗುತ್ತಾರೆ; ನಿಜವಾಗಿ ಪಾನನಿರೋಧ ಯಶಸ್ವಿಯಾಗಿ ನಡೆಯುತ್ತಿದೆಯೆ ಅಥವ ಇಲ್ಲವೆ ಎಂಬುದನ್ನು ಸರ್ಕಾರ ನೋಡಬೇಕು. ಪಾನನಿರೋಧದಿಂದ ರಾಜ್ಯಕ್ಕೆ ಬರುವ ಆದಾಯ ಕಡಮೆಯಾಯಿತು. ಬರಿಯ ಆದಾಯ ಕಡಮೆಯಾದುದೊಂದೇ ಅಲ್ಲ, ಜನರ ಆರೋಗ್ಯವೂ ಕೆಡುವುದಕ್ಕೆ ಅವಕಾಶವಾಗಿದೆ. ಪ್ರತಿ ತಾಲ್ಲೂಕಿನಲ್ಲಿಯೂ ಗೃಹ ಕೈಗಾರಿಕೆಯಾಗಿರುವ Illicit distillations ಎಂದರೆ, ಕಳ್ಳಭಟ್ಟಿಗೆ ಪೋಲೀಸರೇ ಪ್ರೋತ್ಸಾಹ ಕೊಡುತ್ತಿದ್ದಾರೆಂದರೆ ತಪ್ಪಾಗುವುದಿಲ್ಲ. ಆದುದರಿಂದ ಈ ಪಾನನಿರೋಧವನ್ನು ಯಶಸ್ವಿಯಾಗಿ ಜಾರಿ ಮಾಡುವುದು ಸಾಧ್ಯವಾದರೆ ಸರ್ಕಾರ ಮಾಡಲಿ, ಇಲ್ಲದಿದ್ದರೆ ಇದನ್ನು ರದ್ದು ಮಾಡಬೇಕೆಂದು ಮಾನ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

†ಶ್ರೀ ಎಚ್. ರಾಚಯ್ಯ (ವ್ಯವಸಾಯ, ಅಬ್ಕಾರಿ ಮತ್ತು ಸಮಾಜ ಕಲ್ಯಾಣ ಶಾಖೆಗಳ ಮಂತ್ರಿಗಳು).—ಮಾನ್ಯ ಸದಸ್ಯರು ಆಡಳಿತ ಪಕ್ಷಕ್ಕೆ ಸೇರಿದವರು. ಪಕ್ಷ ಒಪ್ಪಿರುವ ನೀತಿಯ ಪ್ರಕಾರ ಸರ್ಕಾರ ನಡೆಸಿಕೊಂಡುಹೋಗುತ್ತಿದೆ. ಮಾನ್ಯ ಸದಸ್ಯರು ಆ ರೀತಿ ಮಾತನಾಡಬಾರದು. ಆಡಳಿತ ಪಕ್ಷಕ್ಕೆ ಸೇರಿದವರಾದ್ದರಿಂದ scrap ಮಾಡಬೇಕೆಂದು ಹೇಳಬಾರದು. ಆಡಳಿತದ ವಿಚಾರದಲ್ಲಿ ಸರಿಯಾಗಿ ಆಗುತ್ತಿಲ್ಲವೆಂದರೆ ಅದನ್ನು ಸರಿಪಡಿಸಬಹುದು. scrap ಮಾಡುವುದು ಸಂಸ್ಥಾನ ಸರ್ಕಾರದ ಕೈಯಲ್ಲಿಲ್ಲ. ರಾಜ್ಯಾಂಗದ ಪ್ರಕಾರ ಪಾನನಿರೋಧವನ್ನು ಜಾರಿಗೆ ತಂದಿದ್ದೇವೆ. ಆಡಳಿತ ಪಕ್ಷ ಒಂದು ನೀತಿಯನ್ನು ಒಪ್ಪಿಕೊಂಡಿದೆ ಮತ್ತು ಮಾನ್ಯ ಸದಸ್ಯರು ಆಡಳಿತ ಪಕ್ಷಕ್ಕೆ ಸೇರಿದ್ದವರು. ಅವರು ಆರೀತಿ ಮಾತನಾಡಬಾರದೆಂದು ಮತ್ತೊಮ್ಮೆ ಹೇಳುತ್ತೇನೆ.

SRI V. SRINIVASA SHETTY (Coondapur).—I really do not understand the objection raised by the Hon'ble Minister for Prohibition. My friend on the other side was going to state the actual state of affairs, the working of prohibition, the unworkability of prohibition in all the areas. If my

(SRI V. SRINIVASA SHETTY)

friend the Minister was going to gag one of the members of this House because he belongs to the party, it is very unfair.

Sri N. RACHIAH.—It is left to the party.

Sri V. SRINIVASA SHETTY.—The party matter comes within the party and not in this House.

Sri B. D. JATTI.—The policy regarding prohibition is a policy accepted here in this Assembly. Similarly it is a policy accepted by the All India Congress Committee and the Working Committee. The policy accepted by the Working Committee and the A I.C.C. has been reflected through the Congress Party Government. That is what Sri Rachiah means.

Sri C. J. MUCKANNAPPA (Gubbi).—He asked him not to speak in that strain. They have no right to gag the mouth of any Hon'ble Member in this House. Let them take any disciplinary action against any person belonging to their party who has opposed their policy. Let them not be wild or check any member speaking in this House. Let them tackle the issue in the party, make a report to the Executive Committee and take disciplinary action against him and expel him out of the party.

Mr. SPEAKER.—I am not concerned as to to which party a member belongs and I do not take into consideration what one party says and what opinion the other party holds in respect of that. I am only concerned with the relevant remarks of the Hon'ble Members. If I find that the remark was relevant and not unparliamentary, though it may be against the accepted policy of the party; I am not to bother about it. But there is another story in the present case. After all, the Prohibition Act has been accepted by this House and so it is binding on the House. The Act can only be changed by an amending Act. Any Hon'ble Member may hold an opinion that the Act may be amended, but there is no amendment before us. To hold an opinion is not incorrect.

Sri V. SRINIVASA SHETTY.—Is it not up to a member of the House to say that it is unworkable and the state of affairs is appalling ?

Mr. SPEAKER.—The enforcement of the prohibition can be criticised in this House

Sri V. SRINIVASA SHETTY—That is what he is doing.

Mr. SPEAKER.—But no member can be allowed to say that it ought to be scrapped; he can say that by an amendment that the policy should be revised.

Sri C. J. MUCKANNAPPA.—Suppose we pass a law which works against a society. Am I not entitled to say that the law is working against the society ?

Mr. SPEAKER.—The Hon'ble Member can say that the purpose of the Act has not been fulfilled.

ಶ್ರೀ ಬಿ. ಇ. ರಾಮಯ್ಯ.—ಪಾನನಿರೋಧವನ್ನು ಯಶಸ್ವಿಯಾಗಿ ಜಾರಿಗೆ ತರಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಪಾನನಿರೋಧವು ಏಕೆ ಸರಿಯಾಗಿ ನಡೆಯುತ್ತಿಲ್ಲ, ಸರಿಯಾಗಿ ನಡೆಯಲು ಏನೇನು ಕ್ರಮ ತೆಗೆದುಕೊಳ್ಳಬೇಕೆನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕು. ಪಾನನಿರೋಧ ಅಯಶಸ್ವಿಯಾಗಿದೆ ಎಂದು ಅದನ್ನು ತಳ್ಳಿಹಾಕದೆ ಯಾವ ರೀತಿ ಜಾರಿಗೆ ತಂದರೆ ಜನರಿಗೆ ಹಿತವಾಗುತ್ತದೆ ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕು.

ಮಾನ್ಯ ಮಂತ್ರಿಗಳಾದ ರಾಚಯ್ಯನವರು scrap ಮಾಡುವ ಪ್ರಶ್ನೆ ಇಲ್ಲವೆಂದು ಹೇಳಿದರು. ಈಗ ಇರುವ ಮಂತ್ರಿಗಳಿಗೆ ವ್ಯವಸಾಯ, ಸಮಾಜ ಕಲ್ಯಾಣ, ಪಾನನಿರೋಧ, ಅಬ್ಕಾರಿ ಇಷ್ಟು ಬಾಬುಗಳಿವೆ. ಪಾನನಿರೋಧ ಯಶಸ್ವಿಯಾಗಬೇಕಾದರೆ ಅದಕ್ಕಾಗಿಯೇ ಒಬ್ಬ ಪ್ರತ್ಯೇಕ ಮಂತ್ರಿಗಳಿದ್ದರೆ ಚೆನ್ನಾಗಿರುತ್ತೆ ಎಂದು ಹೇಳುತ್ತೇನೆ. ಪಾನನಿರೋಧ ಶಾಖೆಯ ಮಂತ್ರಿಗಳನ್ನು ಕೇಳಿದರೆ ಪೋಲಿಸ್‌ನವರಿಗೆ ಇದರ ಕಾರ್ಯ ವಹಿಸಿದ್ದೇವೆಂದು ಹೇಳುತ್ತಾರೆ. ಒಳಾಡಳಿತ ಶಾಖೆಯ ಮಂತ್ರಿಗಳನ್ನು ಕೇಳಿದರೆ ನನಗೆ ಪೋಲಿಸ್ ಆಡಳಿತ ಮಾತ್ರ ಸಂಬಂಧಪಟ್ಟಿದೆ ಎಂದು ಹೇಳುತ್ತಾರೆ. ಪೋಲೀಸಿನವರಿಗೆ ಪಾನನಿರೋಧ ಕಾರ್ಯವನ್ನು ವಹಿಸಿರುವುದರಿಂದ ಯಶಸ್ವಿಯಾಗಿ ನಡೆಯುವುದಿಲ್ಲವೆಂದು ಘಂಟಾಘೋಷವಾಗಿ ಹೇಳಬಯಸುತ್ತೇನೆ. ಪಾನನಿರೋಧ ಕಾರ್ಯವನ್ನು ಪೋಲೀಸ್ ಇಲಾಖೆಗೆ ವಹಿಸಿರುವುದರಿಂದಲೇ ಅಲ್ಲಿ ಲಂಚ ಹೆಚ್ಚಾಗಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಪಾನನಿರೋಧ ಜಾರಿಯಲ್ಲಿರುವ ಕಡೆ ಒಬ್ಬೊಬ್ಬ ಇನ್ಸ್‌ಪೆಕ್ಟರಿಗೆ ಎರಡು ಸಾವಿರ ರೂಪಾಯಿ ಸಂಭಾವನೆ ಅಥವಾ ಮಾಮೂಲು ಬರುತ್ತದೆಂದು ಹೇಳುತ್ತಾರೆ. ಈರೀತಿಯಾಗಿ ಇನ್ಸ್‌ಪೆಕ್ಟರ್ ಜನರಲ್ ಅವರಿಗೆ ಬರುವಷ್ಟು ಸಂಬಳ ಸಂಭಾವನೆ ರೂಪದಲ್ಲಿ ಪ್ರತಿ ತಿಂಗಳೂ ಬರುತ್ತದೆ. ಪಾನನಿರೋಧ ಕಾರ್ಯವನ್ನು ಯಶಸ್ವಿಯಾಗಿ ಮಾಡಲು ಪ್ರತ್ಯೇಕ ಸಿಬ್ಬಂದಿಯನ್ನು ನೇಮಿಸಬೇಕು ಮತ್ತು ಒಂದು ಪ್ರತ್ಯೇಕ ಇಲಾಖೆಯನ್ನು

ತೆರದು ಅದಕ್ಕಾಗಿಯೇ ಒಬ್ಬ ಮಂತ್ರಿಗಳನ್ನು ನೇಮಿಸಬೇಕು ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ರಾಚಯ್ಯ (ಚಾಮರಾಜನಗರ).—ಕುಡಿಯುವುದನ್ನು ತಪ್ಪಿಸಿದ್ದೀರಿ; ಕುಡಿಯಲು ಅವಕಾಶ ಕೊಡಬೇಕೆಂದು ಜನರು ಅರ್ಜಿಗಳನ್ನು ಕೊಡುತ್ತಿದ್ದಾರೆ.

ಶ್ರೀ ಬಿ. ಇ. ರಾಮಯ್ಯ.—ನಮ್ಮ ಕಡೆ ಆರೀತಿ ಯಾರೂ ಅರ್ಜಿ ಕೊಟ್ಟಿಲ್ಲ.

Uniform laws ವಿಷಯದಲ್ಲಿ ಸುಮಾರು 78 ಬಿಲ್‌ಗಳನ್ನು ತಯಾರು ಮಾಡಿ ಕೆಲವನ್ನು ಈಗಾಗಲೇ ಅಸೆಂಬ್ಲಿಯ ಮುಂದೆ ಇಟ್ಟಿದ್ದೇವೆಂದು ನ್ಯಾಯಾಂಗ ಮಂತ್ರಿಗಳು ಹೇಳಿದರು. Uniform laws ಜಾಗ್ರತೆ ಬರದೆಇದ್ದರೆ ನಮಗೆ ಬಹಳ ಅನಾನುಕೂಲವಾಗುತ್ತದೆಂದು ಹೇಳಬಯಸುತ್ತೇನೆ. ಉದಾಹರಣೆಗೆ ಬಳ್ಳಾರಿ ಜಿಲ್ಲೆಯಲ್ಲಿ ಈಗ ಮೂರು ತರಹ ರೂಲ್ಸ್ ಮತ್ತು ಕಾನೂನುಗಳಿವೆ. ಬಳ್ಳಾರಿ ಜಿಲ್ಲೆ ಮದರಾಸ್ ರಾಜ್ಯದಲ್ಲಿದ್ದಾಗ ಜಾರಿಯಲ್ಲಿದ್ದ ಕಾನೂನುಗಳು, ಒಂದನೇ ಅಕ್ಟೋಬರ್ 1953ರಿಂದ ಮೈಸೂರಿಗೆ ಸೇರಿದ ಮೇಲೆ ಹಳೆಯ ಮೈಸೂರಿನ ಕಾನೂನು ಮತ್ತು ರೂಲ್ಸ್ ಮತ್ತು ಒಂದನೇ ಜನವರಿ 1956 ರಿಂದೀಚೆಗೆ ಹೊಸ ಮೈಸೂರು ರೂಲ್ಸ್ ಜಾರಿಯಲ್ಲಿವೆ. ಇದರಿಂದ ಜನರಿಗೆ ಎಷ್ಟೋ ತೊಂದರೆಯಾಗುತ್ತದೆ. ಆದುದರಿಂದ ಸರ್ಕಾರ ಆದಷ್ಟು ಜಾಗ್ರತೆ Uniform laws ತರುವುದಕ್ಕೆ ಪ್ರಯತ್ನಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇನ್ನೊಂದು ಮುಖ್ಯವಾದ ವಿಷಯವೆಂದರೆ, ರೈಲ್ವೆ ಲೈನ್‌ಗೆ ಸಂಬಂಧಪಟ್ಟದ್ದು. ಮೂರು ವರ್ಷಗಳಿಂದಲೂ ಹೊಸದಾಗಿ ಒಂದು ಮೈಲಿಯಷ್ಟು ರೈಲ್ವೆ ಮಾರ್ಗ ಕೂಡ ನಮ್ಮ ರಾಜ್ಯದಲ್ಲಿ ಆಗಿಲ್ಲ. ಕೇಂದ್ರ ಸರ್ಕಾರ ನಮ್ಮ ರಾಜ್ಯವನ್ನು ಬಹಳ ನಿಕೃಷ್ಟವಾಗಿ ಕಾಣುತ್ತಿದೆ. ಯಾವ ರಾಜ್ಯದಲ್ಲಿ ನೋಡಿದರೂಕೂಡ ಹೊಸದಾಗಿ ರೈಲ್ವೆ ಮಾರ್ಗಗಳನ್ನು ಕೊಡುತ್ತಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿಮಾತ್ರ ಒಂದು ಮೈಲಿ ಹೊಸ ಮಾರ್ಗವನ್ನೂ ತೆಗೆದುಕೊಂಡಿಲ್ಲ. ಮಂಜೂರಾಗಿರುವುದನ್ನು ಪ್ರಾರಂಭ ಮಾಡಿಲ್ಲ. ಆದುದರಿಂದ ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೆ ಹೆಚ್ಚುಹೆಚ್ಚು ಒತ್ತಾಯಮಾಡಿ ಹೊಸಹೊಸ ರೈಲ್ವೆ ಮಾರ್ಗಗಳನ್ನು ಹಾಕಿಸಬೇಕು.

ಕಮ್ಯೂನಿಕೇಷನ್ ದೃಷ್ಟಿಯಿಂದ ಮತ್ತು ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಇದು ಅತ್ಯವಶ್ಯಕವಾಗಿ ಬೇಕಾಗುತ್ತದೆ. ಆದುದರಿಂದ ಇದನ್ನು ತಾತ್ಕಾಲ ಮಾಡದಂತೆ ಏರ್ಪಾಡುಮಾಡಬೇಕೆಂದು ಹೇಳುತ್ತೇನೆ.

2 P.M.

ರೋಡ್ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟಿನ ವಿಷಯ ಎಷ್ಟೋ ಜನರು ಹೇಳಿದರು. ನಿಜವಾಗಿಯೂ ಇಲ್ಲಿ ಹಣ ಲೀಕೇಜ್ ಆಗಿ ಸರ್ಕಾರಕ್ಕೆ ಬರಬೇಕಾದ ಹಣ ಬರುತ್ತಾ ಇಲ್ಲ ಎಂದರೆ ತಪ್ಪಾಗುವುದಿಲ್ಲ. ಏಕೆಂದರೆ ಪ್ರತಿಯೊಂದು ಬಸ್‌ನಲ್ಲೂ overload ಆಗಿ ಹೋಗುತ್ತಾ ಇದೆ. ಆದರೆ ಸರ್ಕಾರಕ್ಕೆ ಹಣ ಬರುವುದು ಬಹಳ ಕಡಿಮೆಯಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು ಅದಕ್ಕೇ ಬಸ್ ದರ ಹೆಚ್ಚು ಮಾಡುವುದಕ್ಕೆ ಆಸ್ಪದವಾಯಿತು. ನಷ್ಟವಾಗುತ್ತಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದನ್ನು ಕೇಳಿದರೆ ಬಹಳ ವಿಷಾದವಾಗುತ್ತದೆ. ಪ್ರೈವೇಟ್ ಬಸ್‌ಮಾಲೀಕರು 3-4 nP. ಪ್ರಕಾರ ಓಡಿಸಿದರೂ ಎಷ್ಟು ಹೆಚ್ಚು ಹಣ ಬರುತ್ತಿದೆ. ಅಂಥಾದ್ದರಲ್ಲಿ ನಷ್ಟವಾಗುತ್ತಿದೆ ಎಂದು ಹೇಳಿ ಬಸ್‌ಫೇರ್ ಹೆಚ್ಚು ಮಾಡಿದ್ದೇವೆ ಎಂದು ಹೇಳಿದರೆ ಬಹಳ ವ್ಯಸನವಾಗುತ್ತದೆ. ಅದರಿಂದಲೇ ಜನತೆಯಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. 5 nP. ಎಂದು ಮಾಡಿರುವುದನ್ನು ಜಾಗ್ರತೆ ಮೊದಲು ಎನಿತ್ತೋ ಅದೇ ಪ್ರಕಾರ ಮಾಡಬೇಕೆಂದು ಸರ್ಕಾರದವರನ್ನು ವಿನಂತಿಸಿಕೊಳ್ಳುತ್ತೇನೆ. ನಮಗೆ ಬರತಕ್ಕ ಹಣ ಸರಿಯಾಗಿ ಬರುವಂತೆ ಲೀಕೇಜ್ ಆಗದಂತೆ ನೋಡಿಕೊಂಡರೆ ಬೇಕಾದಷ್ಟು ಹಣ ಬರುತ್ತದೆ, ನಷ್ಟವಾಗುವುದಿಲ್ಲ. ಅದಕ್ಕೆ ಬೇಕಾದರೆ ನಾವು ಸ್ಟೇಟ್ ಟ್ರಾನ್ಸ್‌ಪೋರ್ಟ್ ಕಮಿಟಿ ಅಂತಲೋ ಅಥವಾ ಅಡ್ವೈಸರಿ ಕಮಿಟಿ ಎಂತಲೋ ಒಂದು ಕಮಿಟಿ ನೇಮಕ ಮಾಡಿ ಏನೇನು ತಪ್ಪಿದೆ ಎಲ್ಲೆಲ್ಲಿ ಹಣ ದುರ್‌ವಿನಿಯೋಗವಾಗುತ್ತದೆ ಎಂಬುದನ್ನು ಕಂಡುಹಿಡಿದು ಸರಿಪಡಿಸಿಕೊಳ್ಳಬಹುದು ಎಂದು ಸರ್ಕಾರದವರ ಗಮನಕ್ಕೆ ತರಲು ಬಯಸುತ್ತೇನೆ.

ನಮ್ಮ ಜಿಲ್ಲೆಯ ವಿಷಯವಾಗಿ ಹೇಳುವುದಾದರೆ, ಬಳ್ಳಾರಿ ಜಿಲ್ಲೆಯಲ್ಲಿ ಲೋಕಲ್ ಕ್ಯಾಂಡಿಡೇಟ್ಸ್ ಇದ್ದಾರೆ. ಸರ್ಕಾರಕ್ಕೂ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೂ ಇದನ್ನು ತಂದಿದ್ದೇನೆ. ಸರ್ಕಾರದವರೂ ಕೂಡ 1-10-53, 30-11-54 ರಲ್ಲಿ ನೇಮಕ ಮಾಡಿರತಕ್ಕ ಲೋಕಲ್ ಕ್ಯಾಂಡಿಡೇಟ್ಸನ್ನು ರೆಗ್ಯುಲರೈಸ್ ಮಾಡಿದ್ದಾರೆ. ಆದರೆ 1-12-54 ರಿಂದ ಇಲ್ಲಿಯವರೆಗೂ 5–6 ವರ್ಷದಿಂದ ಮಾಡಿಲ್ಲ. ಅವರು ಬಹಳ ನಿಷ್ಠೆಯಿಂದ ಸೇವೆ ಮಾಡುತ್ತಾ ಇದ್ದಾರೆ. ಇದುವರೆಗೂ ರೆಗ್ಯುಲರೈಸ್ ಮಾಡಿಲ್ಲ. ಪಬ್ಲಿಕ್ ಸರ್ವಿಸ್ ಕಮಿಷನ್ ಅವರೂ ರೆಗ್ಯುಲರೈಸ್ ಮಾಡುವುದಿಲ್ಲ. ಅವರು ಮನೆಗೆ ಹೋಗತಕ್ಕ ಪರಿಸ್ಥಿತಿ ಬಂದಿದೆ. ಆದ್ದರಿಂದ ಸರ್ಕಾರದಲ್ಲಿ ನಿಷ್ಠೆಯಿಂದ ಕೆಲಸಮಾಡಿರತಕ್ಕ ಈ ಲೋಕಲ್ ಕ್ಯಾಂಡಿಡೇಟ್ಸನ್ನು ಖಾಯಂಮಾಡಬೇಕು ಹೊಸದಾಗಿ ರೆಕ್ರೂಟ್ ಮಾಡಿದವರು ಏನೇನೂ ಕೆಲಸ ಮಾಡುವುದಿಲ್ಲ. 1-1-60 ರ ವರೆಗೂ ಟೈಂ ಕೊಟ್ಟು ರೆಗ್ಯೂಲರೈಸ್ ಮಾಡಬೇಕು ಇಲ್ಲದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಎಂದು ಸರ್ಕಾರದವರಲ್ಲಿ ಮನವಿ ಮಾಡುತ್ತೇನೆ.

ಪಬ್ಲಿಕ್ ಸರ್ವಿಸ್ ಕಮಿಷನ್‌ನವರೇ ಎರಡನೆಯ ಡಿವಿಜನ್ ಕ್ಲಾರ್ಕ್‌ಗಳನ್ನು ನೇಮಕಮಾಡುವುದರಿಂದ ಬಹಳ ಕಷ್ಟವಾಗುತ್ತಾ ಇದೆ. ಆದುದರಿಂದ ಡಿವಿಜನಲ್ ಕಮೀಷನರ ಲೆವಲ್‌ನಲ್ಲಿ ಒಂದು ಕಮಿಟಿಮಾಡಿ ಅವರಿಗೆ ಈ ಕೆಲಸವನ್ನು ವಹಿಸಿದರೆ ಚೆನ್ನಾಗಿರುತ್ತದೆ. ಈಗಾಗಲೇ ಪಬ್ಲಿಕ್ ಸರ್ವಿಸ್ ಕಮಿಷನ್ ಅವರಿಗೆ ಬಹಳ ಕೆಲಸ ಇದೆ. ಆದ್ದರಿಂದ ನಾನು ಈ ಮೊದಲೇ ಹೇಳಿದಂತೆ ಮಾಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಬಳ್ಳಾರಿ ಜಿಲ್ಲೆ ಪ್ರತಿಯೊಂದರಲ್ಲೂ ಹಿಂದುಳಿದ ಜಿಲ್ಲೆಯಾಗಿದೆ. 1-11-1956 ರ ವರೆಗೂ ಯಾವ ವಿಧವಾದ ಅಭಿವೃದ್ಧಿಯ ಕೆಲಸವೂ ಆಗಿಲ್ಲ. ಅದು ಆಂಧ್ರಕ್ಕೆ ಸೇರುತ್ತದೆಯೋ, ಮೈಸೂರಿಗೆ ಸೇರುತ್ತದೆಯೋ ಎಂದು ಅನುಮಾನಾಸ್ಪದವಾಗಿದ್ದು ಅದನ್ನು neglect ಮಾಡಿದ್ದರು. ಈಗ ಅದನ್ನು ಅಭಿವೃದ್ಧಿಗೆ ತರುವುದು ಸರ್ಕಾರದವರ ಕರ್ತವ್ಯವಾಗಿದೆ. ಅಭಿವೃದ್ಧಿಗೆ ತರಲು ಏನೇನು ಮಾಡಬೇಕೋ ಅದನ್ನೆಲ್ಲಾ ಸರ್ಕಾರದವರು ಮಾಡಬೇಕೆಂದು ಹೇಳುತ್ತೇನೆ.

ಬಹಳ ಮುಖ್ಯವಾದದ್ದು ಎಂದರೆ, ನ್ಯಾಷನಲ್ ಹೈವೇಸ್. ಬಳ್ಳಾರಿ ಜಿಲ್ಲೆಯಲ್ಲಿ ಇದು ಬಹಳ ಕಡಿಮೆ ಇದೆ. ಬಿದರ್ ಇಂದ ಬೆಂಗಳೂರಿಗೆ, ಗುಲ್ಬರ್ಗಾ

(ಶ್ರೀ ಬಿ. ಇ. ರಾಮಯ್ಯ)

ರಾಯಚೂರು, ಬಳ್ಳಾರಿ, ಚಳ್ಳಕೆರೆ, ತುಮಕೂರು ಮಾರ್ಗ ಬರಬಹುದು. ಈ ರೀತಿ ನ್ಯಾಷನಲ್ ಹೈವೇ ಇದೆ. ಈಗ ತುಂಗಭದ್ರಾದ ಹತ್ತಿರ ಒಂದು ಸೇತುವೆ ಕಟ್ಟುತ್ತಾ ಇದ್ದಾರೆ. ಅದೇ ರೀತಿ ಕೃಷ್ಣಾನದಿಗೂ ಒಂದು ಸೇತುವೆ ಕಟ್ಟುತ್ತಾ ಇದ್ದಾರೆ. ಇದು ಮುಗಿದ ಮೇಲೆ, ಇದನ್ನು ನ್ಯಾಷನಲ್ ಹೈವೇ ಆಗಿ ಕನ್ವರ್ಟ್ ಮಾಡಿದ್ರೇ ಆದರೆ ಹಿಂದುಳಿದ ಆ 5 ಜಿಲ್ಲೆಗಳಿಗೂ ಅನಕೂಲ ಆಗುತ್ತದೆ. ಬಿದರ್‌ನಿಂದ ಬೆಂಗಳೂರಿಗೆ ಬರಬೇಕಾದರೆ 600, 700 ಮೈಲಿ ಆಗುತ್ತದೆ. ಈ ದಾರಿ ಆದರೆ ಸುಮಾರು 400 ಮೈಲಿ ಆಗುತ್ತದೆ. ಅದಕ್ಕೇ ಮಾನ್ಯ ಸರ್ಕಾರದವರು ಇತ್ತ ಕಡೆ ಗಮನ ಕೊಡಬೇಕು. ಇದರಿಂದ ಬಳ್ಳಾರಿಗೂ ಮತ್ತು ಇತರ 5 ಜಿಲ್ಲೆಗಳಿಗೂ ಬೆನಿಫಿಟ್ ಆಗುತ್ತದೆ. ಕೇಂದ್ರ ಸರ್ಕಾರದವರಿಗೆ ಶಿಫಾರಸುಮಾಡಿ ಇದನ್ನು ನ್ಯಾಷನಲ್ ಹೈವೇದೊಳಗೆ ಬರುವಂತೆ ಮಾಡಬೇಕೆಂದು ಪಿ. ಡಬ್ಲ್ಯು. ಡಿ. ಮಂತ್ರಿಗಳನ್ನು ಕೇಳುತ್ತಾ ಇದ್ದೇನೆ.

ಬಳ್ಳಾರಿಗೆ ಮೆಡಿಕಲ್ ಕಾಲೇಜು ಕೊಡಬೇಕೆಂದು ಮೊದಲಿನಿಂದಲೂ ವಿಶ್ವಪ್ರಯತ್ನ ಮಾಡುತ್ತಾ ಇದ್ದೇವೆ. ಆದರೆ ಇದುವರೆಗೂ ನಮ್ಮ ಸರ್ಕಾರದವರು ನೋಡೋಣ ನೋಡೋಣ ಎಂದು ಹೇಳುತ್ತಾ ಇದ್ದಾರೆ. ಮದರಾಸು ಸರ್ಕಾರದಲ್ಲಿದ್ದಾಗ ಇಲ್ಲಿಗೆ ಮೆಡಿಕಲ್ ಕಾಲೇಜು ಪಡೆದುಕೊಳ್ಳಲು ಪ್ರಯತ್ನ ನಡೆಯಿತು. ಅಷ್ಟರೊಳಗೆ ಮೈಸೂರಿಗೆ ಸೇರಿದೆವು. ಬಹಳ ಕಡಿಮೆ ಖರ್ಚಿನಲ್ಲಿ ಶುರು ಮಾಡಬಹುದು ಎಂದು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಬಂದಿದೆ. ಅಲ್ಲಿರತಕ್ಕ ಆಸ್ಪತ್ರೆಯಲ್ಲಿ 400 bed-strength ಇದೆ. ಮತ್ತು ಬೇಕಾದಷ್ಟು ಜಾಗ ಕೂಡ ಇದೆ. ಸ್ಯಾನಿಟೋರಿಯಂ ಇದೆ. ಎಲ್ಲಕ್ಕೂ ಕೇಂದ್ರ ಪ್ರದೇಶವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳೊಡನೆ ಎಷ್ಟೋ ಸಲ ಚರ್ಚೆ ಮಾಡಿದ್ದೇನೆ. ಇದುವರೆಗೂ ಅವರು ಈ ವರ್ಷ ನೋಡೋಣ, ಮುಂದಿನ ವರ್ಷ ನೋಡೋಣ ಎಂದು ಹೇಳುತ್ತಾ ಇದ್ದಾರೆ. ಹಿಂದುಳಿದ ಪ್ರದೇಶ ಮುಂದಕ್ಕೆ ಬರಬೇಕಾದರೆ ಬರೀ ಬೆಂಗಳೂರು ಅಥವಾ ನಗರದ ಮಾತ್ರ ಎಲ್ಲ ಸೌಕರ್ಯಗಳನ್ನು ಮಾಡುತ್ತಾ ಬಂದರೆ ಆಗುವುದಿಲ್ಲ. ಬಳ್ಳಾರಿಯಲ್ಲಿ ಒಂದು ಮೆಡಿಕಲ್ ಕಾಲೇಜನ್ನು ತೆಗೆದದ್ದೇ ಆದರೆ ಬಳ್ಳಾರಿ, ಗುಲ್ಬರ್ಗ, ರಾಯಚೂರು, ಬಿದರ್ ಈ ಎಲ್ಲ ಪ್ರದೇಶಗಳೂ ಅಭಿವೃದ್ಧಿಗೆ ಬರಲು ಆಸ್ಪದವಾಗುತ್ತದೆ. ಹೆಲ್ತ್ ಮಿನಿಸ್ಟರು ಡಾಕ್ಟರುಗಳಿಗೆ ಅಭಾವ ಇದೆ ಎಂದು ಹೇಳುತ್ತಾರೆ. ಅದರಿಂದ ಡಾಕ್ಟರುಗಳು ಕೂಡ ತಯಾರಾಗುತ್ತಾರೆ. ಜನ ಸಂಖ್ಯೆ ಹೆಚ್ಚು ಹೆಚ್ಚಾಗಿ ಬೆಳೆಯುತ್ತಾ ಇದೆ. ಆರೋಗ್ಯ ಕೆಡುತ್ತಾ ಇದೆ. ಡಾಕ್ಟರುಗಳು ಕಡಿಮೆ ಆಗುತ್ತಾ ಇದ್ದಾರೆ. ಅದಕ್ಕೇ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಾದರೂ ಇಲ್ಲಿಗೆ ಒಂದು ಮೆಡಿಕಲ್ ಕಾಲೇಜನ್ನು ಕೊಡಿಸಲು ಪ್ರಯತ್ನಮಾಡಿ ಇಲ್ಲಿ ಒಂದು ಮೆಡಿಕಲ್ ಕಾಲೇಜನ್ನು ಸ್ಥಾಪನೆ ಮಾಡಬೇಕೆಂದು ಸರ್ಕಾರದವರನ್ನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಬಳ್ಳಾರಿಯಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಪೇಪರ್ ಮಿಲ್ಸ್ ಶುರುಮಾಡಬಹುದು. ಕಂಪಲಿಯಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ. ಇದೇರೀತಿ ಹೊಸಪೇಟೆಯಲ್ಲೋ ಅಥವಾ ಕಂಪಲಿಯಲ್ಲೋ ಒಂದು ಪೇಪರ್ ಮಿಲ್ಸ್ ಶುರುಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಫೆರೋ ಮ್ಯಾಂಗನೀಸ್ ಪ್ಲಾಂಟ್ ಶುರುಮಾಡಬೇಕೆಂದು 3 ವರ್ಷದಿಂದ ಸರ್ಕಾರದವರನ್ನು ಕೇಳುತ್ತಾ ಇದ್ದೇವೆ. ಅಲ್ಲಿ ಬೇಕಾದಷ್ಟು ಅದುರು ಸಿಕ್ಕುತ್ತದೆ. ಪ್ರಪಂಚದಲ್ಲೇ ಅತ್ಯುತ್ತಮವಾದ ಮ್ಯಾಂಗನೀಸ್ ಅದುರು ಇದೆ ಎಂದು ಸರ್ಕಾರದವರೇ ಒಪ್ಪಿಕೊಂಡಿದ್ದಾರೆ ಮತ್ತು ಫೆರೋ ಮ್ಯಾಂಗನೀಸ್ ಪ್ಲಾಂಟ್ ಶುರುಮಾಡುತ್ತೇವೆ ಎಂದು ಹೇಳಿ ಈಗಾಗಲೇ ಒಂದು ವರ್ಷ ಆಯಿತು. ಇದುವರೆಗೂ ಯಾವ ವಿಧವಾದ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಅದುರನ್ನು ಬೇರೆ ದೇಶಗಳಿಗೆ ರಫ್ತು ಮಾಡುತ್ತಾ ಇದ್ದೇವೆ.

ಈ ಫೆರೋ ಮ್ಯಾಂಗನೀಜನ್ನು ಎಕ್ಸ್‌ಪೋರ್ಟ್ ಮಾಡುವುದರಿಂದ ಹಣ ಸರಿಯಾಗಿ ಬರುತ್ತಿಲ್ಲ. ಆದ್ದರಿಂದ ಒಂದು ಫ್ಯಾಕ್ಟರಿಯನ್ನು ಈ ಪ್ರದೇಶದಲ್ಲಿ ಸ್ಥಾಪನೆ ಮಾಡಿದರೆ ಒಳ್ಳೆಯದಾಗುತ್ತದೆ. ಸೊಂಡೂರಿನಲ್ಲಿ ಮಾಡಬೇಕೆಂದು ಕೇಳಿದ್ದಾರೆ. ಅವರಿಗೆ ಸವಲತ್ತು ಕೊಟ್ಟು ಜಾಗ್ರತೆ ಈ ಕಾರ್ಖಾನೆ ಆರಂಭ ಆಗುವ ಹಾಗೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು Textile Mill ವಿಚಾರ. ಬಳ್ಳಾರಿ ಜಿಲ್ಲೆ ಬಹಳ ಹಿಂದುಳಿದಿದೆ. ಬಳ್ಳಾರಿಗೆ ಒಂದು ಟೆಕ್ಸ್‌ಟೈಲ್ ಮಿಲ್ಲನ್ನು ಜಾಗ್ರತೆ ಕೊಡಿಸಬೇಕು. ಇದುವರೆಗೆ ಈ ಸಂಬಂಧದಲ್ಲಿ ಯಾವ ವಿಧವಾದ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಈ ಜಿಲ್ಲೆಯಲ್ಲಿ ಮೂರು ಟೆಕ್ಸ್‌ಟೈಲ್ ಮಿಲ್ಲುಗಳಿಗೆ ಬೇಕಾಗುವಷ್ಟು ಹತ್ತಿ ಬೆಳೆಯುತ್ತದೆ. ಬೆಳೆದಂಥ ಈ ಹತ್ತಿಯನ್ನು ಆಂಧ್ರದೇಶಕ್ಕೆ ಕಳಿಸಲಾಗುತ್ತಿದೆ. ಆದಕಾರಣ ಒಂದು ಟೆಕ್ಸ್‌ಟೈಲ್ ಮಿಲ್ಲನ್ನು ಬಳ್ಳಾರಿಯಲ್ಲಿ ಜಾಗ್ರತೆ ಪ್ರಾರಂಭ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬಳ್ಳಾರಿ ಮತ್ತು ಹೊಸ ಪೇಟೆ ನಗರಗಳಿಗೆ Water Supply scheme ಮಾಡಿದ್ದಕ್ಕಾಗಿ ನಾನು ಸರಕಾರವನ್ನು ಅಭಿನಂದಿಸುತ್ತೇನೆ. ಬಳ್ಳಾರಿ ಮತ್ತು ಹೊಸ ಪೇಟೆ ನಗರಗಳಿಗೆ ಈ ಯೋಜನೆಯನ್ನು ಇದೇ ವರ್ಷ ಸ್ಯಾಂಕ್ಷನ್ ಮಾಡಿದ್ದಾರೆ. ಈ ಯೋಜನೆಯ ಕೆಲಸ ಇನ್ನೂ ಸುರು ಆಗಿಲ್ಲ. ಆದರೆ ಜಾಗ್ರತೆ ಸುರುಮಾಡಿ ನೀರನ್ನು ಒದಗಿಸಬೇಕು. ಹಾಗು ನೀರಿನ ಅಭಾವವನ್ನು ಹೋಗಲಾಡಿಸಬೇಕು. ಒಂದು ವೇಳೆ ಈ Water Supply scheme ನ್ನು ಇದುವರೆಗೆ ಸ್ಯಾಂಕ್ಷನ್ ಮಾಡದೇ ಇದ್ದರೆ ಆದಷ್ಟು ಜಾಗ್ರತೆ ಮಾಡಬೇಕು. ಮತ್ತು ಕೆಲಸವನ್ನು ಪ್ರಾರಂಭಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನು P.W.D.ಯ ವಿಚಾರ. ಬಳ್ಳಾರಿ ಜಿಲ್ಲೆಯು ಮದ್ರಾಸ್ ರಾಜ್ಯದಿಂದ ಮೈಸೂರಿಗೆ ಸೇರುವದಕ್ಕೆ ಮುಂಚಿತವಾಗಿಯೇ ಈ ತುಂಗಭದ್ರಾ ಯೋಜನೆಯ ವಿಷಯದಲ್ಲಿ ಮದ್ರಾಸ್ ಸರಕಾರ ಮತ್ತು ಮೈಸೂರು ಸರಕಾರ ಇವುಗಳ ನಡುವೆ ಒಂದು agreement ಆಗಿದೆ. ಆ agreement ಇದ್ದರೂ ಸಹ ಬಳ್ಳಾರಿ ಜಿಲ್ಲೆಗೆ ಬಹಳ ಅನ್ಯಾಯವಾಗಿದೆ. ಎಂದು ಹೇಳಿದರೆ ಅದು ತಪ್ಪಾಗಲಾರದು. ತುಂಗಭದ್ರಾ ಯೋಜನೆಯಿಂದ 80 ಸಾವಿರ ಎಕರೆ ಭೂಮಿ ಬಳ್ಳಾರಿ ಜಿಲ್ಲೆಗೆ ಬರುತ್ತದೆ. ಮತ್ತು 3 ಲಕ್ಷ ಎಕರೆ ಭೂಮಿ ಆಂಧ್ರಕ್ಕೆ ಹೋಗುತ್ತದೆ. ಈ agreement ಪ್ರಕಾರ ಮೈಸೂರಿಗೆ ಬಹಳ ಅನ್ಯಾಯ ಆಗುತ್ತದೆ. ಈ ಮೂಲಕ ನಮಗೆ ಏನು ಆಗಿದೆ ಎನ್ನುವದನ್ನು ಪರ್ಯಾಲೋಚಿಸಿ ನಮಗೆ ನ್ಯಾಯ ದೊರಕುವ ಹಾಗೆ ಮಾಡಬೇಕು. ಈ ಪ್ರೊಜೆಕ್ಟ್ ಮೂಲಕ ಹೆಚ್ಚು ಜಮೀನು ನೀರಿನಲ್ಲಿ ಮುಳುಗಿ ಹೋಗಿದೆ. ಅದಕ್ಕೆ

ಪ್ರತಿಯಾಗಿ ಎಷ್ಟು ಭೂಮಿ ನಮಗೆ ಬರಬೇಕಾಗಿತ್ತೋ ಅಷ್ಟು ಭೂಮಿ ನಮಗೆ ಬಂದಿಲ್ಲ. ಆದುದರಿಂದ injustice ಆಗಿದೆ. ಇದನ್ನು ಸರಿಪಡಿಸಬೇಕು. ಮತ್ತು ನಮಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಬಳ್ಳಾರಿ ಫಿರ್ಕಾದಲ್ಲಿ ಹಗರಿ ಸ್ಪ್ರಿಂಗ್ ಚಾನೆಲ್ ಎಂದು ಇದೆ. ಅದರಲ್ಲಿ ಅಷ್ಟು ನೀರು ಬರುವದಿಲ್ಲ. ಜನರಿಗೆ ಬಹಳ ಕಷ್ಟವಾಗಿದೆ. ಅಲ್ಲಿ 1200 ಎಕರೆ ಭೂಮಿ ನೀರಾವರಿ ಆಗುವ ಹಾಗೆ ಇದೆ. ಆದುದರಿಂದ ಈ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು. ಕೆಲವು ವೇಳೆ ವಾಣಿ ವಿಲಾಸ ಸಾಗರದಿಂದ ನೀರು ಕೊಟ್ಟು ಅಲ್ಲಿಯ ಜನರನ್ನು ಕಾಪಾಡಬೇಕು. 1200 ಎಕರೆ ಭೂಮಿ ಒಣಗಿ ಹೋಗುತ್ತಿದೆ. ಇದಕ್ಕೆ ತೀವ್ರ ಗಮನಕೊಡಬೇಕು.

ಬಳ್ಳಾರಿ ಜಿಲ್ಲೆಯಲ್ಲಿ ಸಿರಗುಪ್ಪದಲ್ಲಿ ಒಂದು Sub-Munsiff Court ಬೇಕು ಎಂದು ಜನರು ಕೇಳಿದ್ದಾರೆ. ಈ ಕೋರ್ಟು ಇಲ್ಲದೆ ಜನರಿಗೆ ತೊಂದರೆಯಾಗಿದೆ. ಸರಕಾರದವರು ಇದನ್ನು ಗಮನದಲ್ಲಿ ತೆಗೆದುಕೊಂಡು ಆದಷ್ಟು ಜಾಗ್ರತೆ Munsiff ಅಥವಾ Magistrate Court ನ್ನು ಕೊಡಬೇಕೆಂದು ಇರುವ ಅವರ ಬೇಡಿಕೆಯನ್ನು ನೆರವೇರಿಸಿ ಕೊಡಬೇಕು.

ಇನ್ನು ಗೊರವಾಲಾ ಕಮಿಟಿ ರಿಪೋರ್ಟು ಎಂಬುದು ಒಂದು ಇದೆ. ಅದರಲ್ಲಿಯ 40 points accept ಮಾಡಿದ್ದೇವೆ ಎಂದು ಹೇಳಿದ್ದಾರೆ. ಮುಂದೆ ಏನಾಯಿತು ಎಂಬುದು ನಮಗೆ ಗೊತ್ತಾಗಿಲ್ಲ. ಆದರೆ ಈ ರಿಪೋರ್ಟಿನಲ್ಲಿಯ ಕೆಲವು ಸೂಚನೆಗಳ ಪೈಕಿ ಒಂದು ವಿಷಯ ಮಾತ್ರ ನಾನು ಹೇಳಲು ಬಯಸುತ್ತೇನೆ. ಗೊರವಾಲಾ ರಿಪೋರ್ಟಿನಲ್ಲಿ ಹೇಳಿರುವ ಹಾಗೆ ಈಗ ಸದಕ್ಕಿರುವ 19 ಜಿಲ್ಲೆಗಳನ್ನು ರೀಆರ್ಗನೈಜ್ ಮಾಡಿ 17 ಜಿಲ್ಲೆಗಳನ್ನು ಮಾಡಬೇಕು. ಕೂರ್ಗ್, ಚಿಕ್ಕಮಗಳೂರು ಮುಂತಾದ ಕೆಲವು ಜಿಲ್ಲೆಗಳು ಬಹಳ ಚಿಕ್ಕದಾಗಿವೆ. ಕೆಲವು ದೊಡ್ಡ ದೊಡ್ಡ ಪ್ರದೇಶ ಜಿಲ್ಲೆಗಳಾಗಿವೆ. ದೊಡ್ಡದು ಸಣ್ಣದು ಎಂಬುದು ಹೋಗಿ ಎಲ್ಲ ಜಿಲ್ಲೆಗಳೂ uniform ಆಗಿ ಇರುವ ಹಾಗೆ ಮಾಡಬೇಕು. ಆದ್ದರಿಂದ ಈ ಜಿಲ್ಲೆಗಳನ್ನು reorganise ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ನನಗೆ ಮಾತನಾಡಲು ಸಮಯ ಕೊಟ್ಟಿದ್ದಕ್ಕಾಗಿ, ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri C. K. RAJIAH SETTY (Chick-naikanahalli).—Mr. Speaker, Sir, at the outset I have to say that this budget has come out unexpectedly in uncertain circumstances with the least sympathy to the common man or to the poor man and the main reason for this is the atmosphere in which the administration is going on. The people of this State, the members of this House and the Ministers all know that. The four main factors are the rift in the ruling party, the no-confidence fear that is ever prevailing in this State, the intervention of politicians in the administration and a lot of inefficient officials in the Government machinery. There is nothing to boast either in our industrial development or in the agricultural development or in the hydro-electric development. At least the Madras Government boasts of industrial development and the Andhra Government of agricultural development but for us there is nothing to boast of. After all the small surplus in the budget matters very little. The Government say that they have provided for an outlay of Rs. 240 crores under the Second Five-Year Plan, but whatever works are provided for in the Second Plan will not be completed. The main reason is that the cost of important items of the plan has increased. Though Rs. 240 crores are provided for in the Second Plan, unfortunately the House will see that many items included in this plan will spill over to the Third Plan. If vigorous efforts had been made to fulfil the targets there is no necessity why many of the items should spill over to the Third Plan. This clearly shows that we are not in a position to fulfil the plan targets. For instance, take the expansion scheme of the Government Electric Factory which was proposed in the Second Plan. You have not commenced work at all. The agreements have been signed. It may take three or four years for the completion of that item of work. Still, this item of the Second Five-Year Plan will be spread over the Third Plan. Likewise, our ferro-sillicon Plant expansion. There also the agreement for foreign collaboration might have been very recently finalised and I am sure the work will be spread over the Third Plan. Where is the point in arrogating pride to themselves and where is the point in saying that we have reached the targets and we are going to spend 340 crores, and achieve something ? Look at the present cost of establishment of the Government. You have increased the D. A. by five rupees and the cost of it is 1½ crores. Even in the schedules in P.W.D. almost all the important items are to be revised from 20 to 30 per cent. For the same quatum of work, the

(SRI C. K. RAJIAH SETTY)

monetary value has gone up by 20 to 30 per cent and I think our figures of expenditure for that purpose may have to be taken at a premium of 10 to 15 per cent. If you compare the monetary value with the actual work turned out, I do not think they have achieved anything at all for which we can congratulate our Ministers. Sir, our Ministers are very intelligent and clever in showing a surplus budget. They are equally clever in framing a deficit budget. I do not want to go by the figures that are given here, because I know that many a time the accuracy of the Budget lies in the actuals realised and spent and that will be disclosed a year later as to how much of our expectations have been realised and how far we have been able to spend money on the schemes proposed. The third point on which a Budget may be judged is on the basis of increase in the non-tax revenue. Then we should see if there is any development in the country. Looking at all these items of revenue, last year, for instance, the Hon'ble Minister had heavily under-estimated the income under various heads---sales-tax, fosest revenue and so on. This year, he has shown some increase in expectations under some of these heads and he has been able to show some surplus.

SRI T. MARIAPPA (Minister for Finance).—It is all right if it is said that there is increase in revenue. But some friends have said that we have not spent and therefore there is a surplus.

SRI C. K. RAJIAH SETTY.—It is also true. Look at agriculture. How many schemes you proposed and how much you have been able to spend ?

SRI T. MARIAPPA.—Increase in revenue also contributed to this.

SRI C. K. RAJIAH SETTY.—You again say that you are proposing to bring in fresh taxes. But you have different rates of levy under the various items prevailing in the different areas and if you adopt uniform legislation, you are bound to get some increased revenue and people will be obliged to pay more. After all, in equalising, you always equalise at the higher level. If there is more tax levied in Andhra, you keep that level; if there is more tax levied in Coorg, you keep to that level. You have used your intelligence in that way. At the same breath, you say there is no fresh taxation. What is the per capita tax in Mysore ?

SRI T. MARIAPPA.—Per capita tax in Mysore is less than in Andhra.

SRI C. K. RAJIAH SETTY.—If only you had put one or two railway links to the Ports, you would have easily earned 2 to 3 crores of rupees by way of sales-tax. Now all that money is going to Madras, because all the goods are booked and received at the Madras port, and therefore Madras Government will get that tax. Sir, when we passed the Sales Tax Bill in this House, I had estimated receipts under Sales tax at 10 crores. After all, you have only collected 6 to 7 crores. Still there is a lot of leakage. The main reason is there is a lot of tax-evasion by the merchants. What is today known as "International Traders," will become "National Tradeas" next year, and further "Traders Ltd.," in the third year so much so, they easily avoid paying the tax. Even the officers and staff posted for this work, are not intelligent enough to understand the several tricks adopted by merchants and businessmen. The Officers whom you recruit are not conversant with the complications and the intricacies of business. You must therefore make it a point to post proper people, people who are well versed in that subject and whose previous record of work is quite clean. Only if his record is good, he should be posted as inspecting officer. You must at least take care to post a proper watchman in your shed.

SRI T. MARIAPPA.—We are going to make arrangements to have a sort of intelligence staff so that they may work at railway yards, ookads and mandies and such places.

SRI C. K. RAJIAH SETTY.—Most of these people who are recently appointed are the off-shoots of political interference, because if you look to the efficiency of the official machinery, I am definitely of the opinion that the

standards have very much gone down and we have really to feel sorry and wonder as to what our future would be with this sort of machinery.

More than everything, coming to the expenditure side, I am sorry to state that it is unfortunate that we have not taken any action so far for the prompt execution of several schemes under the plan. You look at some industrial concerns. You say always that money invested on industries is likely to yield quick returns compared to investment on agriculture. Why have you not taken up the expansion of the Electric Factory ? You are telling the public that due to increase in the cost of raw materials and other reasons, the revenue from some industries has fallen. I tell you the main reason. The Government Electric Factory has a plan of producing transformers. Unfortunately, there is no demand and there is no market for your products. The same must be said about the Porcelain Factory. You say that you have a stock of Rs. 40 to 45 lakhs of electro-porcelain materials.

Sri B. D. JATTI.—We recently urged the Government of India and they have agreed to allow us to purchase the necessary materials.

Sri C. K. RAJIAH SETTY.—That is all right, Sir. I am stating the reason why the income has not correspondingly increased ; it is because the cost of raw material has gone up. You have increased your sale value also. The sale value has always to bear some proportion to the price of raw material and manufacturing costs. Your Soap Factory is giving very good income. The Sandal Wood Factory is also giving very good income. The silk factory is taking away all the income. You should know the reason why this silk factory has failed. The main reason is, the particular item, what you produce as raw material, is very bad. The rendatta rate is very low. We have got to improve. We have got the Central Research Institute, we have got the Department itself working for silk. But still, no marked progress is registered.

Regarding the matching grant, Sir, let me say you had expected 78 lakhs for the different schemes but the actual receipts are 42 lakhs. The main reason is, you have not been able to utilise all the money. In spite of the fact that you have already spent four years of the Second Five Year Plan period, so much work remains to be done and so much money remains unutilised and you are allowing money to lapse. Next year, you are expecting to spend more. I really do not know how you are going to spend more. I do not know how you are going to spend the allocations on the Agricultural Department particulary. You have allowed nearly 30 per cent to lapse.

2-30—P.M.

What is the main reason? Even in regard to Industrial Supplies also, you have not utilised all the grants. With regard to cottage industries, you have got various schemes; you have got hand-pound schemes where you pay one Rupee for every bag of hand-pound rice ; there will be no paddy, but still there will be the account ; there will be no consumer, still there will be sales. What is the main reason ? Some politicians are making use of these schemes and making money.

Sri T. MARIAPPA.—You are very uncharitable.

Sri C. K. RAJIAH SETTY.—I want you to come and see. I want to take you once to important *jathras*. You can see things for yourself.

Sri T. MARIAPPA.—How nourishing hand-pounded rice is. I want you to buy it.

Sri C. K. RAJIAH SETTY.—I know how many of the M.L.A.s and how many members of the Khadi Board are making use of it. You take this *Gana* Society. I know in my own place, there is a society and you have given them Rs. 18,000. Whenever they make purchases, they will prepare false bills by adding 10 to 20 per cent extra over the actual value. Recently when I asked an Industrial Supervisor about it, as to why they add like that to the actual value, he said that he had noticed all those things and he was going to take action against the persons concerned. But the Hon'ble

(SRI C. K. RAJIAH SETTY)

Minister for Co-operation intervened and so there were no charges made against them. This is how things are going on in our place.

Sri T. MARIAPPA.—You do not believe officials; you do not believe non-officials. You may believe some people who are not here in this mundane world. You want only angels.

Sri C. K. RAJIAH SETTY.–Interference of politicians in the routine administration is the main cause of all these things. At all levels, they interfere in routine administration. There are more politicians in this country than what the country needs and most of these politicians are professionals and it is only in this country in the world where people profess politics and make money.

Sri M. MALLIKARJUNASWAMY (Malavalli).—It is only a sermon.

Sri C. K. RAJIAH SETTY.—That is the world. The milk powder that comes from America for being distributed to the people is being black-marketed in my own place. The Mines Labour get about 2,000 lbs. milk powder per month.

Sri T. MARIAPPA.—May I respectfully submit to the House through you, Sir, that if such sweeping statements are made, one should realise what will be the impression produced in America. I want you to make a statement realising the full implications of that statement that there has been black-marketing in such things. What do they think of the national charater if an Indian makes such a statement? Let it be qualified. One man may commit a wrong thing. But the Hon'ble Member cannot make a sweeping statement.

Sri C. K. RAJIAH SETTY.—Officially, I have received a letter from the Red Cross Organisation that they have supplied 10,073 lbs milk powder. I saw a lorry carrying them going to Tiptur, Arsikere, Gubbi *via* Tumkur. One of my friends wrote to Anti-Corruption Department. They came, took my statement and told me that they were going to proceed to the very spot where the material was stored. But immediately at the intervention of one of the Ministers, Minister for Co-operation or somebody, that man did not go at all. Later on, I went to the Deputy Commissioner myself and said that such and such a thing is happening and I wanted him to go and see the stocks. The Deputy Commissioner promised to go, but by that time he was transferred. There was Congress Exhibition and shall I say who were the persons that purchased the zinc sheets? Has not the Corporation of Bangalore constructed so many houses? May I know how many politicians have hired those houses and sublet them for higher rents? Purification in political parties is definitely needed if you want to run the Administration.

AN HON'BLE MEMBER.—The sale of zinc sheets is done through co-operative societies.

Sri C. K. RAJIAH SETTY.—All these co-operative societies are centres of black-market. One day during Ganapathi Festival, out of 200 bags of Sugar which a society got, 180 bags were sold at the rate of Re. 10 more per bag.

AN HON'BLE MEMBER.—The Hon'ble Member says that purchasers are black-marketeers; officials are black-marketeers; and soceities are black-marketeers; so all are black marketeers except Sri C. K. Rajaiah Setty.

Sri C.K. RAJIAH SETTY.—I belong to the marchant community which really has some blackmarketeers. The business class wants to make use of the best of the opportunity and want to make money. The very existence of co operative societies is to stop this black-marketing, but if black-marketing is more rampant in co-operative societies what is the good of having such co-operative societies? In my place, there are three societies, and all these societies have incurred loss. There is a *kambli* society where due to mismanagement of officials and certain directors, the society has stopped functioning. There are 400 or 500 families who are solely dependent on these societies. They are helpless and

they have become beggars and not getting even one or two rupees per week. The merchants who were deaing with *kumblies* have left the place because the society had taken up this business but the Society is not in a position to purchase them. The same is the case with the Weavers' Society. There also, they have got plenty of stock which cannot be sold and the present position of the society is such that they have got hardly a capital of Rs. 2,000 or Rs. 3,000 out of Rs. 10,000 borrowed from the Government. You cannot realise the rest. The same thing is the case with respect to the Silk Society also. All these societies are in a defunct state whereby people who depend on these societies have actually become beggars. Though different Ministers have taken defferent portfolios, I am afraid in our District one Minister has taken the entire portfolios. E v e n yesterday, there was the question of transfer of an Amildar and there was a trunk call from one of the Congress Members that he is trying to cancel it. So far as Tumkur District is concerned, one Minister has taken the entire charge of the District and whether it is Co-operation or Revenue or Finance or anything else, he is interfering in every inch and it is unfortunate that you people in the Cabinet do not assert yourself and say that you are the portfloio Ministers. Why are you allowing such things and why are you allowing one man to function like that? Whether it is nomination, appointment or transfer or promotion, there is the hand of the Co-operation Minister where it is not needed.

I have received so many letters from the Ministers. When I ask for something, they say that it is sent to certain other Minister. There is joint responsibility, no doubt. Still I do not get response from any one.

ಶ್ರೀ ಟಿ. ಎಸ್. ಮೂಡಲಗಿರಿ ಗೌಡ (ಕುಣಿಗಲ್).—ತಾವು ಈ ರೀತಿ ಹೇಳುವುದಕ್ಕಿಂತ ಇಂದಿನ ಸರಕಾರದ ಪಾಲಿಸಿಯ ವಿಚಾರವಾಗಿ ಏನಾದರೂ ಸಲಹೆಗಳಿದ್ದರೆ, ಅವನ್ನು ತಿಳಿಸುವುದು ಉತ್ತಮ.

Sri C. K. RAJIAH SETTY.—I know you are very intelligent in answering. I want to take you for a week with me.

Mr. SPEAKER.—They expect a different kind of speech from you—about bigger things and not small ones.

Sri C. K. RAJAIAH SETTY.—Regarding investments, you are aware that a sum of 23 lakhs is due from these multi-purpose societies of the Government. You are not in a position to recover the same. And then you have put large amounts on some of these industries like Sericulture, Kapila Textiles, Match Factory, etc., You are not in a position to realise the capital invested.

Sri T. MARIAPPA.—These industries are all national assets.

Sri C. K. RAJIAH SETTY.—You have stated in your speech about our liabilities. But how much are you going to get back from the assets? Your book value may be twenty or thirty lakhs. What is the machinery purchsed in the Agricultural Department? What is that value? Can you get in the market even 25 per cent of what you invested on it. All your assets are such that you can get only about fifty per cent.

Sri T. MARIAPPA.—In a majority of cases you forget the recent increase in price value. In many cases it has appreciated and in some cases, it has depreciated.

Sri C. K. RAJIAH SETTY.—National assets are expected to produce some profit. But most of your investments are dead investments.

Sri T. MARIAPPA.—Take the Mysore Spun Silk Mills. It is 20 years old. The House asked us to take it over. What can we do?

Sri C. K. RAJIAH SETTY.—You have 60 crores invested on these industries. Somebody said it is 40 crores. Why have you not calcu ated the money value? Is it not a fact that money has lost its value? You are presenting a budget of 40 crores. The rupee value has gone down by 33 per cent.

Whenever we in the House ask for increasing the salary of the Government servants, you say there are no financial resources. When Sri Kadidal Manjappa was the Chief Minister, he gave an interim relief of five rupees.

(SRI C. K. RAJIAH SETTY)

Again at our request, you have given another five rupees and it will be regularised. I ask you why not you have a rationalised way of giving these increases. You have got the cost of living index.

Whenever prices go up by 50 points, you increase the D.A. by one rupee. There is always this eternal trouble of their asking and your giving after a long time. In most of the civilised countries of the world, you see how their staff members are paid. There is a rationalised way. For every 50 points or 100 points, have some fixed increase. Automatically you increase their D.A. But if you are going to go on like this, it is very difficult for you to go on. Have some rationalised way. Say for six months if there is an increase by 50 points, give them some relief. As far as food is concerned, the prices have sored high. With the little increase in relief. . .

SRI T. MARIAPPA.—It is a vicious circle. If you go on paying more, food prices will increase.

SRI C. K. RAJIAH SETTY.—Most countries have got plans. China has got a plan. Russia has got a plan. Even America has plans. Unfortunately in our country we are not as rich as America. We have riches, but not enough to produce the out put. We have cattle, but not enough to produce cattle. We have agriculturists, but we do not produce enough food. The only thing that is rich in this country is human energy. But it is idle or it is wasted. You see how China is drawing its Plan and how it is successful. Her success is something different from other countries. The Chinese population is 50 crores, out of which 30 crores work eight hours a day. Their calculation is there one man produces one rupee worth of national income. Our entire Plan outlay for our State may be something over hundred crores. As already stated by me, there is man power or human energy available with us. If only you have compulsory camps, I think our plan may be successful. You have got so many schemes, plans and money. Who is to work? In my own taluk, there are irrigation works pending worth over two lakhs. There are men, but not men to work. In the Employment Exchange, ninty thousand have registered their names. What is it that you do for them?

SRI T. MARIAPPA.—Ninty per cent of the village people will not be able to earn more than Rs. 25 each. So they all migrate to towns hoping to get increased salaries.

SRI C. K. RAJIAH SETTY.—Sir, you are aware that after 3 or 4 years of compulsory education, you are going to educate all boys. We want people to work in our farms and work in our cattle farms. We must educate our boys in that way. You should not recognise S.S.L.C. unless the boy has learnt some hard labour, whether it is smithy, carpentry or animal husbandry or sculpture.

SRI T. MARIAPPA.—They do not want to work; they say: give us training.

SRI C. K. RAJIAH SETTY.—It is for the Government to recognise the examination. If you go on enlisting these S.S.L.Cs. in the P.S.C., how many can you employ? The outlook of the boys should be changed. That could be done by giving them training. We talk of atomic energy. But, you must make use of the human energy. It is only then there would be national development.

Regarding administration, Sir, I am really sorry to say that our Ministers are wasting their time in mere talking. In foreign countries, we hear of Ministers talking very little but doing much work. If God had given 48 hours a day, some of our Ministers would have gone on speaking for all the 48 hours. When Sri Hanumanthaiya was the Chief Minister, questions were being asked about the T. A. of the Ministers. But, even now the same thing is going on. At least, Sri Hanumanthaiya did something to this State. He was able to do things by his will. That ability is lost now. The rift in the Party has caused a great obstacle to this Ministry. What one Minister has done is undone by another Minister. If somebody becomes the Minister for Public Works, he will keep back all the schemes of the present

Minister for Public Works. I know that Sri Veeranna Gowdh had sanctioned the Devara Maradi Tank. But some of the Congress men went to the P.W.D. Minister and said that they wanted Ankasandra Tank which was dropped since the days of Sir M. Visvesvaraya. The Minister said, it must be reinvestigated. Is he in any way better than Sir M. Visvesvaraya? But, the work of Devara Maradi tank is stopped. Each Minister is so competent that without the estimate or a plan they order for the work to be carried out. He is also competent to stop any work.

Sri H. M. CHANNABASAPPA (Minister for Public Works and Electricity).- Sir, if the Hon'ble Member gives the items in detail, I will reply. If there is something wrong, I will own it; if the Member is wrong, he must correct himself.

Sri C. K. RAJIAH SETTY.—Sir, I have been requesting this Minister for the last two years and I have written letters also to him. I may mention tanks like Perumanalli and Madakegudda and so on. The entire work of minor irrigation is transferred to Kunigal because there is a politician. You can see the figures. The entire district should not be deferred for the sake of one politician.

Sri H. M. CHANNABASAPPA.—Shall I point out that there are Congressmen in other taluks also not only in Kunigal?

3 P.M.

Sri C. K. RAJIAH SETTY.—These people are boasting that they want a socialistic pattern of Government. The Minister for Finance was more socialistic when he was a member of this House and I think he has now lost the very thought of it. There is the other hero of this resolution which was passed in the House for removing the disparity between the high paid and the low paid. That Hon'ble Member, Sri Channabasappa is sitting besides Sri Mariappa. Once there was a resolution brought before the House, which our Finance Minister upheld when he was a M.L.A. in the regime of Sri K. Hanumanthaiya that the disparity should not exceed ten times. Has he progressed an inch?

Sri T. MARIAPPA.—Let him take out my speeches.

Sri C. K. RAJIAH SETTY.—What is the type of socialism that we are having? They say first "socialistic pattern" now they say "real socialism". The gap between the rich and the poor in the country is so much that a few are overfed and millions are half-fed people; that is the disparity in the society. Even among the officials if we look to the disparity, the gap is widening.

Sri T. MARIAPPA.—It has become a fashion to say so.

Sri C. J. MUCKANNAPPA.—Let him read the speech of Sri Mariappa and it will give a very correct, clear picture of what he said and how he is just working against his own conviction.

Sri T. MARIAPPA.— I still remember that in 1957 I have made a statement in this House so far as the minimum and the maximum are concerned. It is 1: 30 and I have further stated that as time goes on, we must bring it down to 1 : 20.

Sri C. K. RAJIAH SETTY.—The resolution brought by Sri Channabasappa was passed unanimously by the House. You have substantiated with your evidence that it is a thing which should be carried out. It is really a pity that whatever he says, the Minister cannot bring it into action, to the extent of even 10 or 15 per cent. After all, this is a poor country and the disparity should not be much. You say that there was a Fact Finding Committee then. What has happened to that committee? You could have done something. Your paying Rs. 5 to your officials would not satisfy them. If you sell rice at 2 seers and ragi at 4 seers per rupee, and if the house rent can be reduced, they would be happy. Simply allowing the prices to soar high and increasing their allowance by Rs. 5 or 10 is no justice. They can never be happy with these soaring prices. Even the President of India and the Minister who presented the Budget to the Parliament spoke something of the common man, of the under-dogs, of the soaring prices and our Minister has not cared to express a word about soaring prices.

Sri T. MARIAPPA.—Obviously he has not read my speech. Let him read pages 12 and 13.

Sri C. K. RAJIAH SETTY.—I have read all his speech thoroughly and complete. I really feel that our Minister ought to have been more sympathetic. He knows how the taxation is responsible for the soaring prices, how to check the inflation......

Sri T. MARIAPPA.—Why not you take a leaf out of what Sri Narasimhan says ?

Sri C. K. RAJIAH SETTY.—Sri Narasimhan is more sympathetic towards the underdogs than myself. I am one with him to express my sympathy in this particular line.

Sri T. MARIAPPA.—You must also understand the causes. The inflationary pressure cannot be tackled by a single State.

Sri C. K. RAJIAH SETTY.—If the agricultural output or some other output is proportionate to the capital that is invested, there cannot be an inflation. You are simply giving crores of rupees to the Khadi and Village Industries, to fruit research and all that. In the interests of the country, you have to scrutinise all these things ; you have to revise all these things ; you take the cottage industries, rural industries, small scale industries, your agriculture department development and evaluate the percentage of achievement. Then I am sure you will be in a position to know how much has been spent properly and how much has not been spent properly.

Mr. SPEAKER.—I can not allow you any more time. You can speak on demands.

Sri C. K. RAJIAH SETTY.—Thank you for the opportunity you have given to me to speak on this occasion.

Mr. SPEAKER.—The House now rises and will meet after half an hour.

———

The House adjourned for recess at Ten Minutes past Three of the Clock and re-assembled at Forty Minutes past Three of the Clock.

———

[MR. DEPUTY SPEAKER in the Chair.]

†ಶ್ರೀ ಎ. ಎಸ್. ಪಾಟೀಲ್ (ನರಗುಂದ್).—ಅಧ್ಯಕ್ಷರೇ, ಮಾನ್ಯ ಆರ್ಥಿಕ ಮಂತ್ರಿಗಳು ಸಾದರಪಡಿಸಿದ ಆಯವ್ಯಯ ಪತ್ರಿಕೆಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತ, ಆ ಬಗ್ಗೆ ಅಭಿನಂದಿಸಿ, ಕೆಲವೊಂದು ಸೂಚನೆಗಳನ್ನು ಮಾಡಲು ನಿಂತಿದ್ದಾಗಿದೆ.

ಮೊದಲನೆಯದಾಗಿ ನಾವೆಲ್ಲರೂ ಅನೇಕ ಸಲ ಗ್ರಾಮಾಂತರ ಪ್ರದೇಶದ ಅಭ್ಯುದಯ ಸರಿಯಾಗಿ ಆಗಿದೆಯೇ ಎಂದು ಪ್ರಶ್ನೆಹಾಕಿದ್ದೇವೆ. ಎರಡು ಪಂಚವಾರ್ಷಿಕ ಯೋಜನೆಗಳು ಮುಗಿಯಲಿಕ್ಕೆ ಬಂದುವು ; ಆದರೆ ಗ್ರಾಮಾಂತರ ಪ್ರದೇಶದ ಪೂರ್ಣ ಅಭ್ಯುದಯಕ್ಕೆ ಸಮೀಪಿಸದಿರುವಂಥ ಒಂದು ಅಭಾವವಾಗಿದೆ. ನಿಜವಾಗಿ ನೋಡಿದರೆ ಗ್ರಾಮಾಂತರ ಪ್ರದೇಶದ ಅಭ್ಯುದಯ ಬಹಳ ಉಳಿದಿದೆ ಎನ್ನುವುದು ನಮ್ಮೆಲ್ಲರಿಗೂ ಕಂಡುಬಂದುದಾಗಿದೆ. ನಾವೆಲ್ಲರೂ ಹಳ್ಳಿಗಳಿಗೆ ಹೋಗಿ ನೋಡಲಾಗಿ, ಈಗ್ಗೆ ಎಂಟು ವರ್ಷಗಳಿಂದಲೂ ಏನೋ ಒಂದು ತರಹ ಅಭ್ಯುದಯ ಕಂಡು ಬಂದರೂ, ಆಗಿರುವುದು ಬಹಳ ಸ್ವಲ್ಪವೇ ಇದೆ. ಮುಖ್ಯವಾಗಿ ಹಳ್ಳಿಗರಿಗೆ ಸಂಚಾರ ಸೌಕರ್ಯಕ್ಕಾಗಿ ರಸ್ತೆಗಳು ಇರುವುದಿಲ್ಲ. ನಮ್ಮ ಕಡೆ ಬೆಳಗಾಂ ಡಿವಿಜನ್ನೊಳಗೆ ಎಷ್ಟೋ ಹಳ್ಳಿಗಳಿಗೆ ರಸ್ತೆಗಳಿಲ್ಲದೆ, ಮಳೆಗಾಲದಲ್ಲಿ 6–7 ತಿಂಗಳು ಅಲ್ಲಿಗೆ ಹೋಗುವುದೇ ದುಸ್ತರವಾಗಿರುತ್ತದೆ. ಹೀಗಾಗಿ ಹಳ್ಳಿಗಳ ಸಂಪರ್ಕ ಇಟ್ಟುಕೊಳ್ಳುವುದು ಸಾಧ್ಯವಿಲ್ಲದಂತಾಗಿದೆ. ಇಂಥದ್ದರಲ್ಲಿ ನಮ್ಮ ಮಿತ್ರರಾದ ಮುಕ್ಕಣ್ಣಪ್ಪನವರು ಉತ್ತರ ಕರ್ಣಾಟಕದಲ್ಲಿ ಅನೇಕ ಸ್ಕೂಲುಗಳಿಗೆ, ಬ್ರಿಡ್ಜುಗಳಿಗೆ ಹೆಚ್ಚು ಖರ್ಚುಮಾಡಿದ್ದಾರೆಂದು ಹೇಳಿದರು. ಹಳೆ ಮೈಸೂರು ಪ್ರದೇಶಕ್ಕೂ ನಮ್ಮ ಪ್ರದೇಶಕೂ ವ್ಯತ್ಯಾಸವಿದೆ. ನಮ್ಮ ಪ್ರದೇಶ ಮುಂಬೈ ಪ್ರಾಂತದೊಳಗಿದ್ದಾಗ, ಎಷ್ಟೋ ಬಜೆಟ್ಟುಗಳಲ್ಲಿ ನಮಗೆ ಹಣ ಸರಿಯಾಗಿ ಸಿಗದೆ. ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗಾಗಲಿ, ರಸ್ತೆಗಳ ಸೌಕರ್ಯಗಳಿಗಾಗಲಿ ಹೆಚ್ಚು ಅವಕಾಶವಿರಲಲ್ಲ. ನಮ್ಮ ಪ್ರದೇಶ ಇಲ್ಲಿಗೆ ಬಂದ ಮೇಲೂ ಕೂಡ, ಬಡಾವಣೆಗಾಗಲಿ, ರಸ್ತೆ ಸಾರಿಗೆಗಳಿಗಾಗಲಿ ಯೋಗ್ಯ ಸೌಕರ್ಯಗಳನ್ನು ಒದಗಿಸದೆ ಹೀಗೆ ಮಾಡುವುದು ಸರಿಯಲ್ಲ. ತಮ್ಮ ಕೋಮಿನವರಿಗೆ ಸಹಾಯಮಾಡುವುದನ್ನು ನೋಡಿ ನಮ್ಮ ಕಡೆ ಜನರಿಗೆ ತಾವು ಏಕೆ ಇಲ್ಲಿಗೆ ಬಂದೆವು ಎಂದು ಅನ್ನಿಸಿದೆ ಒಂದು ತರಹ ನಮ್ಮ ಬಗ್ಗೆ ಏನೂ ಸಹಾನುಭೂತಿ ಇಲ್ಲವೆಂದು ಅವರಿಗೆ ಅನಿಸಿದೆ. ನಮ್ಮ ಕಡೆಗೆ ಯಾವುದಾದರೂ ಸ್ಕೂಲುಕೊಟ್ಟರೆ, ನೀರಾವರಿ ಬಗ್ಗೆ ಸಹಾಯಮಾಡಿದರೆ, ಈ ರೀತಿ ಅರ್ಥಮಾಡಿಕೊಳ್ಳುವುದು ಸರಿಯಲ್ಲ. ಹಳೆ ಮೈಸೂರಿನವರು ಮುಂದೆ ನಮ್ಮನ್ನು ಸಹಾನುಭೂತಿಯಿಂದ ನೋಡಿಕೊಳ್ಳಬೇಕು, ಮಂತ್ರಿಗಳು ಯಾವುದಾದರೂ ಸೌಕರ್ಯಗಳನ್ನು ನಮಗೆ ಒದಗಿಸಿಕೊಟ್ಟರೆ, ಅದನ್ನು ತಪ್ಪು ಅರ್ಥಮಾಡಿ ತಿಳಿದುಕೊಳ್ಳಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ವಿರೇಜ್ ವಾಟರ್ ಸಪ್ಲೈಯ ವಿಚಾರದಲ್ಲಿ ಹೇಳಬೇಕಾಗಿದೆ. ನಮ್ಮ ಕಡೆ ಕೆರೆಗಳನ್ನು ಕಟ್ಟಿಸುವ ಅನೇಕ ತರಹ ಯೋಜನೆಗಳಿವೆ. ನಾವು ಈ ಕಡೆ ಬಂದು ವರ್ಷಗಳಾದರೂ, ಇದರ ಬಗ್ಗೆ ಯೋಗ್ಯ ವ್ಯವಸ್ಥೆಯಾಗಿಲ್ಲ. ಕೆರೆಗಳ ದುರಸ್ತಿ ಬಗ್ಗೆ ಸಾಕಷ್ಟು ಹಣ ನಮಗೆ ಸಿಕ್ಕಿಲ್ಲ. ಈ ನಾಲ್ಕು ಜಿಲ್ಲೆಗಳೊಳಗಿರುವ

ಕೆರೆಗಳಿಗೆ ಸರಿಯಾದ ಹಣ ಸಿಕ್ಕಿಲ್ಲ ಎಂದು ವ್ಯಥೆಯಿಂದ ಹೇಳಬೇಕಾಗಿದೆ.

ಕುಡಿಯುವ ನೀರಿನ ಬಗ್ಗೆ ನಾನು ಹೇಳಿಕೊಳ್ಳ ಬೇಕಾಗಿದೆ. ಹಳ್ಳಿಗಳ ಬಗ್ಗೆ ವಿಕಾಸ ಅಭ್ಯುದಯ ವಾಗಿಲ್ಲ. ಹಳ್ಳಿಗಳಲ್ಲಿ ಸೌಕರ್ಯಸಿಗದೆ ಅನೇಕ ಸಲ ಜನರು ಪಟ್ಟಣಗಳಿಗೆ ಹೋಗಿ ತಮ್ಮ ಕಷ್ಟವನ್ನು ನಿವಾರಣೆ ಮಾಡಿಕೊಳ್ಳುವಂಥ ಪರಿಸ್ಥಿತಿ ಬಂದಿದೆ. ಇನ್ನು ಆರೋಗ್ಯದ ಬಗ್ಗೆ ವಿಚಾರಮಾಡಿ ನೋಡಿದರೆ ಎಷ್ಟೋ ಹಳ್ಳಿಗಳಲ್ಲಿ ಡಾಕ್ಟರುಗಳೇ ಇರುವುದಿಲ್ಲ. 15 ಸಾವಿರ ಜನರಿಗೆ ಒಬ್ಬ ಡಾಕ್ಟರು ಇರಬೇಕೆಂದು ಹೇಳಿದೆ. ಆದರೆ ಒಂದು ತಾಲ್ಲೂಕಿನೊಳಗೆ ಒಂದು ಲಕ್ಷ ಜನರಿಗೆ, 50 ಸಾವಿರ ಜನರಿಗೆ ಒಬ್ಬ ಡಾಕ್ಟರು ಇರುವುದಿಲ್ಲ. ನಮ್ಮ ಭಾಗದೊಳಗೆ ಹೆಚ್ಚಿಗೆ ದವಾಖಾನೆಗಳನ್ನು ಕೊಟ್ಟಿರುವುದಿಲ್ಲ. ಎನ್. ಇ. ಎಸ್. ಸ್ಕೀಂ ಪ್ರಕಾರ ಹೊಸ ಹೆಲ್ತ್ ಯೂನಿಟ್‌ಗಳನ್ನು ಕೊಟ್ಟರೆ ಅವೂ ಸಹಿತ ಸರಿಯಾಗಿ ನಡೆಯುತ್ತಾ ಇಲ್ಲ. ಡಾಕ್ಟರ್ ಸಹಿತ ಹೆಲ್ತ್ ಯೂನಿಟ್‌ಗಳನ್ನು ಹಾಕಿರುವುದಿಲ್ಲ. ದವಾಖಾನೆಗಳನ್ನು ತೆರೆದಿದ್ದರೂ, ಡಾಕ್ಟರನ್ನು ನೇಮಕಮಾಡಿರುವುದಿಲ್ಲ. ಹೀಗಾಗಿ ನಮ್ಮ ಭಾಗದಲ್ಲಿ ಮೆಡಿಕಲ್-ಏಡ್ ಬಗ್ಗೆ, ಆರೋಗ್ಯದ ಬಗ್ಗೆ ಯಾವ ತರಹ ವ್ಯವಸ್ಥೆಯೂ ಸರಿಯಾಗಿ ಆಗಿರುವುದಿಲ್ಲ. ಅದಕ್ಕೆ ಏರ್ಪಾಡು ಮಾಡುವುದು ಸರ್ಕಾರದ ಆದ್ಯ ಕರ್ತವ್ಯ. ಆರೋಗ್ಯದ ಬಗ್ಗೆ ಇಷ್ಟೊಂದು ಆಯಿತು.

ಇನ್ನು ಗ್ರಾಮ ಬಡಾವಣೆ ವಿಚಾರ ತೆಗೆದುಕೊಳ್ಳೋಣ. ಅದು ಬಹಳ ಮಹತ್ವದ ವಿಷಯ. ಪ್ರತಿಯೊಂದು ಗ್ರಾಮಕ್ಕೂ ಹೋಗಿ ಅಲ್ಲಿ ಜನರೊಡನೆ ನಿಕಟ ಸಂಪರ್ಕ ಇಟ್ಟುಕೊಳ್ಳಬೇಕೆಂದು ಹೇಳುತ್ತಾರೆ. ಆದರೆ ಅಲ್ಲಿ ಇರಲಿಕ್ಕೆ ಸ್ಥಳದ ಅಭಾವವಿದೆ. ನಾನು ಒಂದು ಊರಿನೊಳಗೆ ನೋಡಿದೆ ; ನನ್ನ ಮತಕ್ಷೇತ್ರದಲ್ಲಿಯೇ ನೋಡಿದೆ. ಒಂದೊಂದು ಕೋಣೆಯೊಳಗೆ ಮೂರು ಜನ ಅಣ್ಣ ತಮ್ಮಂದಿರು, ಗಂಡ ಹೆಂಡಿರು, ಮಕ್ಕಳು ಮರಿ, ಈ ತರಹ 15 ಮಂದಿ ಮಲಗಿಕೊಳ್ಳುತ್ತಾರೆ. ಅನೇಕ ಕುಟುಂಬಗಳು ಮನೆ ಕಟ್ಟಬೇಕೆಂದಿದ್ದರೂ, ಸ್ಥಳಾಭಾವದಿಂದ ಕೊರಗುವ ಪರಿಸ್ಥಿತಿ ಬಂದಿದೆ. ಇದನ್ನು ಯಾವ ರೀತಿ ಪರಿಹಾರಮಾಡಬೇಕು ಎಂಬುದರ ಬಗ್ಗೆ ಶ್ರೀಮಾನ್ ಪಾಟೀಲ್‌ರವರು ಹೋದ ಸಲದ ಬಜೆಟ್ ಕಾಲಕ್ಕೆ ಸಲಹೆ ಕೊಟ್ಟಿದ್ದರು. ಆದರೂ ಈ ಗ್ರಾಮ ಬಡಾವಣೆ ವಿಷಯ ಸರ್ಕಾರದ ಲಕ್ಷ್ಯಕ್ಕೆ ಬಂದಿಲ್ಲ. ಗ್ರಾಮ ಪಂಚಾಯಿತಿ ಆಕ್ಟ್ ಏನಿದೆಯೋ, ಅದರ ಪ್ರಕಾರ ಗ್ರಾಮ ಬಡಾವಣೆ ಮಾಡಲಿಕ್ಕೆ ಅಧಿಕಾರ ಕೊಡಲಾಗಿದೆ. ಆದರೆ ಅದರ ಪ್ರಕಾರ ಸರಿಯಾದ ಗ್ರಾಮ ಬಡಾವಣೆ ಕಾರ್ಯವನ್ನು ತೆಗೆದುಕೊಳ್ಳಬಹುದು ಎಂಬ ಆಸೆ ಜನರಿಗೆ ಇಲ್ಲ. ಏಕೆಂದರೆ ಸ್ಥಳ ತೀರ ಸ್ವಲ್ಪ ಇದೆ. ಆದ್ದರಿಂದ ಈ ಬಗ್ಗೆ ಸರ್ಕಾರವೇ ತೀವ್ರಕಾರ್ಯಕ್ರಮ ತೆಗೆದುಕೊಳ್ಳಬೇಕು. ಒಂದು ಕಮಿಟಿಯನ್ನು ನೇಮಿಸಿಯೋ ಅಥವ ಯಾವುದಾದರೂ ತರಹ ಗ್ರಾಮ ಬಡಾವಣೆ ಮಾಡಲಿಕ್ಕೆ ಯೋಜನಾ ಬದ್ಧವಾಗಿ, ಪೂರ್ಣವಾಗಿ ಆಲೋಚನೆಮಾಡಿ, ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ಮಾಡುತ್ತೇನೆ.

ಈ ಗ್ರಾಮಗಳಲ್ಲಿ ನೋಡಿದರೆ, ದನ ಕಟ್ಟುವುದಕ್ಕೂ ಜಾಗವಿರುವುದಿಲ್ಲ. ಈ ಸೌಕರ್ಯವಿಲ್ಲದೆ ಕಷ್ಟಪಡುತ್ತಿರುವ ಚಿತ್ರ ದುಃಖಮಯವಾದ ಚಿತ್ರವಾಗಿದೆ. ಈ ಬಗ್ಗೆ ತೀವ್ರಕ್ರಮ ಕೈಗೊಳ್ಳಬೇಕು. ಮಾನ್ಯ ಮಂತ್ರಿ ಕಡಿದಾಳ್ ಮಂಜಪ್ಪನವರು ನಮ್ಮ ಭಾಗದಲ್ಲಿ ಬಂದಾಗ, ಒಂದು ತಾಲ್ಲೂಕು ಕಚೇರಿಗೆ ಹೋದಾಗ ಇಪ್ಪತ್ತು ವರ್ಷಗಟ್ಟಲೆ ಲ್ಯಾಂಡ್ ಅಕ್ವಿಜಿಷನ್ ಕೇಸುಗಳು ತೀರ್ಮಾನವಾಗದೆ ಉಳಿದಿದ್ದ ಪ್ರಕರಣಗಳ ಫೈಲ್‌ಗಳಿದ್ದುದು ಕಂಡು ಬಂದಿದೆ. ಆದರೆ ಯಾವ ರೀತಿಯ ಕ್ರಮವನ್ನು ತೆಗೆದುಕೊಂಡರೋ ಗೊತ್ತಿಲ್ಲ. ಇಂಥ ತಂಟೆ ತಕರಾರುಗಳನ್ನು ನಿವಾರಣೆ ಮಾಡುವುದು ಅಗತ್ಯ. ಬಹಳ ತೀವ್ರವಾಗಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಕೆಲ ಗ್ರಾಮಗಳ ಜನ ಮತ್ತೊಂದು ಊರಿಗೆ ಹೋಗಿ ಮಲಗಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಈಗ ನಾಲ್ಕು ಸಾವಿರ ಅಕ್ವಿಜಿಷನ್ ಕೇಸುಗಳು ಸೆಕ್ರೆಟೇರಿಯಟ್‌ಗೆ ಬಂದಿವೆ.

ಶ್ರೀ ಎ. ಎಸ್. ಪಾಟೀಲ್.—ಒಂದು ಯುಕ್ತ ಯೋಜನೆಯನ್ನು ತಯಾರುಮಾಡಿ, ಗ್ರಾಮಬಡಾವಣೆಗೆ ತೀವ್ರ ವ್ಯವಸ್ಥೆಮಾಡುವಂಥ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕೆಂದು ವಿನಂತಿ,

Sri S. D. KOTHAVALE (Chikodi).—If four thousand cases are pending in the Secretariat, thousands of them are pending in the lower offices. I request the Hon'ble Minister to activise the entire machinery.

Sri KADIDAL MANJAPPA.—That has been done. Records have been built up and sent to the Government.

ಶ್ರೀ ಎ. ಎಸ್. ಪಾಟೀಲ್.—ಇದರ ಬಗ್ಗೆ ಸರ್ಕಾರಕ್ಕೆ ಅನೇಕ ಸಾರಿ ಹಳ್ಳಿಯ ಜನರು ಅರ್ಜಿ ಹಾಕಿದ್ದಾರೆ, ಮಂತ್ರಿಗಳು ಬಂದಾಗ ಹೇಳಿಕೊಂಡಿದ್ದಾರೆ. ಇಷ್ಟಾದರೂ ಅಕ್ವಿಜಿಷನ್ ಪ್ರಕರಣ ಹಾಗೆಯೇ ಉಳಿದಿದೆ. ಜನ ಕೋರ್ಟಿಗೆ ಹೋಗಿ ದಾವಾ ಮಾಡುತ್ತಾರೆ, ಅದು ತೀರ್ಮಾನವಾಗಲು ವರ್ಷಗಟ್ಟಲೆ ಆಗುತ್ತದೆ. ಹೀಗೆ ಅನೇಕ ಕೇಸುಗಳು ತಡವಾಗಿವೆ. ಇದನ್ನು ಸರಿಪಡಿಸಬೇಕು.

ಇನ್ನು ಹಳ್ಳಿಯ ಉಪಾಧ್ಯಾಯರುಗಳಿಗೆ ಮನೆಗಳಿಲ್ಲ. ಸಾಧಾರಣವಾಗಿ ಒಂದು ತಾಲ್ಲೂಕಿನ ಐವತ್ತು ಅರವತ್ತು ಶಾಲೆಗಳಲ್ಲಿ ಹತ್ತು ಶಾಲಾ ಉಪಾಧ್ಯಾಯರಿಗೆ ಮನೆಗಳಿವೆ. ಹೀಗಾಗಿ ಅನೇಕ ಕಡೆ ಇಬ್ಬರು ಉಪಾಧ್ಯಾಯರು ಸೇರಿ ಒಂದು ಮನೆ ಗೊತ್ತುಮಾಡಿಕೊಂಡು ತಮ್ಮ ಸಂಸಾರವನ್ನು ಎಲ್ಲೋ ಬಿಟ್ಟಿರುತ್ತಾರೆ. ಹೀಗೆ ನಮ್ಮ ಕಡೆ ಶಾಲಾ ಮಾಸ್ತರಿಗೆ ಇರುವುದಕ್ಕೆ ಸೌಕರ್ಯವಿಲ್ಲ. ಹೀಗಿರುವಾಗ ಅವರು ಹುಡುಗರಿಗೆ ಹೇಗೆ ವಿದ್ಯೆ ಹೇಳುವುದು? ಶಾಲಾ ಮಾಸ್ತರಿಗೆ ಮನೆಗಳನ್ನೊದಗಿಸಲು ಒಂದು ಯೋಜನೆಯನ್ನು ಮಾಡಬೇಕು, ಪಂಚಾಯಿತಿಗಳಿಗೆ ಗ್ರಾಂಟ್‌ಕೊಟ್ಟು ಲೋಕಲ್ ಡೆವಲಪ್‌ಮೆಂಟ್‌ವರ್ಕ್ಸ್ ರೀತಿಯಲ್ಲಿ ಮನೆಗಳನ್ನು ಕಟ್ಟಿಸಬೇಕು. ಬೇಕಾದರೆ ಆ ಮಾಸ್ತರುಗಳಿಂದ ಬಾಡಿಗೆ ತೆಗೆದುಕೊಳ್ಳಬಹುದು. ಅಂತೂ ಈ ರೀತಿಯ ವ್ಯವಸ್ಥೆ ಮಾಡಬೇಕು. ಶಾಲಾ ಮಾಸ್ತರರಿಗೆ ಇರಲಿಕ್ಕೆ ವಸತಿ ಸೌಕರ್ಯವಿಲ್ಲದೆ ಅವರು ಶಾಲೆಯಲ್ಲಿ ಪಾಠಮಾಡಲು ಸಾಧ್ಯವಿಲ್ಲ. ಆದ್ದರಿಂದ ತೀವ್ರ ಈ ಕಾರ್ಯಮಾಡಬೇಕು. ತಲಾಟಿಗೂ ಕೂಡ ಈ ರೀತಿ ವಸತಿ ಸೌಕರ್ಯಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ದನಗಳ ದವಾಖಾನೆ ವಿಷಯ. 25,000 ರಾಸುಗಳಿಗೆ ಒಂದು ದವಾಖಾನೆ ಇರಬೇಕೆಂದು ಯೋಜನೆ ಇದೆ; ಈಗ 50,000 cattle headಗೆ ಕೂಡ ಒಂದು ದವಾಖಾನೆ ಇಲ್ಲ. ಆದುದರಿಂದ ಒಂದೊಂದು ತಾಲ್ಲೂಕಿಗೆ ಎರಡು ಮೂರು ಕೇಂದ್ರ

(ಶ್ರೀ ಎ. ಎಸ್. ಪಾಟೀಲ್)

ಗಳನ್ನು ತೆರೆಯಬೇಕು. ವೆಟರಿನರಿ ಆಸ್ಪತ್ರೆಗಳನ್ನು ಸರಿಯಾಗಿ ಬೆಳೆಸಬೇಕೆಂದು ಸೂಚಿಸುತ್ತೇನೆ.

ಗ್ರಾಮಾಂತರದಲ್ಲಿ ಒಕ್ಕಲುತನದ ಅಭಿವೃದ್ಧಿಯ ಬಗ್ಗೆ ಹೇಳುತ್ತ ಗ್ರಾಮಾಂತರಗಳಲ್ಲಿ ಸಾಕಷ್ಟು ರಸ್ತೆಗಳಿಲ್ಲವೆಂದು ಈಗಾಗಲೇ ಹೇಳಿದ್ದಾರೆ. ಈ ವಿಚಾರವನ್ನು ಮಂತ್ರಿಗಳು ನಮ್ಮಲ್ಲಿಗೆ ಬಂದಾಗ ಸಲಹೆಗಳನ್ನು ಕೊಟ್ಟಿದ್ದೇವೆ. ಅವರು ಮಾಡುತ್ತೇವೆಂದು ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ಸುರಪೂರ್ ಇಂಡಿ ರಸ್ತೆಯಲ್ಲಿ ಒಂದು ಪೂಲ್ ಅಗತ್ಯ, ಅದನ್ನು ಇನ್ನೂ ಕಟ್ಟಿಲ್ಲ. ಒಂದೂರಿನಿಂದ ಮತ್ತೊಂದೂರಿಗೆ ಹೋಗುವುದಕ್ಕಾಗುವುದಿಲ್ಲ. ನರಗುಂದ್ ಹತ್ತಿರ ಒಂದು ಪೂಲ್ ಕಟ್ಟಿ ಎಂದು ಶ್ರೀಮಾನ್ ಚನ್ನಬಸಪ್ಪನವರಿಗೆ ಹೇಳಿದೆವು, ಕಟ್ಟುತ್ತೇವೆಂದು ಹೇಳಿ ಅದನ್ನು ಬಿಟ್ಟು ಬೇರೆ ಕಡೆ ಕಟ್ಟಲು ಮಾಡಿದ್ದಾರೆ. ಹೀಗೆ ಅವರು ಹೇಳಿದುದನ್ನು ಮರೆತು ಬಿಡುತ್ತಾರೆ. ಎಲ್ಲರನ್ನೂ ಸಮವಾಗಿ ನೋಡಿಕೊಳ್ಳುತ್ತಾರೆಂದು ನಂಬಿದ್ದೇನೆ.

ನಮ್ಮ ಒಕ್ಕಲುತನದ ಅಭಿವೃದ್ಧಿಯಾಗಬೇಕಾದರೆ, ಒಕ್ಕಲಿಗರ ಅಭಿವೃದ್ಧಿಯಾಗಬೇಕಾದರೆ, ಅವರಿಗೆ ಸರಿಯಾದ ವ್ಯವಸ್ಥೆಮಾಡಬೇಕು, ಹೋದಸಾರಿ ಬತ್ತದ ಬೀಜ, ಗೋಧಿಬೀಜ, ಹತ್ತಿಯಕಾಳು ನಮ್ಮ ಭಾಗದಲ್ಲಿ ಸರಿಯಾಗಿ ವಿತರಣೆಯಾಗಲಿಲ್ಲ. ಇಲಾಖೆಯ ಅಧಿಕಾರಿಗಳು ಸೂಟು ಬೂಟು ಹಾಕಿಕೊಂಡು ಬರುತ್ತಾರೆ. ಅವರೇನು ಕೆಲಸಮಾಡುತ್ತಾರೋ ಗೊತ್ತಿಲ್ಲ. ಒಕ್ಕಲುತನಕ್ಕೆ ಬೇಕಾದ ಬೀಜವನ್ನು ಸರಿಯಾಗಿ ವಿತರಣೆಮಾಡಬೇಕೆಂದು ಅನೇಕ ಸಾರಿ ಹೇಳಿದ್ದೇನೆ. ಇದನ್ನು ಕೊಡಿ ಎಂದು ಕೇಳಿದರೆ, ಗದಗಿಗೆ ಹೋಗಿ ತೆಗೆದುಕೊಳ್ಳಿ, ಧಾರವಾಡಕ್ಕೆ ಹೋಗಿ ತೆಗೆದುಕೊಳ್ಳಿ, ಅಲ್ಲದೆ ಎಂದು ಹೇಳುತ್ತಾರೆ. ನೀರಾವರಿಯಲ್ಲಿ ಬೆಳೆಯುವ ಸಿ. ಓ. 2 ಎಂಬ ಒಂದು ರೀತಿಯ ಹತ್ತಿಯ ಬೀಜ ಇದೆ. ಅದನ್ನು ಅಭಿವೃದ್ಧಿ ಮಾಡಬೇಕು, Seed Farms ನಮ್ಮ ಭಾಗದಲ್ಲಿ ವ್ಯವಸ್ಥೆಯಿಂದ ಕೆಲಸಮಾಡಿಲ್ಲವೆಂದು ಮಾನ್ಯ ಒಕ್ಕಲುತನದ ಮಂತ್ರಿಗಳಿಗೆ ಹೇಳಿದ್ದೇನೆ. ನಮ್ಮ ಕಡೆ ಗೋಧಿ ಬೆಳೆ ಬಹುಮುಖ್ಯವಾದುದು, ಇದಕ್ಕೆ ಒಂದು ರೋಗ ಬರುತ್ತದೆ. ಮನುಷ್ಯನ ಎತ್ತರ ಬೆಳೆದ ಬೆಳೆ ತಕ್ಷಣ ನಾಶವಾಗುತ್ತದೆ. ಇದನ್ನು ಅವರು ತಿಳಿದುಕೊಂಡಿದ್ದರೂ ಕೂಡ ಒಕ್ಕಲುತನದ ಅಧಿಕಾರಿಗಳಾಗಲೀ ಮಂತ್ರಿಗಳಾಗಲೀ ಇದರ ಬಗ್ಗೆ ಯಾವ ರೀತಿ ಸಂಶೋಧನೆ ನಡೆಸಬೇಕು, ನಿವಾರಣೆ ಹೇಗೆ ಮಾಡಬೇಕೆಂಬ ಬಗ್ಗೆ ವ್ಯವಸ್ಥೆ ಮಾಡಿಲ್ಲ. ನಮ್ಮ ಕಡೆ ಲಕ್ಷ್ಮಿ ಹತ್ತಿ ಕೂಡ ನಾಶವಾಗುತ್ತಿದೆ. ಇದರಿಂದ ಸುಮಾರು ಎರಡು ಕೋಟಿ ರೂಪಾಯಿನಷ್ಟು ನಷ್ಟವಾಗುತ್ತಿದೆ. ಇದನ್ನು ತಡೆಗಟ್ಟಬೇಕಾದರೆ ಸಂಶೋಧನೆಮಾಡುವುದು ಅತ್ಯಾವಶ್ಯಕ. ಇದರ ಬಗ್ಗೆ ಏನು ವ್ಯವಸ್ಥೆ ಮಾಡಿದ್ದಾರೆಂಬ ಕಡೆ ಶ್ರೀಮಾನ್ ರಾಚಯ್ಯನವರು ಪೂರ್ಣಗಮನ ಕೊಡಬೇಕು. ಅವರು ಪ್ರವಾಸ ಬಂದಾಗ ಮುಖ್ಯವಾಗಿ ಒಕ್ಕಲಿಗರ ಆಗು ಹೋಗುಗಳ ಬಗ್ಗೆ ಏನು ಮಾಡಬೇಕೋ ಅದನ್ನು ಸರಿಯಾಗಿ ಮಾಡಿದರೆ ಅವರ ಸಂಚಾರ ಸಫಲವಾಗುತ್ತದೆ.

4 P.M.

ಈಗ ಸೀಡ್ ಫಾರಮ್ಸ್ ಧಾರವಾಡದಲ್ಲಿದೆ. ಕಾಟನ್ ಸೀಡ್ ಬಗ್ಗೆ ಕೆಲವೊಂದು ಬೀಜವನ್ನು ಕಳುಹಿಸಿಕೊಡುತ್ತಾರೆ. ಅದನ್ನು ಕಳುಹಿಸಿಕೊಡಬೇಡಿ ಎಂದು ಹೇಳುತ್ತೇನೆ. ನಾವು ಮಳೆಗಾಲದಲ್ಲಿ ಬೀಜದ ಪರೀಕ್ಷೆ ಮಾಡುತ್ತೇವೆ. ಗೋಧಿಯ ಸಂಶೋಧನೆ ಸಂಪೂರ್ಣವಾಗಿ ನಿಂತು ಹೋದಂತೆ ಆಗಿದೆ. ನಾವು ವಿಚಾರ ಮಾಡಲಿಕ್ಕೆ ಗೋಧಿ ಸಂಶೋಧನೆ ಸರಿಯಾಗಿ ನಡೆದುಕೊಂಡು ಹೋಗುತ್ತಿಲ್ಲ. ಆತಂಕವಾಗಿ ನಿಂತಿದೆ. ಅದರಂತೆ ಲಕ್ಷ್ಮಿ ಕಾಟನ್‌ನಿಂದ ಕೂಡ 5-6 ವರ್ಷಗಳಿಂದಲೂ ಲುಕ್ಸಾನು ಆಗಿದೆ. ಎಲ್ಲಾ ವಿಧದಿಂದ ರೈತರಿಗೆ ಕೋಟಿಗಟ್ಟಲೆ ದುಡ್ಡು ಲಕ್ಸಾನು ಆಗುತ್ತಿದೆ. ಈ ಸೀಡ್ ಫಾರಮ್ಸ್ ವಿಷಯದಲ್ಲಿ ಸರ್ಕಾರದವರು ಸರಿಯಾದ ವ್ಯವಸ್ಥೆ ಮಾಡಬೇಕು ಎಂದು ಹಿಂದೆಯೇ ಸೂಚನೆ ಕೊಟ್ಟಿದ್ದೇನೆ. ಸೀಡ್ ಫಾರಂಗಳು ಎಲ್ಲಿ ರಾಜ್ಯದೊಳಗೆ ಇವೆ ಅವುಗಳ ವ್ಯವಸ್ಥೆಯ ಬಗ್ಗೆ ತಜ್ಞರು ತಿಳಿದಂಥ ಅನುಭವಸ್ಥರಾದಂಥ ಆಫೀಸರನ್ನು ನೇಮಿಸಿ, Director ಅಥವಾ Special Duty Officer for seed farm or research farm ಹೀಗೆಂದು ಒಬ್ಬರು ಸ್ಪೆಷಲ್ ಡ್ಯೂಟಿ ಆಫೀಸರನ್ನು ಒಕ್ಕಲುತನದ ಖಾತೆಗೆ ನೇಮಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಒಕ್ಕಲುತನದ ಬಗ್ಗೆ ಆಹಾರವನ್ನು ಹೆಚ್ಚು ಬೆಳೆಯಿರಿ, ಆಹಾರದ ಕೊರತೆ ಬಹಳ ಇದೆ ಎಂದು ಹೇಳುವುದು ಖರೆ. ಆ ವಿಷಯದಲ್ಲಿ ಮುಖ್ಯವಾಗಿ ರೈತರಿಗೆ ಸರಿಯಾದ ಬೀಜ, ಗೊಬ್ಬರ ಏನೂ ಸಿಕ್ಕದೆ ನೀರಾವರಿ ಇಲ್ಲದೆ ರೈತ ಹೇಗೆ ಬೆಳೆಯಬೇಕು ? ಮೊದಲು ಆ ಸಮಸ್ಯೆಗಳನ್ನು ಬಗೆ ಹರಿಸಿ ಹೆಚ್ಚು ಬೆಳೆಯಲಿಕ್ಕೆ ಅವಕಾಶ ಮಾಡಿಕೊಟ್ಟರೆ ಬೆಳೆಯುತ್ತಾರೆ. ಯೋಜನೆ ಮಾಡಿದ ಹಾಗೆ ಅದು ಕಾಗದದಮೇಲೆಯೇ ಉಳಿಯುತ್ತದೆ. ಯಾವರೀತಿಯಾಗಿ ಅದನ್ನು ನಿರಿತೂಗಿಸಬೇಕು ಎಂದು ಹೇಳಿ, ಹಳ್ಳಿಯ ಜನಗಳಿಗೆ ವ್ಯವಸ್ಥೆ ಮಾಡಿ ಕೊಡಬೇಕು, ಎನ್ನುವುದು ಸರ್ಕಾರದ ಲಕ್ಷ್ಯಕ್ಕೆ ಬಾರದ ಹೊರತು ಯೋಜನೆಗಳು ಯಶಸ್ವಿಯಾಗುವುದಿಲ್ಲ ಎಂದು ಎನಿಸುತ್ತದೆ. ಬೀಜ ಕೊಡಬೇಕು ಗೊಬ್ಬರ ಕೊಡಬೇಕು ಅದನ್ನು ಕೊಡುತ್ತಾ ಇಲ್ಲ. ಸಾಗು ಮಾಡಬೇಕು ಎಂದರೆ ನೀರಾವರಿ ಸೌಕರ್ಯಬೇಕು. ನಮ್ಮ ಭಾಗದಲ್ಲಿ ನೋಡಿದರೆ ಕಳೆದ ಮೂರು ವರ್ಷಗಳಿಂದ ಬರಗಾಲಕ್ಕೆ ಈಡಾಗಿದ್ದಾರೆ. ಸರ್ಕಾರದವರು ಏನೆನ್ನುತ್ತಾರೆ ಎಂದರೆ ಬರಗಾಲ ಎಂದು ಸಾರಬೇಡಿ ಎಂದು ಹೇಳುತ್ತಾರೆ. ಏತಕ್ಕೆಂದರೆ ಹೆಚ್ಚಿನ ಸಹಾಯ ಕೊಡಬೇಕಾಗುತ್ತದೆ, ಫ್ಯಾಮಿನ್ ಕೋಡ್ ಇದೆ ಅದರಂತೆ ನಾನಾ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ, ಅಧಿಕಾರಿಗಳಿಗೆ ಬಹಳ ಕೆಲಸ ಬರುತ್ತದೆ ಎಂದು ಗರ್ವನ್ಮೆಂಟಿನ ಒಳಗೆ ಹೇಳುತ್ತಾರೆ. ಬರಗಾಲದಲ್ಲಿ ಎಷ್ಟು ಜನರಿಗೆ ತ್ರಾಸ ಇರಬೇಕೋ ಅದಕ್ಕಿಂತ ಹೆಚ್ಚು ತ್ರಾಸ ನಮ್ಮಕಡೆ ಉಂಟಾಗಿದೆ. ಸುಮಾರು 50-60 ಹಳ್ಳಿಗಳಲ್ಲಿ ಬಿತ್ತನೆ ಭಾಗ ಆಗದೆ ಹಾಗೆಯೇ ಉಳಿದು ನಿಂತಿದೆ. ಅರ್ಜೆಂಟ್ ಸ್ಕೇರ್‌ಸಿಟಿ ಎಂದು ಸರ್ಕಾರ ಒಪ್ಪಿಕೊಂಡು ಇಷ್ಟಾದರೂ ಸರ್ಕಾರದವರು ಸಾಧಿಸಿಕೊಡಿ ಎಂದು ಹೇಳುತ್ತೇನೆ. ಎಷ್ಟು ರೀತಿಯಿಂದ ನಮ್ಮಕಿನ್ನ ಕಷ್ಟಪಡಿಸಬೇಕೆಂದಿದ್ದೀರಿ ಎಂದು ಎಷ್ಟೋ ಕಡೆ ಜನಗಳು ಹೇಳುತ್ತಾರೆ. ರೈತರ ಮಾತು ಕೇಳಿದರೆ ಬಹಳ ಹೃದಯ ವಿದ್ರಾವಕವಾಗುತ್ತದೆ. ತಾವು ಇರ್ರಿಗೇಷನ್ ಸ್ಕೀಮ್ ಮಲಪ್ರಭಾ ಪ್ರಾಜೆಕ್ಟ್ ಮತ್ತು ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಸ್ಕೀಮ್ ಬಗ್ಗೆ ಬರೆದು ಶಿಫಾರಸ್ಸು ಮಾಡಿದ್ದೀರಿ, ಅದಕ್ಕೆ ಸರ್ಕಾರದವರು ಹೆಚ್ಚು ಆಸಕ್ತಿ ವಹಿಸಿ ತೀವ್ರವಾಗಿ ಕಾರ್ಯಾಚರಣೆಗೆ ಬರುವಂತೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಬರಗಾಲದ ಬಗ್ಯೆ ಲಾಗು ಆಗಲಿಕ್ಕೆ 10ವರ್ಷ ಬೇಕು. ನೀರಾವರಿ ಸ್ಕೀಮುಗಳು ತಯಾ

ರಾಗುವಾಗ ಕಾಲುವೆಗಳು ತೀವ್ರವಾಗಿ ಬರಬೇಕಾದರೆ 10 ವರ್ಷ ಬೇಕಾಗುತ್ತದೆ ಬರಗಾಲದಿಂದ ಪೀಡಿತವಾದ ಪ್ರದೇಶದ ಜನಗಳಿಗೆ ಆದಷ್ಟು ಸಹಾಯ ಮಾಡಲಿಕ್ಕೆ ಯಾವ ಕೆರೆ ಆಗಬೇಕು, ಯಾವ ಕಾಮಗಾರಿಗಳು ಆಗಬೇಕು ಯಾವ ಯಾವ ತರಹ ತ್ರಾಸಗಳಿವೆ, ಅವುಗಳನ್ನು ನಿವಾರಣೆ ಮಾಡಲಿಕ್ಕೆ ಶಾಶ್ವತವಾದ ಕಮಿಟಿಯನ್ನು ನೇಮಿಸಬೇಕು. ಡೆಪ್ಯುಟಿ ಕಮೀಷನರ ರಿಪೋರ್ಟ್ ಆಗಿ, ಬ್ಲಾಕ್ ಡೆವಲಪ್‌ಮೆಂಟ್ ಕಮಿಟಿ ಶಿಫಾರಸ್ಸು ಆಗಿ, ಒಂದು ಸ್ಕೀಮ್ ಮಾಡಿ ಅದು ಹಾಗೆಯೇ ಉಳಿದಿದೆ. ಕೆರೆ ಕಟ್ಟಿಸಲಿಕ್ಕೆ ಅಡ್ಡಿ ಇಲ್ಲ ತಮಗೆ ಎಲ್ಲಾ ಕೊಡಲಿಕ್ಕೆ ಅಡ್ಡಿ ಇಲ್ಲ ಎಂದು ಹೇಳುತ್ತಾರೆ. ಕೆಲಸ ಮಾತ್ರ ಆಗುತ್ತಾ ಇಲ್ಲ. ಸ್ಟೇಟ್ ಲೆವೆಲ್‌ನೊಳಗೆ ಒಂದು ಬರಗಾಲದ ಕಮಿಟಿಯನ್ನು ಮಾಡಬೇಕು. 1958-59ನೇ ಇಸವಿಯಲ್ಲ ಫ್ಯಾಮಿನ್ ರಿಲೀಫ್ ಫಂಡ್ ಎಂದು ಮಾಡಿ ಅದಕ್ಕೆ 30ಲಕ್ಷ ರೂಪಾಯಿಗಳನ್ನು ಮೀಟ್ ಮಾಡಲಿಕ್ಕೆ ಆಕ್ಟ್ ತಂದಿದ್ದೀರಿ, ಅದರ ಬಗ್ಗೆ ಶ್ಲಾಘನೆ ಇದೆ. ಅದನ್ನು ತೀವ್ರವಾಗಿ ಪಾಸು ಮಾಡಿ ಬರಗಾಲದಿಂದ ಪೀಡಿತರಾದ ಜನಗಳಿಗೆ ಅನುಕೂಲ ಮಾಡಿಕೊಡಲು ತೀವ್ರವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನನ್ನ ಆಶೆ.

ಹಳ್ಳಿಗಳ ಶಾಲೆಗಳ ವಿಷಯವನ್ನು ಕುರಿತು ಶಿಕ್ಷಣದ ಬಗ್ಗೆ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ. ಮೊದಲನೆಯದಾಗಿ ಹುಡುಗರಿಗೆ ಶಾಲೆಯೊಳಗೆ ಏನು ಶಿಕ್ಷಣ ಸಿಕ್ಕುತ್ತದೆ, ಎಂದರೆ ಪ್ರೈಮರಿ ಸ್ಕೂಲನೊಳಗೆ 7ನೆಯ ಕ್ಲಾಸ್ ಪಾಸು ಮಾಡಿದರೂ ನಾಲ್ಕು ಅಕ್ಷರ ಕೂಡ ಶುದ್ಧ ಬರೆಯುವುದಕ್ಕೆ ಬರುವುದಿಲ್ಲ. ಇದಕ್ಕೆ ಕಾರಣ ಏನು ಎಂಬುದನ್ನು ತಾವೇ ತಿಳಿದುಕೊಳ್ಳಬೇಕು. ಕೆಲವರಿಗೆ ಲೆಖ್ಖ ಕೂಡ ಸರಿಯಾಗಿ ಮಾಡುವುದಕ್ಕೆ ಬರುವುದಿಲ್ಲ. ಯಾವ ಮಾಸ್ಟರ್‌ಪಾಠ ಹೇಳಿ ಕೊಡುತ್ತಾರೋ ಅವರೇ ಪರೀಕ್ಷೆ ಮಾಡುವುದರಿಂದ ನಾನೇ ಕ್ಲಾಸ್ ತೆಗೆದುಕೊಳ್ಳುತ್ತೇನೆ ಫೇಲ್ ಮಾಡಿಸಬಾರದು ಎಂದು ಪ್ರಮೋಟ್ ಮಾಡುವುದು ಒಂದು ಪದ್ಧತಿಯಾಗಿದೆ ಮತ್ತು ಆ ಊರಿನಲ್ಲಿ ಪ್ರಸಿದ್ಧ ಮನುಷ್ಯ ಇರುತ್ತಾನೆ. ಅವನ ಮಾತಿಗೆ ಬೆಲೆ ಕೊಟ್ಟು ಹುಡುಗನನ್ನು ಪ್ರಮೋಟ್ ಮಾಡುವ ಪದ್ಧತಿ ಇದೆ. ಹೀಗಾಗಿ ಶಿಕ್ಷಣ ಸರಿಯಾಗಿ ಸಿಕ್ಕುವುದಿಲ್ಲ. ಆದುದರಿಂದ ಆತ್ತಕಡೆ ಲಕ್ಷ್ಯಕೊಡಬೇಕು. ಶಾಲೆಯ ಅಧಿಕಾರಿಗಳು ಏನು ಇದ್ದಾರೆ ಅವರು ಪೂರ್ಣ ಕಣ್ಣುಮುಚ್ಚಿರುತ್ತಾರೆ ಅವರು ನೋಡುವುದಿಲ್ಲ. ಸ್ಪೆಷಲ್ ಎಟೆನ್‌ಷನ್ ಕೊಟ್ಟರೆ ಇಂಥಾ ಹುಡುಗರು ಪಾಸಾಗುತ್ತಾರೆಯೇ ಹೊರತು ಇಲ್ಲದಿದ್ದರೆ 100ಕ್ಕೆ 80 ಮಂದಿ ಪಾಸಾಗುವುದಿಲ್ಲ. ಶಿಕ್ಷಣದ ವ್ಯವಸ್ಥೆ ಸರಿಯಾಗಿರುವುದಿಲ್ಲ. ಶಿಕ್ಷಣದ ಅಧಿಕಾರಿಗಳು ಯೋಗ್ಯಕ್ರಮ ತೆಗೆದುಕೊಳ್ಳಬೇಕು. ಯಾರು ಮಾಸ್ಟರಾಗಿರುತ್ತಾರೋ ಅವರೇ ಪರೀಕ್ಷೆ ಮಾಡುವುದು ಸರಿಯಲ್ಲ. ಬೇರೆ ಜನರು ಇನ್ಸ್‌ಪೆಕ್ಟ್ ಮಾಡಬೇಕು. ಒಳ್ಳೆಯ ಶಿಕ್ಷಣ ಅವರಿಗೆ ಸಿಕ್ಕುವಂತೆ ಏರ್ಪಾಟು ಮಾಡಬೇಕು ಎಂದು ನಾನು ಆಶೆ ಪಡುತ್ತೇನೆ.

ಇನ್ನು ಪೋಲೀಸ್ ಬಗ್ಗೆ ಹೇಳಬೇಕಾದರೆ ನಾಸಿಕ್‌ದೊಳಗೆ ಪೋಲೀಸ್ ಟ್ರೈನಿಂಗ್ ಸ್ಕೂಲು ಇದೆ. ಅಲ್ಲಿ ಸರಿಯಾದ ತರಬೇತು ಹೊಂದುವುದಕ್ಕೆ ಇಂಟರ್‌ಮೀಡಿಯೇಟ್ ಕಲಿತವರನ್ನು ಎರಡು ವರ್ಷಗಳಿಂದ ಹೊಸದಾಗಿ ರೆಕ್ರೂಟ್‌ಮೆಂಟ್ ಮಾಡಿರುವುದಿಲ್ಲ. ಅಂಥವರು ತರಬೇತು ಹೊಂದಿ ಸರಿಯಾಗಿ ಶಾಲೆಯಲ್ಲಿ ಕಲಿತು ಪೋಲೀಸ್ ಡಿಪಾರ್ಟ್‌ಮೆಂಟಿಗೆ ಬಂದರೆ ಸರಿಯಾಗಿ ಇನ್‌ವೆಸ್ಟಿಗೇಷನ್ ಆಗುತ್ತದೆ, ಸರಿಯಾಗಿ ಕೆಲಸ ನಡೆಯುತ್ತದೆ ಎಂದು ನನ್ನ ಆಶೆ. ಈಗ ಎರಡು ವರ್ಷಗಳಿಂದ ನೋಡುತ್ತೇನೆ, ರೆಕ್ರೂಟ್‌ಮೆಂಟ್ ಸರಿಯಾಗಿ ಆಗಿಲ್ಲ. ಪೋಲೀಸ್ ಟ್ರೈನಿಂಗ್ ಸ್ಕೂಲ್ ಇಡೀ ಸ್ಟೇಟಿನ ಬಗ್ಗೆ ಮಾಡಬೇಕು. ಅದು ಇಲ್ಲದಿದ್ದರೆ ಇನ್‌ವೆಸ್ಟಿಗೇಷನ್ ಸರಿಯಾಗಿ ಆಗುವುದಿಲ್ಲ. ಹಳೆಯ ಮಂದಿಯನ್ನೇ ಸರಿಯಾಗಿ ಕೆಲಸ ಮಾಡು ಎಂದರೆ ಆಗುವುದಿಲ್ಲ. ಹೊಸದಾಗಿ ತರಬೇತು ಹೊಂದಿರುವವರು ಎಲ್ಲಾ ಕ್ರಮಗಳನ್ನು ತಿಳಿದುಕೊಂಡಿರುವವರು ಬೇಕು. ಅವರಿಗಾಗಿ ಇಂಥಾ ಶಾಲೆಗಳನ್ನು ಏರ್ಪಾಟು ಮಾಡಬೇಕು ಎಂದು ನಾನು ಒಂದು ಸೂಚನೆ ಮಾಡುತ್ತೇನೆ.

ರೆವೆನ್ಯೂ ಸೆಟಲ್‌ಮೆಂಟ್ ಬಗ್ಗೆ ಕಂದಾಯ ಮಂತ್ರಿಗಳೂ ಹೇಳುತ್ತಾರೆ ಅರ್ಥಸಚಿವರೂ ಹೇಳುತ್ತಾರೆ. ಬಹಳ ದಿವಸಗಳತನಕ ಹೋಗುತ್ತದೆ ಎಂದು ನಮ್ಮ ಭಾಗದೊಳಗೆ ರೀ ಸೆಟ್ಲ್‌ಮೆಂಟ್ ಎರಡು ವರ್ಷದೊಳಗೆ ಎಲ್ಲಾ ಮುಗಿಯಬಹುದು ಜನಗಳ ಮೇಲೆ ಪರಿಣಾಮವಾಗಿ ತ್ರಾಸ ಆಗುತ್ತದೆ ಎನ್ನುವ ವಿಚಾರ ಮಾಡಬಾರದು.

ಶ್ರೀ ಕಡಿದಾಳ್ ಮಂಜಪ್ಪ.—ಕೆಲಸ ನಡೆಯುತ್ತಿದೆ.

ಶ್ರೀ ಎ. ಎಸ್. ಪಾಟೀಲ್.—ಹೆಚ್ಚೋ ಉತ್ಪನ್ನ ಬರತಕ್ಕ ಬಾಬುಗಳನ್ನು ಅಲ್ಲಿಗೇ ಬಿಟ್ಟಿದ್ದೀರಿ. ಅವನ್ನು ಮನಸ್ಸು ಒಪ್ಪುವಂತೆ ತಾವು ಹೇಳಬೇಕು. ರೀ ಸರ್ವೇ ಸೆಟ್ಲಮೆಂಟ್ ಎರಡು ವರ್ಷದೊಳಗೆ ಪೂರ್ಣ ಮುಗಿದು ಮತ್ತೆ ಉಳಿಯಬಾರದು ಎಂಬಕಡೆಗೆ ಗಮನ ಇಟ್ಟುಕೊಂಡು ಕೂಡಲೇ ಮುಗಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಹೆಚ್ಚು ಹೇಳಲಿಕ್ಕೆ ಅವಕಾಶವಿಲ್ಲ; ಮುಂದೆ ಡಿಮ್ಯಾಂಡ್ ಚರ್ಚೆಯ ಕಾಲದಲ್ಲಿ ಯಾವಾಗ ಅವಕಾಶ ಕೊಡುತ್ತಾರೋ ಆಗ ಹೇಳುತ್ತೇನೆ ಎಂದು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನಾನು ಈ ಬಜೆಟ್‌ಮೇಲೆ ಸಾಕಾದಷ್ಟು ಭಾಗವಹಿಸಬೇಕೆಂದು 7 ದಿನಗಳ ಕಾಲ ತಪಸ್ಸುಮಾಡಿದೆ.

ಶ್ರೀ ಕಡಿದಾಳ್ ಮಂಜಪ್ಪ.—ತಪಸ್ಸುಮಾಡಿದ್ದು ಸಿದ್ಧಿಸಿತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಧ್ಯಕ್ಷರಿಗೆ ನಾನು ನಿಜವಾಗಿಯೂ ಚಿರಋಣಿ. ಅವರು ಮಾಡಿದ ತೀರ್ಮಾನ ಉಳಿಸಿಕೊಂಡರಲ್ಲಾ ಎಂದು ನನಗೆ ಒಂದು ದೊಡ್ಡ ಆನಂದ. ಸ್ವಾಮಿ, ನಾನು ಈ ಸಭೆಯಲ್ಲಿ ಈ ದೇಶದ ಬಾರ್ಡರ್ ಇಷ್ಯೂ ಮೇಲೆ ಮತ್ತು ಬಡ್‌ಜೆಟ್ಟು ಎಷ್ಟುಮಟ್ಟಿಗೆ ಜನಗಳಿಗೆ ಉಪಯೋಗವಾಗಿದೆ ಇದರಮೇಲೆ ಮಾತನಾಡುತ್ತಾ ಶ್ರೀಮಾನ್ ಮರಿಯಪ್ಪನವರು ಬಹಳ ಬುದ್ಧಿವಂತರು, ರಾಜಕೀಯದಲ್ಲಿ ನುರಿತಂಥವರು, ಅವರ ಕೈಯಲ್ಲಿ ರಾಜ್ಯದ ಆಡಳಿತ ಇದ್ದರೆ ಬಹಳ ಚೆನ್ನಾಗಿ ಆಗುತ್ತದೆ ಎಂದು ಹೇಳಿ ಕಾಂಗ್ರೆಸ್‌ನವರು ಅಧಿಕಾರಕ್ಕೆ ಬಂದಮೇಲೆ 4 ಮಂತ್ರಿಮಂಡಲದಲ್ಲಿ ಶ್ರೀಮಾನ್ ಕೆ. ಸಿ. ರೆಡ್ಡಿ ಅವರು, ನಿಜಲಿಂಗಪ್ಪನವರು, ಮತ್ತೆ ನಿಜಲಿಂಗಪ್ಪನವರು, ಜತ್ತಿ ಅವರು ಈ ರೀತಿ ನಾಲ್ಕು ಮಂತ್ರಿಮಂಡಲದಲ್ಲಿದ್ದ ಇವರಿಂದ ಜನ ಏನು ನಿರೀಕ್ಷೆ ಮಾಡಿದ್ದರೋ ಆ ನಿರೀಕ್ಷೆ ಈಡೇರಲಿಲ್ಲ ಎಂದು ನನಗೆ ಬಹಳ ವ್ಯಸನವಾಗುತ್ತದೆ. ಸ್ವಾಮಿ, ಅವರು ಮೂರು ಬಜೆಟ್‌ನ್ನು ಕೊಟ್ಟರು. ಅವು ನಮ್ಮ ಕೈಯಲ್ಲಿವೆ. 1957-58, 58-59, 59-60, 60-61ನೆಯದನ್ನು ಇವೊತ್ತಿನ ದಿವಸ ನಮ್ಮ ಮುಂದೆ ಇಟ್ಟುಕೊಂಡಿದ್ದೇವೆ. ಇದರಿಂದ ದೇಶಕ್ಕೆ ಎಷ್ಟು ಒಳ್ಳೆಯದಾಗುತ್ತದೆ, ಇದರ

(ಶ್ರೀ ಸಿ. ಜಿ. ಮುಕ್ಕಣ್ಣಪ್ಪ)

ಮೇಲೆ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ನಮ್ಮ ಜನಗಳ ಮೇಲೆ ಇದು ಎಷ್ಟುಮಟ್ಟಿಗೆ ಕಷ್ಟವನ್ನುಂಟುಮಾಡಿದೆ ಎಂಬುದನ್ನು ಯೋಚನೆಮಾಡಿದರೆ ಸ್ವಾಮಿ, ಶ್ರೀಮಾನ್ ಮರಿಯಪ್ಪನವರಿಗೆ ಮಹಾತ್ಮಾಗಾಂಧಿಯವರು ಹೇಳಿದಹಾಗೆ "ಸಬ್‌ಕೋ ಸನ್‌ಮತಿ ದೇ ಭಗವಾನ್" ಎಂದು ದೇವರು ಏಕೆ ಅವರಿಗೆ ಒಳ್ಳೆಯ ಬುದ್ಧಿ ಕೊಡಲಿಲ್ಲ? ಸಾಮಾನ್ಯ ಜನಗಳ ಹಿತವನ್ನು ಮನಸ್ಸಿನಲ್ಲಿಟ್ಟುಕೊಂಡು ಒಂದು ದೇಶದ, ಒಂದು ರಾಜ್ಯದ ಆಯವ್ಯಯಪಟ್ಟಿಯನ್ನು ತಯಾರು ಮಾಡುವಾಗ ಅವರು ಏಕೆ ಅದನ್ನು ಯೋಚನೆಮಾಡಲಿಲ್ಲ ಎಂದು ಬಹಳ ನೊಂದ ಮನಸ್ಸಿನಿಂದ ಈ ಸಭೆಯಲ್ಲಿ ಮಾತನಾಡುತ್ತಾ ಇದ್ದೇನೆ.

ಸ್ವಾಮಿ, ನಮ್ಮಮುಂದೆ ಇರತಕ್ಕ ಈ ಆಯವ್ಯಯ ಪಟ್ಟಿ ಬರಿಯ ಅಂಕಿಅಂಶಗಳಿಂದ ಕೂಡಿರತಕ್ಕದ್ದು ಅಷ್ಟೇ ಅಲ್ಲ ಇದು ಬರೀ Jugglery of figures ಅಷ್ಟು ಆಗಿದೆಯೇ ಹೊರತು ಇದರಿಂದ ದೇಶದ ಅಭ್ಯುದಯವನ್ನು ಜನತೆಯನ್ನು ಎಂದರೆ ಬಡವರನ್ನು, ಬಲ್ಲಿದವರನ್ನಾಗಿ ಮಾಡತಕ್ಕ ಯಾವುದೇ ಒಂದು ಮಾರ್ಗ ಅಥವಾ ದೇಶದ ಯಾವುದಾದರೂ ಅಭಿವೃದ್ಧಿಕಾರ್ಯಗಳಿಗೆ ಏನಾದರೂ ಒಂದು ಪ್ರೋಗ್ರಾಂ, ರಚನಾತ್ಮಕವಾದ ಕೆಲಸಮಾಡುವುದಕ್ಕೆ ಹಣ ಇದೆಯೇ ಎಂದರೆ ಇಲ್ಲ. ಇದರಲ್ಲಿ ಪ್ರತಿವರ್ಷವೂಕೂಡ ರೆವಿನ್ಯೂಗೆ ಇಷ್ಟು, ಅಗ್ರಿಕಲ್ಚರ್‌ಗೆ ಇಷ್ಟು, ಪೋಲೀಸ್‌ಗೆ ಇಷ್ಟು, ಎನ್. ಇ. ಎಸ್. ಗೆ ಇಷ್ಟು, ಸಿ. ಡಿ. ಬ್ಲಾಕ್ಸ್‌ಗೆ ಇಷ್ಟು ಎಂದು ಹಣ ಬ್ರೈಫರ್ಕೇಟ್ ಆಗಿ ಪ್ರತಿಯೊಂದು ಡಿಮ್ಯಾಂಡಿನಲ್ಲಿ ಅಷ್ಟಷ್ಟು ಹಣ ಸೇರಿಸಿದ್ದಾರೆಯೇ ಹೊರತು ಯಾವುದು ಅನುಪಯೋಗ ಅಥವಾ ಉಪಯೋಗ, ಯಾವುದಕ್ಕೆ ಹೆಚ್ಚು ಹಣ ಒದಗಿಸಬೇಕು, ಯಾವುದಕ್ಕೆ ಹೆಚ್ಚು ಹಣ ಉಪಯೋಗಿಸಿದರೆ ಅದರಿಂದ ಜನತೆಗೆ ಕಲ್ಯಾಣವಾಗುತ್ತದೆ ಎಂಬುದನ್ನು ತಿಳಿಸುವ ವಿಷಯ ಈ ಬಡ್ಜೆಟ್‌ನಲ್ಲಿ ಯಾವ ಹಾಳೆಯನ್ನು ತೆಗೆದರೂ ನನ್ನ ಕಣ್ಣಿಗೆ ಕಾಣುತ್ತಿಲ್ಲ. ಶ್ರೀಮಾನ್ ನರಸಿಂಹನ್‌ರವರು, ಶ್ರೀಮಾನ್ ಮಲ್ಲಾರಾಧ್ಯರವರು ಆಯವ್ಯಯ ಪಟ್ಟಿಯಲ್ಲಿರತಕ್ಕ ಎಲ್ಲಾ ಅಂಕಿಅಂಶಗಳನ್ನೂ ತುಲನೆ ಮಾಡಿ ಆಡಳಿತದಲ್ಲಿರತಕ್ಕ ಪಕ್ಷ ಆಯವ್ಯಯದ ಪಟ್ಟಿಯನ್ನು ಈ ಸಭೆಯಮುಂದೆ ಇಟ್ಟಂಥ ಮಂತ್ರಿಗಳ ವಿಚಾರವಾಗಿ ಅವರಿಗೆ ಮಲ್ಲಾರಾಧ್ಯರು ಕಾಂಪ್ಲಿಮೆಂಟ್ ಕೊಟ್ಟರೂ ಕೂಡ ಈ ದೇಶದ ಹಿತವನ್ನು ಸಾಧನೆಮಾಡುವುದಕ್ಕೆ ದೇಶದ ಎಲ್ಲಾ ರಂಗದಲ್ಲೂ ಬಡವನು ಉತ್ತಮ ರೀತಿಯ ಜೀವನ ನಡೆಸುವುದಕ್ಕೆ ಯಾವುದೇ ಸಫಲವಾಗುವ ರೀತಿ, ಯಾವ ವಿಷಯವೂ ಇದರಲ್ಲಿ ಅಡಕವಾಗಿಲ್ಲ ಎಂದು ಅವರು ಒಂದೇ ಶಬ್ದದಲ್ಲಿ ಹೇಳಿದರು. ಸ್ವಾಮಿ ಈ ಬಡ್ಜೆಟ್ಟು ಹೇಗಿದೆ ಎಂದರೆ ಬಡವನನ್ನು ಬರಡುಮಾಡಿ, ಬಲ್ಲಿದನನ್ನು ಮತ್ತೊಮ್ಮೆ ಬಲಿಷ್ಠನನ್ನಾಗಿ ಮಾಡತಕ್ಕ ರೀತಿಯಲ್ಲಿ ಕಾಣುತ್ತಾ ಇದೆ. ಎಲ್ಲ ಸ್ನೇಹಿತರೂ, ಆ ಕಡೆಯವರು ಎರಡೂಕಡೆ ಎಲ್ಲರೂ ಮಾತನಾಡಿದರು. ಇದು ಬಡವನಿಗೆ ಅಲ್ಲ. ಬಡವನಿಗೆ ಆಗಿದ್ದರೆ ಹೀಗಿರುತ್ತಿರಲಿಲ್ಲ. ಶ್ರೀಮಾನ್ ಮರಿಯಪ್ಪನವರು ಈ ಬಡ್ಜೆಟ್‌ನ್ನು ನಮ್ಮಮುಂದೆ ಇಡುವಾಗ ಇದು tax free ಬಡ್ಜೆಟ್, ಇದರಲ್ಲಿ ಯಾರಮೇಲೂ ಪ್ರತ್ಯಕ್ಷವಾಗಿ ಆಗಲಿ ಅಪ್ರತ್ಯಕ್ಷವಾಗಿ ಆಗಲಿ ತೆರಿಗೆಹಾಕಿಲ್ಲ ಇದು ಉಳಿತಾಯ ಬಡ್ಜೆಟ್ ಎಂದು ಹೇಳಿದರು. ಸ್ವಾಮಿ ಇನ್ನು ಒಂದು ವಿಷಯ ಹೇಳಿದರು ಬಹಳ ಕಷ್ಟಪಟ್ಟು, ಬಹಳ ಬುದ್ಧಿವಂತಿಕೆಯಿಂದ ಮಾಡಿದ್ದೇವೆ ಎಂದು. ಈಗ ತಾಲ್ಲೂಕು ಬೋರ್ಡಿಗೆ ಬಡ್ಜೆಟ್ ತಯಾರುಮಾಡಲು ಅಧಿಕಾರ ಇದೆ. ಮುನಿಸಿಪಾಲಿಟಿಯವರಿಗೆ ಬಡ್ಜೆಟ್ ತಯಾರು ಮಾಡುವುದಕ್ಕೆ ಅಧಿಕಾರ ಇದೆ. ಡಿಸ್ಟ್ರಿಕ್ಟ್ ಬೋರ್ಡಿಗೆ ಬಡ್ಜೆಟ್ ತಯಾರು ಮಾಡಲು ಅಧಿಕಾರ ಇದೆ. ಹೀಗಿದ್ದು ಒಂದು ದೇಶದ ಆಯವ್ಯಯ ಪಟ್ಟಿಯನ್ನು ತಯಾರುಮಾಡುವಾಗ ಅವರು ಎಷ್ಟು ಚಾಕಚಕ್ಯತೆಯಿಂದ ಎಷ್ಟು ಬುದ್ಧಿವಂತಿಕೆಯಿಂದ ಆಯವ್ಯಯವನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡಬೇಕಾಗಿತ್ತೊ ಅದನ್ನುಮಾಡಿಲ್ಲ ಎಂದರೆ ನಿಜವಾಗಿಯೂ ಕೂಡ ಅವರ ಕೈಯಲ್ಲಿ ಈ ದೇಶದ ಅಭ್ಯುದಯವಾಗುವುದಿಲ್ಲ ಎಂದು ಯಾರೇ ಆದರೂ ಕೂಡ ತೀರ್ಮಾನಕ್ಕೆ ಬರಲು ಸಾಧ್ಯವಾಗುತ್ತದೆ. ಸ್ವಾಮಿ, ಯಾರಮೇಲೂ ತೆರಿಗೆ ಇಲ್ಲ; ಯಾರೂ ತೆರಿಗೆ ಕೊಡಬೇಕಾಗಿಲ್ಲ, ಈ ಬಡ್ಜೆಟ್ ನಿಜವಾಗಿಯೂಕೂಡ ಸರ್‌ಪ್ಲಸ್ ಬಡ್ಜೆಟ್ ಎಂದು ಶ್ರೀಮಾನ್ ಮೂಡಲಗಿರಿಗೌಡರು ಮಾತನಾಡುತ್ತಾ, ಶ್ರೀ ಮರಿಯಪ್ಪನವರು ಬಹಳ ವಿಚಕ್ಷಣೆಯಿಂದ, ಬಹಳ ಬುದ್ಧಿವಂತಿಕೆಯಿಂದ ಬಡ್ಜೆಟ್ ತಯಾರು ಮಾಡಿದ್ದಾರೆ ಎಂದು ಅವರನ್ನು ಹೊಗಳಿದರು. ಶ್ರೀಮಾನ್ ಮರಿಯಪ್ಪ ಅವರನ್ನು ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಾ ಇದ್ದೇನೆ. ನೀವು ಈ ಸಭೆಯಲ್ಲಿ ಕೊಟ್ಟಂಥ ಉತ್ತರಗಳು ಈ ಸಭೆಯಲ್ಲಿ ಮಾನ್ಯ ಸದಸ್ಯರು ಹಾಕಿದ ಪ್ರಶ್ನೆಗಳನ್ನು ಲೆಕ್ಕ ಹಾಕಿ ನೋಡಿದರೆ 6,000 ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಕೊಟ್ಟಿದ್ದೀರಿ. 34 ಸಾವಿರ ಹಳ್ಳಿಗಳಿರತಕ್ಕ ದೇಶದಲ್ಲಿ 28 ಸಾವಿರ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳು ಇಲ್ಲ ಎಂದರೆ ಇಷ್ಟು ಮಟ್ಟಿಗೆ ಕುಡಿಯುವ ನೀರನ್ನು ಒದಗಿಸತಕ್ಕ ಪವಿತ್ರವಾದ ಕೆಲಸದಲ್ಲಿ ತಾವು ಈಗ ಏನೊಂದು ಪ್ರೋಗ್ರಾಂ ಹಾಕಿಕೊಂಡು ಯಾವ ಒಂದು ಟಾರ್ಜೆಟ್ ಹಾಕಿಕೊಂಡು ಕೆಲಸಮಾಡಿದ್ದೀರೋ ಈ ಪ್ರಕಾರಮಾಡಿ ಮುಗಿಸುವುದಕ್ಕೆ ಸಾಧ್ಯವೇ? ನಿಮ್ಮ ಕೈಯಲ್ಲಿ ಆಗುತ್ತದೆಯೋ? 12 ವರ್ಷಗಳಿಂದ ನೀವು ಅಧಿಕಾರದಲ್ಲಿದ್ದೀರಿ. 6,000 ಹಳ್ಳಿಗಳಲ್ಲಿಮಾತ್ರ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಿದ್ದೇವೆ ಎಂದರೆ ಬಾಕಿ ಉಳಿದ ಹಳ್ಳಿಗಳಿಗೆ ಯಾವುದಾದರೂ ಒಂದು ಸ್ಕೀಂ ಇಟ್ಟುಕೊಂಡಿದ್ದಾರಾ? ಎಷ್ಟುಮಟ್ಟಿಗೆ ತಮ್ಮಿಂದ ಸಾಧ್ಯವಾಗುತ್ತದೆ ಎಂದರೆ ಅದು ನಮ್ಮಮುಂದೆ ಕಾಣುತ್ತಾ ಇಲ್ಲ. ಶ್ರೀಮಾನ್ ಚನ್ನಬಸಪ್ಪನವರು ಉತ್ತರಕೊಡುತ್ತಾ 34 ಸಾವಿರ ಕೆರೆಗಳಿವೆ. 14 ಸಾವಿರ ಕೆರೆಗಳ ರಿಪೇರಿ ಮಾಡಬೇಕಾಗಿದೆ ಎಂದು ಹೇಳಿದರು. ನಾನಾದರೂ ಶ್ರೀಮಾನ್ ಚನ್ನಬಸಪ್ಪನವರಲ್ಲಿ ಅರಿಕೆಮಾಡುತ್ತೇನೆ ಯಾವ ಯಾವ ಕೆರೆಗಳಿಗೆ ಎಷ್ಟೆಷ್ಟು ಹಣಬೇಕು ಅದನ್ನು ಒದಗಿಸುವುದಕ್ಕೆ ತಾವು ಈ ಬಡ್ಜೆಟ್‌ನಲ್ಲಿ ಯಾವುದಾದರೂ ಒಂದು ಯೋಚನೆ ಇಟ್ಟುಕೊಂಡಿದ್ದೀರಾ ಎಂದರೆ ಏನೂ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—14 ಸಾವಿರ ಕೆರೆಗಳಲ್ಲಿ ಯಾವುದು ಅನಾವಶ್ಯಕವೋ, ರಿಪೇರಿಮಾಡುವುದಕ್ಕೆ ಯೋಗ್ಯವಲ್ಲವೋ ಅವೂ ಕೂಡ ಸೇರಿವೆ ಎಂದು ಹೋದ ಸಾರಿ ಹೇಳಿದೆ. ಯಾವುದನ್ನುಮಾಡಬೇಕು ಎನ್ನುವುದಕ್ಕೆ 2 ಸರ್ಕಲ್‌ಗಳನ್ನು ಏರ್ಪಾಡುಮಾಡಿ ಬ್ಲೂಪ್ರಿಂಟ್‌ಮಾಡುತ್ತ ಇದ್ದಾರೆ.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಬಹಳ ಸಂತೋಷದ ವಿಷಯ. ದೇಶದ ಜನತೆಗೆ ಏನೊಂದು ವಾಗ್ದಾನ ಕೊಟ್ಟಿದ್ದೀರಿ ಅದನ್ನು ಈಡೇರಿಸಿಕೊಳ್ಳತಕ್ಕ ದಿಕ್ಕಿನಲ್ಲಿ ಯಾವುದಾದರೂ ಯೋಚನೆಗಳನ್ನು ಇಟ್ಟುಕೊಂಡು ಕಾರ್ಯಗತಮಾಡಿದ್ದೀರಾ ಎಂದು ಪ್ರಶ್ನೆಹಾಕು

ತ್ತೇನೆ. ಸುಮ್ಮನೆ ಶ್ರೀಮಾನ್ ಮರಿಯಪ್ಪನವರು ಈಗ ನಾವು ಎರಡನೆಯ ಪಂಚವಾರ್ಷಿಕ ಯೋಜನೆಯ ಕೊನೆಯವರ್ಷದಲ್ಲಿದ್ದೇವೆ. ಮೂರನೆ ಪಂಚವಾರ್ಷಿಕ ರೂಪು ರೇಖೆಗಳನ್ನೊಳಗೊಂಡಂಥ ಒಂದು ಪುಸ್ತಕವನ್ನು ನಮ್ಮ ಕೈಯಲ್ಲಿ ಕೊಟ್ಟಿದ್ದಾರೆ. ಇದನ್ನು ಓದಿದರೆ ಅವರು ಮೊದಲನೆ ಪಂಚವಾರ್ಷಿಕ ಯೋಜನೆಮುಗಿದು ಎರಡನೆ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಮಾಡಬೇಕೆಂದು ಹಣ ತೊಟ್ಟಾಗ ಎಷ್ಟು ಪ್ರೈಮರಿ ಸ್ಕೂಲುಗಳು, ಎಷ್ಟು ಸೆಂಕೆಡರಿ ಸ್ಕೂಲುಗಳು, ಎಷ್ಟು ಬೇಸಿಕ್ ಸ್ಕೂಲುಗಳನ್ನು ಹಾಕುತ್ತೇವೆ ಎಂದು ಹೇಳಿದರು. 5 ವರ್ಷದ ಅವಧಿಯಲ್ಲಿ ಎಷ್ಟನ್ನು ಪೂರೈಸಿದ್ದಾರೆ ಎಂದರೆ ಅವರು ಕೊಟ್ಟಿರತಕ್ಕ ಅಂಕಿಅಂಶಗಳ ಪ್ರಕಾರ ಅವರ ಮುನ್ನಡೆ ಪ್ರಗತಿ ಪಥದಲ್ಲಿ ಮೈಸೂರಿನ ದ್ವಿತೀಯ ಯೋಜನೆ ಇಂದಿನ ಮತ್ತು ತೃತಿಯ ಯೋಜನೆಯ ಪರಿಚಯ ಎಂದು ಕೊಟ್ಟಿರುವ ಪುಸ್ತಕದ 8—9ನೆಯ ಪುಟ ತೆಗೆದುನೋಡಿದರೆ, ಎಷ್ಟೆಷ್ಟು ನಿರೀಕ್ಷೆ ಮಾಡಿದ್ದಿರೋ ಅಷ್ಟು ನಿರೀಕ್ಷೆಗೆ ತಕ್ಕಂಥ ಕೆಲಸವನ್ನು ಸರ್ಕಾರದ ಕೈಯಲ್ಲಿ ಕಾರ್ಯಗತಮಾಡುವುದಕ್ಕೆ ಸಾಧ್ಯವಾಗಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ.

ಸ್ವಾಮಿ, ಸರಕಾರದವರು ಹಾಕಿಕೊಂಡಿರತಕ್ಕಂಥ ಕೆರೆಗಳ ಯೋಜನೆಗಳ ಫಲ ಸಾಮಾನ್ಯ ಜನರಿಗೆ ತಲ್ಪಿಸಿದ್ದಾರೆಯೇ? ನಿಜವಾಗಿಯೂ ಜನರು ತೃಪ್ತರಾಗಿಲ್ಲ. ಹೀಗೆ goods delivery ಆಗದೇ ಹೋದರೆ ಶತಮಾನಗಳ ಕಾಲ ಜನರು ನಿಂದೆ ಮಾಡುತ್ತಾರೆ. ನಿಜವಾಗಿಯೂ ಸರಕಾರ ಒಳ್ಳೆ ಕೆಲಸ ಮಾಡಿದೆ ಎಂದು ಸರಕಾರದ ಅಧಿಕಾರಿಗಳು ಮಾತ್ರ ಹೇಳುತ್ತಾರೆ. ಜನರಲ್ಲಿಯ ಅತೃಪ್ತಿ ಹೋಗಲಾಡಿಸದೇಹೋದರೆ ನಿಮ್ಮ ಯೋಜನೆಗಳು ನಿಮ್ಮ ಭಾಷಣಗಳು ಪುಸ್ತಕದಲ್ಲಿಯೇ ಬರೀ ಅಕ್ಷರಗಳಲ್ಲಿಯೇ ಉಳಿಯುತ್ತವೆಯೇ ಹೊರತು ದೇಶಕ್ಕೆ ಉಪಯೋಗವಾಗುವುದಿಲ್ಲ, ಜನಗಳ ಅಸಮಾಧಾನ ಹೋಗಲಾಡಿಸಲು ಏನಾದರೂ ಮಾಡಿದ್ದಾರೆಯೇ ಎಂದರೆ ನಿಜವಾಗಿಯೂ ಇಲ್ಲ, ನಿಮ್ಮ ಮನೆ ಬಾಗಿಲಿನಲ್ಲಿ ಕೆಲಸ ಮಾಡುವವನಿಗೆ 50 ರೂಪಾಯಿ ಸಂಬಳ ಅದೇ ಕೆಲಸ ಮಾಡುವವ ಇನ್ನೊಬ್ಬನಿಗೆ 100 ರೂಪಾಯಿ ಸಂಬಳ, ಅವರಿಗೂ ತಂದೆ ತಾಯಿ ಹೆಂಡತಿ ಮಕ್ಕಳು ಮರಿ ಎಲ್ಲರೂ ಇದ್ದಾರೆ. ಶ್ರೀಮಾನ್ ರಾಜಯ್ಯ ಶೆಟ್ಟಿಯವರು ತಮ್ಮ ಭಾಷಣದಲ್ಲಿ ಹೇಳಿದ ಹಾಗೆ ಒಂದು ಸಾವಿರ ರೂಪಾಯಿ ಸಂಬಳ ಯಾರಿಗೂ ಇರಬಾರದು ಎಂದು ನಾನು ಹೇಳುತ್ತೇನೆ. ದೊಡ್ಡ ದೊಡ್ಡ ಅಧಿಕಾರಿಗಳಿಗೆ IAS, IPS ಅವರಿಗೆ ಎಷ್ಟು ದೊಡ್ಡ ಸಂಬಳ ಕೊಡುತ್ತಿದ್ದೀರಿ. ಅದು All-India pattern ನಮಗೆ ಸಂಬಂಧಪಟ್ಟದ್ದಲ್ಲ ಎಂದು ಈ ಬಗ್ಗೆ ಹೇಳುತ್ತೀರಿ. ಆದರೆ ಗಡಿ ಪ್ರಶ್ನೆಯ ಬಗ್ಗೆ ಒಂದು ಇಂಚು ಪ್ರದೇಶ ಕೊಡುವುದಿಲ್ಲ ಎಂದು ಒಂದು ನಿರ್ಣಯವನ್ನು ಈ ಸಭೆಯಲ್ಲಿ ಪಾಸ್ ಮಾಡಲು ಮಾತ್ರ ನಿಮಗೆ ಶಕ್ತಿಯಿದೆ. ಈ ರೀತಿ ಒಂದು ನಿರ್ಣಯವನ್ನು ಪಾಸ್ ಮಾಡಿ ಕೇಂದ್ರ ಸರಕಾರದ ಮೇಲೆ ಒತ್ತಾಯ ತರುವದಕ್ಕೆ ಶಕ್ತಿ ಇರುವಾಗ ಅದೇ ರೀತಿಯಾಗಿ ಮೈಸೂರು ಸಂಸ್ಥಾನದಲ್ಲಿ ಯಾವ ಅಧಿಕಾರಿಗೂ ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಸಂಬಳವಿರಕೂಡದು ಎಂಬ ಒಂದು ನಿರ್ಣಯವನ್ನ ಈ ಸಭೆಯಲ್ಲಿ ಪಾಸು ಮಾಡಲು ನಿಮಗೆ ಏನು ವಿರೋಧವಿದೆ, ಯಾವ ಅಡ್ಡಿ ಆತಂಕಗಳಿವೆ ಎಂದು ನಾನು ಸರಕಾರವನ್ನು ಕೇಳುತ್ತೇನೆ. IAS, IPS ಈ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಸಾವಿರಾರು ರೂಪಾಯಿ ಸಂಬಳ ಕೊಟ್ಟರೆ ಆಯಿತೇ? ನೀವು ಅವರಿಂದ ಏನನ್ನು ನಿರೀಕ್ಷಣೆ ಮಾಡಿದ್ದೀರಿ? ನಿಮ್ಮ ಈ ಯೋಜನೆಗಳನ್ನು ಬರೆಯುವವರು ಯಾರು? ಕಾರ್ಯಗತ ಮಾಡುವವರು ಯಾರು? ನಿರೀಕ್ಷಿಸಿದಷ್ಟು ಫಲ ದೊರೆಯುತ್ತಿದೆಯೇ? ಯೋಜನೆ ಬರೆಯುವವರು ಬೇರೆ, ಕಾರ್ಯಗತ ಮಾಡುವವರು ಬೇರೆ, ಜನಗಳಿಗೆ ಹಂಚುವವರು ಬೇರೆ ಹೀಗೆ ಇರುವದರಿಂದ ನಿಮ್ಮ ಯೋಜನೆಗಳು ನಿರರ್ಥಕವಾದವುಗಳಾಗಿವೆ. ಹತ್ತು ಯೋಜನೆಗಳನ್ನು ಹಾಕಿದರೂ National Income *per capita* ಒಂದು ಕಾಸು ಸಹ ಜಾಸ್ತಿ ಮಾಡಲು ನಿಮಗೆ ಸಾಧ್ಯವಾಗಿಲ್ಲ ಎಂದು ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—*Per capita* income increase ಆಗಿದೆ ಎಂಬುದು Statisticsದಿಂದ ಗೊತ್ತಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ನಿಮ್ಮ ಅಂಕಿ ಅಂಶಗಳ ಸ್ಟಾಟಿಸ್ಟಿಕ್ಸನ ಜಗ್ಲರೀ ಮಾಡುವುದು ಬೇಡ. ಜನರ ಸಾಲ ಎಷ್ಟು ಹೆಚ್ಚಿದೆ ನೋಡಿ. ಔಷಧೋಪಚಾರ, ವಿದ್ಯಾಭ್ಯಾಸ ಊರಿನಿಂದ ಊರಿಗೆ ಹೋಗುವದಾರಿ, ಕುಡಿಯುವ ನೀರಿನ ಬಾವಿಗಳ ವ್ಯವಸ್ಥೆ, ಕೆರೆ ಕಟ್ಟೆ ಬಾವಿಗಳು ಎಷ್ಟು ಆಗಿವೆ ಎಷ್ಟು ಹಣ ಖರ್ಚು ಮಾಡಿದ್ದೀರಿ ಇದನ್ನು ನೋಡಬೇಕು. ಅತಿ ಮುಖ್ಯವಾಗಿ ಜೀವನಕ್ಕೆ ಬೇಕಾದ ವ್ಯವಸ್ಥೆಯ ಬಗ್ಗೆ ಏನು ಮಾಡಿದ್ದೀರಿ? Inter State seniority Committee ಮಾಡಿದ್ದೀರಿ ಎಂದು ಹೇಳಿದಿರಿ. ಆದರೆ ಇವೊತ್ತಿನ ದಿವಸ ಅಧಿಕಾರಿಗಳಲ್ಲಿ ಅಸಮಾಧಾನವು ಗೌರಿಶಂಕರ ಶಿಖರಕ್ಕೆ ಮುಟ್ಟಿ ಬಿಟ್ಟಿದೆ. ಮುಂಬಯಿ ಕರ್ನಾಟಕ, ಹೈದರಾಬಾದು ಕರ್ನಾಟಕ, ಮದ್ರಾಸ ಕರ್ನಾಟಕ, ಕೊಡಗು, ಹಳೇ ಮೈಸೂರು ಇವುಗಳಲ್ಲಿರತಕ್ಕ ಸಂಬಳ ವ್ಯತ್ಯಾಸ ಎಷ್ಟಿದೆ ಎಂಬುದನ್ನು ಲೆಕ್ಕಾಹಾಕಿದ್ದೀರಾ? ಈ disparity ಯಾವಾಗ ಹೋಗಲಾಡಿಸುತ್ತೀರಿ? ಒಂದು ಕಡೆ 500 ರೂಪಾಯಿ ಸಂಬಳ, ಒಂದು ಸಾವಿರ ರೂಪಾಯಿ ಸಂಬಳ, ಇನ್ನೊಂದು ಕಡೆ 3 ಸಾವಿರ 4 ಸಾವಿರರೂಪಾಯಿ ಸಂಬಳ ಕೊಡುವುದು ಯಾವ ನ್ಯಾಯ? ಬಡ ಜನರಿಗೆ ತೆರಿಗೆ ತೆಗೆದುಕೊಂಡು ಹಣ ಸುಲಿಗೆ ಮಾಡಿ ಈ ರೀತಿ ಸಂಬಳ ಕೊಡುವುದೇ? ಆದುದರಿಂದ ಈ ನಿಮ್ಮ ಅಂಕಿ ಅಂಶಗಳ ಜಗ್ಲರಿ ಏನೇನು ಪ್ರಯೋಜನವಿಲ್ಲ. ಒಂದು ಸಾವಿರ ರೂಪಾಯಿಗಿಂತ ಹೆಚ್ಚಿಗೆ ಯಾರಿಗೂ ಸಂಬಳವಿರಕೂಡದು ಎಂದು ಒಂದು ರೆಜಲ್ಯೂಷನ್ ಮಾಡಿ ನಿಮಗೆ ಇದನ್ನು ಮಾಡುವುದಕ್ಕೆ ಧೈರ್ಯವಿದೆಯೇ? ಸದಸ್ಯರುಗಳ ಮಂತ್ರಿಗಳ ಸಂಬಳ ಬೇಕಾದರೆ ಹೆಚ್ಚು ಕಡಿಮೆ ನೀವು ಮಾಡಬಹುದು. ಆದರೆ ಈ IAS, IPS ಅಧಿಕಾರಿಗಳ ಸಂಬಳದಲ್ಲಿ ಒಂದು ರೂಪಾಯಿಯಷ್ಟು ಸಂಬಳ ಕಡಿಮೆ ಮಾಡುವುದಕ್ಕೆ ನಿಮಗೆ ಧೈರ್ಯವಿಲ್ಲ, ಅಧಿಕಾರವಿಲ್ಲ, ದೇಶದ ಉತ್ಪತ್ತಿಯನ್ನು ಬರಿಯ ದೊಡ್ಡ ದೊಡ್ಡ ಅಧಿಕಾರಿಗಳ ಸಂಬಳಕ್ಕಾಗಿ ವ್ಯಯ ಮಾಡುವುದೇ? NGOಗಳಿಗೆ ಮಾತ್ರ ಬರಿಯ lip sympathy ತೋರಿಸುತ್ತಿದ್ದೀರಿ. Taluk Gumasta, Revenue Inspectors, Police Constables, BDOs, village level workers, lady social organisers ಇವರಿಗೆಲ್ಲಾ ಕೈತುಂಬಾ ಹಣ ಸಂಬಳ ಕೊಟ್ಟರೆ ಹಳ್ಳಿಗಳಲ್ಲಿ ಕೂತು ಚೆನ್ನಾಗಿ ಕೆಲಸ ಮಾಡುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಕೈತುಂಬಾ ಅಂದರೆ ಎಷ್ಟು?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅತಿ ಕಡಮೆ ಸಂಬಳ ಅಂದರೆ ಒಂದು ನೂರು ರೂಪಾಯಿಯನ್ನಾದರೂ ಕೊಡಬೇಡವೇ? ಸಾಮಾನ್ಯವಾದ ಜೀವನ ಮಾಡುವ ದಕ್ಕೆ ಸಾಕಾಗುವಷ್ಟು ಕೊಡುತ್ತಿರುವಿರಾ? ಈ ಸಭೆಯಲ್ಲಿ ವ್ಯಾಖ್ಯಾನ ಮಾಡಿದ್ದೀರಾ? ಯಾರಿಗೂ ನೂರು ರೂಪಾಯಿಗಿಂತ ಕಡಮೆ ಸಂಬಳವಿರಬಾರದು ಎಂದು ನಾವು ಹೇಳಿಲ್ಲವೆ? ಜನರ ಮೇಲೆ ಟ್ಯಾಕ್ಸ್ ಹಾಕಿ ಈ ಬಿಳಿ ಆನೆಗಳನ್ನು ಸಾಕುತ್ತಿರುವಿರಿ. ದೇಶ ಅಭ್ಯುದಯಕ್ಕೆ ಬರತಕ್ಕ ಕೆಲಸ ಮಾಡಿದರೆ ಟ್ಯಾಕ್ಸ್ ಹಾಕಬಹುದು, ಹಾಗೆ ಮಾಡದೆ ಇದ್ದರೆ ಏತಕ್ಕೆ ಟ್ಯಾಕ್ಸ್ ಹಾಕಬೇಕು? ಕಳೆದ ಹನ್ನೆರಡು ವರ್ಷ ರಾಜ್ಯಭಾರ ನಡೆಸಿ ನೀವು ಏನು ಮಾಡಿದ್ದೀರಿ? ಈ ವಿಧಾನ ಸೌಧ ಒಂದನ್ನು ಕಟ್ಟಿಸಿದ್ದೀರಿ. ಶ್ರೀ ಚನ್ನಬಸಪ್ಪನವರು ತಾಜ ಮಹಲ್ ಕಟ್ಟಿಸಿದ ಹಾಗೆ ಶರಾವತಿ ಯೋಜನೆಯನ್ನು ಕಟ್ಟಿಸುತ್ತಿರುವರು. ಆದರೆ ದೇಶದ ಅಭ್ಯುದಯ ಎಷ್ಟರಮಟ್ಟಿಗೆ ಆಗಿದೆ ಎನ್ನುವುದನ್ನು ನೋಡಿದ್ದೀರಾ? ನಾವು ಬಹಳ ಕಠಿಣವಾಗಿ ಮಾತನಾಡಬೇಕಾಗಿದೆ. ನಿಮ್ಮ ಹೃದಯಕ್ಕೆ ಎಲ್ಲಿ ನೋವಾಗುತ್ತದೆಯೋ, ನಿಮ್ಮ ಆರೋಗ್ಯಕ್ಕೆ ಎಲ್ಲಿ ಧಕ್ಕೆ ಬರುತ್ತದೆಯೋ ಎಂಬ ಅಂಜಿಕೆಯಿಂದ ಮೃದುವಾಗಿ ಮಾತನಾಡುತ್ತೇನೆ. Because this is a very poor budget in the hands of a Minister who has got very poor health. Finance Departmentನ Deputy Secretaryಯವರಾದ ಶ್ರೀ ಭರತ ಅವರು ತಯಾರಿಸಿದ ಬಜೆಟ್ಟನಲ್ಲಿ ಅಲ್ಲೊಂದು ಇಲ್ಲೊಂದು ಹೆಚ್ಚುಕಡಮೆ ಮಾಡಿ ಬಿಟ್ಟು ಇದು ನನ್ನ ಬಜೆಟ್ಟು ಎಂದು ಮರಿಯಪ್ಪನವರು ಹೇಳುತ್ತಿದ್ದಾರೆ. I do not call this Finance Minister's Budget. It is a Budget of the Deputy Secretary Sri Bharat. ನಾನು ಈ ರೀತಿ ಹೇಳುತ್ತಿರುವುದು ಹರಿಕಥೆ ಮಾಡುತ್ತಾ ಇರುವದಲ್ಲ. ಇದೇನು ಹರಿಕಥೆ ಎಂದು ತಿಳಿದುಕೊಂಡಿದ್ದೀರಾ?

ಶ್ರೀ ಟಿ. ಮರಿಯಪ್ಪ.—ನೀವು ಹರಿಕಥೆ ಮಾಡುತ್ತಿರುವಿರಿ ಎಂದು ನಿಮ್ಮ ಬಾಯಿಂದಲೇ ಬರುತ್ತಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸುಮ್ಮನೆ ನನ್ನನ್ನು ಕೆಣಕಬೇಡಿ. ನಿಮ್ಮ ಆಡಳಿತದಲ್ಲಿ ಏನು ನಡೆಯುತ್ತಾಯಿದೆ ಎನ್ನುವುದು ನನಗೆ ಗೊತ್ತಿದೆ.

ನಮಗೆ ಹಣ ಬೇಕು ಎಂದು ಹೇಳಿದರು. ಹಾಗೆ ಹೇಳುವಾಗ ಅದನ್ನು ಬರಮಾಡಿಕೊಳ್ಳಲು ಸರಿಯಾದ ಮಾರ್ಗವನ್ನನುಸರಿಸಬೇಡವೇ? ಎಷ್ಟೋ ಶ್ರೀಮಂತರಿಗೆ ಸಾಲ ಕೊಟ್ಟಿದ್ದೀರಿ, ಅದೇಕೆ ವಾಪಸು ಬಂದಿಲ್ಲ, ಎಷ್ಟು ಬಂದಿದೆ ಎಂದು ಕೇಳಿದರೆ ಅಂಕಿ ಅಂಶವಿಲ್ಲವೆಂದು ಹೇಳುತ್ತೀರಿ. ಸರ್ಕಾರಿ ಖಜಾನೆಯಿಂದ ಕೊಟ್ಟ ಹಣ 1947ರಿಂದ 13 ವರ್ಷಗಳಿಂದ ಏಕೆ ವಸೂಲು ಮಾಡಿಲ್ಲ ಅಂದರೆ ಅಂಕಿ ಅಂಶ ಸಿಕ್ಕುವುದಿಲ್ಲವೆಂದು ಹೇಳಿದರೆ, ನಿಮ್ಮ ಕೈಲಿ ಹಣಕಾಸಿನ ಪರಿಸ್ಥಿತಿ ಸುಭದ್ರವಾಗಿದೆ ಎಂದು ಅರ್ಥವಾಗುತ್ತದೆಯೇ?

4-30 P.M.

ಶ್ರೀ ಮಾರ್ಕ ರಾಚಯ್ಯನವರು ಎಷ್ಟೋ ಡೆವಲಪ್ ಮೆಂಟ್ ಕೆಲಸ ಮಾಡಿದ್ದೇವೆಂದು ಹೇಳಿದರು. ವ್ಯವಸಾಯ ಮತ್ತು ಅನಿಮಲ್ ಹಸ್ಬೆಂಡ್ರಿ ಇಲಾಖೆಗಳಿಗೆ ಕೊಟ್ಟಿರುವ ಹಣದಿಂದ ಎರಡನೆಯ ಪಂಚವಾರ್ಷಿಕ ಯೋಜನೆ ಮುಗಿಯುವವರೆಗೆ ಎಷ್ಟು ಲಕ್ಷ ಟನ್ ಆಹಾರ ಬೆಳೆದಿದ್ದೀರೆಂಬುದನ್ನು ಹೇಳುತ್ತೀರಾ? ಪೋಲೀಸ್ ಖಾತೆಗೆ 5 ಕೋಟಿ ರೂಪಾಯಿಗಳನ್ನು ಕೊಟ್ಟಿರುವಾಗ ವ್ಯವಸಾಯದ ಖಾತೆಗೆ 1½ ಕೋಟಿ ಸಾಕೆ? ನಾಟಿ ಹಾಕುವಾಗ ಬಿತ್ತನೆ ಬೀಜ ಕೇಳಿದರೆ ಕಾಲವಾದ ಮೇಲೆ ಕೊಡುತ್ತೀರಿ. ಗಾಡಿ ಪಟ್ಟೆಯನ್ನು ಹುಲ್ಲು ಸೊಪ್ಪು ಎಲ್ಲಾ ಮನೆಗೆ ಬಂದಮೇಲೆ ಕೊಡುತ್ತೀರಿ. ದಪ್ತೂರಿ ಗಿಡಕ್ಕೆ ಏಣಿ ಹಾಕಿ ಕೊಡಲಿ ತೆಗೆದುಕೊಂಡು ಕಡಿಯಬೇಕೆಂದು ಹೇಳುವಂಥ ಅಗ್ರಿಕಲ್ಚರಲ್ ಇನ್ಸ್‌ಪೆಕ್ಟರುಗಳಿದ್ದಾರೆ. ಹೀಗಿರುವಾಗ ವ್ಯವಸಾಯ ಎಷ್ಟು ಉದ್ಧಾರವಾದೀತು! ಸರ್ಕಾರ ಸ್ಥಾಪಿಸಿರುವ ಕೋ-ಆಪರೇಟಿವ್ ಫಾರಂಗಳಲ್ಲಿ ಎಷ್ಟು ಪರ್ಸೆಂಟೇಜ್ ಹೆಚ್ಚು ಬೆಳೆದಿದ್ದೀರಿ ಎಂಬುದನ್ನು ಹೇಳಿ ಸರ್ಕಾರದವರು ಬೆಳೆದಿರುವ ಬೆಳೆಗೂ ಅವರು ಹೇಳುವ ಮಾತಿಗೂ ಎಷ್ಟೋ ವಿರೋಧವಿದೆ. ಇಂಥ ಕೆಲಸ ಮಾಡಬೇಡಿ. ಹೆಚ್ಚು ಆಹಾರ ಬೆಳೆಯಬೇಕೆಂದು ಹೇಳುತ್ತಿರುವಾಗ ಈಗ ಬೆಳೆಯುವುದು 7·8 ತಿಂಗಳಿಗೂ ಸಹ ಸಾಲುವುದಿಲ್ಲ. ಆಹಾರದ ಬೆಳೆ ಹೆಚ್ಚಬೇಕೆನ್ನುವಾಗ ಗೊಬ್ಬರ ಸರಿಯಾಗಿ ಕೊಡುತ್ತಿಲ್ಲ, ಸಬ್ಸಿಡಿ ಜಾಸ್ತಿ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತೀರಿ; ಬಜೆಟ್ಟಿನಲ್ಲಿ ಪ್ರಾವಿಷನ್ ಇಲ್ಲ, I cannot find resources ಎಂದು ಹೇಳುತ್ತೀರಿ. ರೈತನ ಅಭಿವೃದ್ಧಿಗೆ, ವ್ಯವಸಾಯದ ಅಭಿವೃದ್ಧಿಗೆ ಎಷ್ಟು ಹಣ ಕೊಟ್ಟಿದ್ದೀರಿ ಎಂಬುದು ನಿಜವಾಗಿಯೂ ದುಃಖಕರವಾದ ವಿಚಾರ.

"ಇದನ್ನು ಓದಿ, ಗೊತ್ತಾಗುತ್ತದೆ" ಎಂದು ಶ್ರೀಮಾನ್ ಮರಿಯಪ್ಪನವರು ಹೇಳಿದರು. ನಮ್ಮಲ್ಲಿ ಓದುವುದಕ್ಕೆ ನೀತಿಚಿಂತಾಮಣಿ, ಪದ್ಯ ಸಂಗ್ರಹ ಕೂಡ ಇದೆ. ರಾಷ್ಟ್ರಕವಿ ಗೋವಿಂದ ಪೈರವರು ಒಂದು ಪದ್ಯವನ್ನು ಈ ರೀತಿ ಬರೆದಿದ್ದಾರೆ:—

"ರಾಹುವನು ಪಾಲಿಸಿ ಕೇತುವನು ತಂದು..." ಅಧಿಕಾರದಲ್ಲಿರುವ ಸರ್ಕಾರ ಮತ್ತು ಪಕ್ಷ ತಮ್ಮ ಕೈಗೆ ಕೊಟ್ಟ ಹಣ ಮತ್ತು ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಎಷ್ಟರಮಟ್ಟಿಗೆ ಹಣವನ್ನು ಪೋಲುಮಾಡುತ್ತಿವೆ, ಎಷ್ಟು ಅಪವ್ಯಯ ಮಾಡುತ್ತಿವೆ, ಜನರ ಮೇಲೆ ಎಷ್ಟು ಹೊರೆ ಹೇರಿವೆ ಎಂದು ಇಂಥ ಕವಿ ಬರೆದಿರುವುದಕ್ಕೆ ಬೆಲೆ ಕೊಡುವುದಿಲ್ಲವೆ?

ಶ್ರೀಮಾನ್ ರಾಚಯ್ಯನವರು ಬಹಳವಾಗಿ ಅಭಿವೃದ್ಧಿ ಕೆಲಸ ಮಾಡಿದ್ದೇವೆಂದು ಹೇಳಿದರು. ವೆಟರ್ನರಿ ಇಲಾಖೆಯನ್ನು ತೆಗೆದುಕೊಳ್ಳಿ. ಏನು ಮಾಡುತ್ತಿದೆ? ನಿಮ್ಮ ಕೈಲಿ ಸಾಕಷ್ಟು ಉತ್ತಮವಾದ ಕೆಲಸವಾಡಲು ಸಾಧ್ಯವಾಗುವುದಿಲ್ಲ. ಹತ್ತು ವರ್ಷಗಳಿಂದ ಏನೂ ಆಗಿಲ್ಲ. ಪ್ಯಾಲೇಸ್ ಟ್ರಬಲ್ ನಿಂತರೆ ಸಾಧನೆಯಾಗಬಹುದೋ ಏನೋ. Quarrelling among themselves for power ನಿಲ್ಲಬೇಕು. 5ನೆಯ ಪಂಚವಾರ್ಷಿಕ ಯೋಜನೆಯ ವೇಳೆಗೆ ಗುರಿಮುಟ್ಟಲು ಸಾಧ್ಯವಾಗಬಹುದು. ಇದರ ಮಧ್ಯೆ ಗಲಾಟೆ ಪ್ರಾರಂಭವಾಗಿದೆ. ಶ್ರೀಮಾನ್ ಮರಿಯಪ್ಪನವರನ್ನು ಕಿತ್ತುಹಾಕಬೇಕೆಂದು ಶ್ರೀಮತಿ ರಶ್ಮಮ್ಮ ಮಾಧವರಾಯರು ನಿನ್ನೆ ಹೇಳಿದರು, ನೀವು ದೇಶಕ್ಕೆ ಕಂಟಕಪ್ರಾಯರೆಂದು ಹೇಳಿದರು. ನಿಮ್ಮ ಕಡೆಯವರಿಗೇ ನಿಮ್ಮಲ್ಲಿ ನಂಬಿಕೆಯಿಲ್ಲವೆಂಬ ಅಭಿಪ್ರಾಯವಿದ್ದರೆ ನಾವೇನು ಹೇಳಬೇಕು? ದೇಶದಲ್ಲಿ ಒಳ್ಳೆಯ ಕೆಲಸ ಮಾಡಿಲ್ಲವೆಂದು ನಿಮ್ಮವರೇ ಹೇಳಿದ ಮೇಲೆ ನಾವೇನು ಹೇಳೋಣ! ಸ್ವಲ್ಪ ಸಾವಧಾನದಿಂದ ನಾವು ಹೇಳುವುದನ್ನು ಕೇಳಿ ಇಂಪ್ಲಿಮೆಂಟ್ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ರೆಗ್ಯುಲೇಟೆಡ್ ಮಾರ್ಕೆಟ್ ಮತ್ತು ಸೇಲ್ಸ್ ಟ್ಯಾಕ್ಸ್ ಇಲಾಖೆ ಎರಡಕ್ಕೂ ಕೋ ಆರ್ಡಿನೇಷನ್ಗೆ

